ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮೇ 3 ಶನಿವಾರ 2025

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23 ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695 ಸುದ್ದಿ ಜಾಹೀರಾತಿಗಾಗಿ– ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

46

ಸಂಪುಟ: 46 | ಸಂಚಿಕೆ: 17

ಪುಟಗಳು: 12


₹4

ಸುದ್ದಿ, ಫೋಟೋಗೆ: news@mysurumithra.com

ಜಾಹೀರಾತು: ad@mysurumithra.com,

website: www.mysurumithra.com

ಮಾಜಿ ಮೇಯರ್ ಎನ್.ಪ್ರಕಾಶ್ ನಿಧನ



ಮೈಸೂರು, ಮೇ 2– ಬೋಗಾದಿಯ ರಾಕ್‌ವುಡ್ ಲೇಔಟ್‌ನಲ್ಲಿ ವಾಸವಾಗಿದ್ದ ಮಾಜಿ ಮೇಯರ್ ಎನ್.ಪ್ರಕಾಶ್ (79) ವಯೋಸಹಜ ಅನಾರೋಗ್ಯದಿಂದ ಶುಕ್ರವಾರ ಬೆಳಗ್ಗೆ ನಿಧನರಾದರು.

ಖೋ ಖೋ ಕ್ರೀಡಾ ಪಟುವಾಗಿದ್ದ ಇವರು ರಾಷ್ಟ್ರೀಯ ಮಟ್ಟದ ಏಕಲವ್ಯ ಖೋ ಖೋ ಪ್ರಶಸ್ತಿಗೆ ಭಾಜನರಾಗಿದ್ದರು. ಇವರು ಹಾಲಿ ಅಮೆಚೂರ್ ಖೋ–ಖೋ ಫೆಡರೇಷನ್‌ನ ಅಧ್ಯಕ್ಷರಾಗಿದ್ದರು. ಮೈಸೂರಿನಲ್ಲಿ ರಾಜ್ಯಮಟ್ಟದ ಖೋ–ಖೋ ಕ್ರೀಡಾ ಸ್ಪರ್ಧೆಗಳನ್ನು ಏರ್ಪಡಿಸಿ ಕ್ರೀಡಾಪಟುಗಳಿಗೆ ಉತ್ತೇಜನ ನೀಡಿದ್ದರು.

ಮೃತರು ಪತ್ನಿ, ಇಬ್ಬರು ಪುತ್ರರು ಹಾಗೂ ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು–ಬಳಗ ಆಗಲಿದ್ದಾರೆ. ಅಂತ್ಯಕ್ರಿಯೆ ಶುಕ್ರವಾರ ಸಂಜೆ ಚಾಮುಂಡಿ ಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಹಾಸನ ಮಿತ್ರ

ಸಕಲೇಶಪುರ ಬಳಿ ಒಂಟಿ ಸಲಗ ಸೆರೆ



ಸಕಲೇಶಪುರ, ಮೇ.2– ಇತ್ತೀಚೆಗೆ ತಾಲೂಕಿನ ಬೈಕೆರೆ ಗ್ರಾಮದಲ್ಲಿ ರೈತ ಷಣ್ಮುಖ ಅವರ ಮೇಲೆ ದಾಳಿ ಮಾಡಿ ಕೊಂದು ಹಾಕಿದ್ದ ಕಾಡಾನೆಯನ್ನು ಗುರುವಾರ ತಾಲೂಕಿನ ಹಲಸುಲಿಗೆ ಗ್ರಾಮದ ಮಾಗಡಿ ಎಸ್ಟೇಟ್‌ನಲ್ಲಿ ಅರಣ್ಯ ಅಧಿಕಾರಿಗಳು ಸೆರೆ ಹಿಡಿದಿದ್ದಾರೆ.

ಅರಣ್ಯ ಇಲಾಖೆ ವೈದ್ಯರಾದ ಡಾ. ಮುಜೀಬ್ ಮತ್ತು ಡಾ.ವಾಸಿಂ ಅವರು ಕಾಡಾನೆಗೆ ಅರಿವಳಿಕೆ ಚುಚ್ಚುಮದ್ದು ನೀಡಿದರು. ಇಂಜೆಕ್ಷನ್ ಪಡೆದ ಕೂಡಲೇ ಗಂಡಾನೆ ಓಡಲಾರಂಭಿಸಿತು. ಆದರೆ, ಸ್ವಲ್ಪ ದೂರ ಓಡಿದ ನಂತರ ಪ್ರಜ್ಞೆ ತಪ್ಪಿ ಬಿದ್ದಿತು.

ವೈದ್ಯರು ಕಾಡಾನೆಗೆ ನೀರು ಹಾಕಿ ಆರೈಕೆ ಮಾಡಿದ ನಂತರ, ಕಾಲಿಗೆ ಹಗ್ಗ ಕಟ್ಟಿ ರಿವರ್ಸಲ್ ಇಂಜೆಕ್ಷನ್ ನೀಡಿದರು. ನಂತರ ಆರು ಸಾಕಾನೆಗಳ ಸಹಾಯದಿಂದ ಕಾಡಾನೆಯನ್ನು ರಸ್ತೆಗೆ ಎಳೆದು ತರಲಾಯಿತು. ಹಲವು ದಿನಗಳಿಂದ ಹಲಸುಲಿಗೆ, ಮಾಗಡಿ, ಬೈಕೆರೆ, ನಾಗರ ಸುತ್ತಲಿನ ಗ್ರಾಮಗಳಲ್ಲಿ ಈ ಒಂಟಿ ಸಲಗ ಅಡ್ಡಾಡುತ್ತಾ, ಜೀವ ಹಾಗೂ ಬೆಳೆ ಹಾನಿ ಮಾಡಿತ್ತು. ಹೆಬ್ಬನಹಳ್ಳಿ ಗ್ರಾಮದ ರಾಜು ಎಂಬುವವರ ಮೇಲೆ ದಾಳಿ ನಡೆಸಿ ಗಂಭೀರವಾಗಿ ಗಾಯಗೊಳಿಸಿತ್ತು. ಸಕಲೇಶಪುರ ಭಾಗದ ಕಾಫಿ ಬೆಳೆಗಾರರು ಮತ್ತು ಕಾರ್ಮಿಕರಲ್ಲಿ ಭಯ ಹುಟ್ಟಿಸಿತ್ತು.


ಸಿಸಿಎಫ್ ಏಡುಕೊಂಡಲು, ಡಿಎಫ್‌ಒ ಸೌರಭ್‌ಕುಮಾರ್, ಇಟಿಎಫ್‌ನ ಸಿಸಿಎಫ್ ಮಹದೇವ್, ಎಸಿಎಫ್ ಮಧುಸೂದನ್, ವಲಯ ಅರಣ್ಯ ಅಧಿಕಾರಿ ಎಚ್.ಆರ್. ಹೇಮಂತ್ ಕುಮಾರ್ ಹಾಗೂ ಇತರರು ಇದ್ದರು.

ಯತ್ನಾಳ್ ಸವಾಲಿಗೆ ಸೆಟೆದು ನಿಂತು

ಶಾಸಕ ಸ್ಥಾನಕ್ಕೆ ಸಚಿವ ಶಿವಾನಂದ ಪಾಟೀಲ್ ರಾಜೀನಾಮೆ

ರಾಜೀನಾಮೆ ಅಂಗೀಕಾರ ನಿರಾಕರಿಸಿದ ಸ್ಪೀಕರ್

ಬೆಂಗಳೂರು, ಮೇ 2(ಕೆಎಂಶಿ)– ಜವಳಿ ಮತ್ತು ಕೃಷಿ ಮಾರುಕಟ್ಟೆ ಸಚಿವ ಶಿವಾನಂದ ಪಾಟೀಲ್ ತಮ್ಮ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ.



ಪಾಟೀಲ್



ಯತ್ನಾಳ್

ವಿಧಾನಸಭಾಧ್ಯಕ್ಷ ಯು.ಟಿ.ಖಾದರ್ ಅವರನ್ನು ಇಂದು ವಿಧಾನಸೌಧ'ದ ಕಚೇರಿಯಲ್ಲಿ ಭೇಟಿ ಮಾಡಿ ರಾಜೀ ನಾಮೆ ಪತ್ರ ಸಲ್ಲಿಸಿದರು. ರಾಜೀನಾಮೆ ಅಂಗೀಕಾರಕ್ಕೆ ಮುನ್ನ ಕೆಲವು ಷರತ್ತು ಗಳನ್ನು ಸಭಾಧ್ಯಕ್ಷರ ಮುಂದಿಟ್ಟಿದ್ದಾರೆ.

ಬಿಜೆಪಿಯ ಉಚ್ಛಾಟಿತ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಶಾಸಕ ಸ್ಥಾನಕ್ಕೆ ನೀಡುವ ರಾಜೀನಾಮೆ ಅಂಗೀಕಾರದ ನಂತರ ತಮ್ಮ ರಾಜೀನಾಮೆ ಅಂಗೀಕರಿಸುವಂತೆ ಮನವಿ ಮಾಡಿದ್ದಾರೆ.

ಸಭಾಧ್ಯಕ್ಷರಿಗೆ ರಾಜೀನಾಮೆ ಪತ್ರ ನೀಡಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಶಿವಾನಂದ ಪಾಟೀಲ್, ನನಗೆ ಯತ್ನಾಳ್ ಹಾಕಿರುವ ಸವಾಲು ಸ್ವೀಕರಿಸಿ ವಿಧಾನಸಭಾ ಸದಸ್ಯತ್ವಕ್ಕೆ ರಾಜೀನಾಮೆ ನೀಡಿದ್ದೇನೆ.

ಪಕ್ಷ ಮತ್ತು ಸರ್ಕಾರಕ್ಕೂ ನನ್ನ ರಾಜೀನಾಮೆಗೂ ಸಂಬಂಧವಿಲ್ಲ, ಶಾಸಕ ಸ್ಥಾನಕ್ಕೆ ನೀಡಿದ ರಾಜೀನಾಮೆ ಅಂಗೀಕಾರದಿಂದ ಮಂತ್ರಿ ಸ್ಥಾನವೂ ಹೋಗುತ್ತದೆ.

ನಾನು ತೆಗೆದುಕೊಂಡ ತೀರ್ಮಾನವನ್ನು, ಮುಖ್ಯಮಂತ್ರಿ, ಕೆಪಿಸಿಸಿ ಅಧ್ಯಕ್ಷರ ಗಮನಕ್ಕೂ ತಂದಿಲ್ಲ, ಇದು ನನ್ನ ವೈಯಕ್ತಿಕ ವಿಚಾರ ಎಂದು ಸ್ಪಷ್ಟಪಡಿಸಿದ್ದರು.

ಈ ಮಧ್ಯೆ ಇದಕ್ಕೆ ಪ್ರತಿಕ್ರಿಯಿಸಿರುವ ಬಸನಗೌಡ ಪಾಟೀಲ್ ಯತ್ನಾಳ್, ಇದು ಬರೀ ನಾಟಕ. ರಾಜೀನಾಮೆ ನೀಡುವವರು ಒಂದೆರಡು ಸಾಲಿನಲ್ಲಿ ನೀಡುತ್ತಾರೆ. ಆದರೆ ಈತ ಅನಗತ್ಯವಾದ ವಿಚಾರಗಳನ್ನು ಪ್ರಸ್ತಾಪಿಸಿರುವುದು ಬರೀ ನಾಟಕದ ರಾಜೀನಾಮೆ ಎಂದು ವ್ಯಂಗ್ಯವಾಡಿದ್ದಾರೆ.

ರಾಜೀನಾಮೆ ಅಂಗೀಕರಿಸಲ್ಲ: ಈ ಮಧ್ಯೆ ಸಭಾಧ್ಯಕ್ಷ ಯು.ಟಿ.ಖಾದರ್ ಸುದ್ದಿಗಾರರೊಂದಿಗೆ ಮಾತನಾಡಿ, ಶಿವಾನಂದ ಪಾಟೀಲ್ ರಾಜೀನಾಮೆ ನೀಡಿದ್ದಾರೆ, ಅವರಿಗೆ ಇನ್ನೊಬ್ಬ ಶಾಸಕರು ವೈಯಕ್ತಿಕ ಸವಾಲು ಹಾಕಿದ್ದಾರೆ. ಆ ಸವಾಲು ಸ್ವೀಕಾರ ಮಾಡಿ ರಾಜೀನಾಮೆ ನೀಡಿದ್ದಾರೆ, ಸವಾಲು ಹಾಕಿದವರು ರಾಜೀನಾಮೆ ನೀಡಿದ ಬಳಿಕ ನನ್ನ ರಾಜೀನಾಮೆ ಅಂಗೀಕರಿಸಿ ಎಂದಿದ್ದಾರೆ. ಅವರ ಆತ್ಮಗೌರವ ಕಾರಣಕ್ಕೆ ರಾಜೀನಾಮೆ ನೀಡಿದ್ದಾರೆ. ಆದರೆ, ನಿಯಮಾವಳಿ ಪ್ರಕಾರ ಅವರ ರಾಜೀನಾಮೆ ಅಂಗೀಕರಿಸಲು ಬರುವುದಿಲ್ಲ ಎಂದು ಸ್ಪಷ್ಟಪಡಿಸಿದರು.

ನಿಧನ

ನೆಲ್ಲಮಕ್ಕಡ ತುಳಸಿ ಬೋಪಣ್ಣ



ಮೈಸೂರು, ಮೇ 2– ಮೈಸೂರಿನ ಎನ್‌ಆರ್ ಮೊಹಲ್ಲಾ ನಿವಾಸಿ ದಿವಂಗತ ಬೋಪಣ್ಣ ಅವರ ಪತ್ನಿ ನೆಲ್ಲಮಕ್ಕಡ ತುಳಸಿ ಬೋಪಣ್ಣ(78) ಅವರು ಇಂದು (ಮೇ 2) ಸಂಜೆ ನಿಧನರಾದರು. ಮೃತರು ಪುತ್ರ ಲೋಕೇಶ್, ಪುತ್ರಿಯರಾದ ಸುಮಿತಾ ಮಾದಪ್ಪ ಕವಿತಾ ಹಾಗೂ ಅಪಾರ ಬಂಧುವರ್ಗವನ್ನು ಅಗಲಿದ್ದು, ಅಂತ್ಯಕ್ರಿಯೆ ನಾಳೆ (ಮೇ 3) ಮಧ್ಯಾಹ್ನ 2 ಗಂಟೆಗೆ ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ರುದ್ರಭೂಮಿಯಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಶ್ರೀಮತಿ ಪುಟ್ಟಮಾದಮ್ಮ



ಮೈಸೂರು, ಮೇ 2– ಮೈಸೂರಿನ ಗಾಂಧಿನಗರದ ಸಿದ್ದಪ್ಪಾಜಿ ದೇವಸ್ಥಾನದ ರಸ್ತೆ ನಿವಾಸಿ ಹಾಗೂ ಯಜಮಾನ್ ಲೇಟ್ ಪುಟ್ಟರಂಗಯ್ಯ (ಡಿ.ಆರ್ ಕುಟುಂಬ) ಅವರ ಪತ್ನಿ ಶ್ರೀಮತಿ ಪುಟ್ಟಮಾದಮ್ಮ (92) ವಯೋಸಹಜವಾಗಿ ಗುರುವಾರ ಮಧ್ಯರಾತ್ರಿ ನಿಧನರಾದರು. ಮೃತರು ಮಕ್ಕಳಾದ ವಿಜಯಕುಮಾರಿ, ಚಂದ್ರಕುಮಾರಿ, ಜಯಶ್ರೀ, ಲಕ್ಷ್ಮೀನಾರಾಯಣ, ಅರುಂಧತಿ, ಪ್ರಸನ್ನ ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಗುರುವಾರ ಮಧ್ಯಾಹ್ನ ಮೈಸೂರಿನ ಗಾಂಧಿನಗರದ ಆದಿಜಾಂಬವ ರುದ್ರಭೂಮಿಯಲ್ಲಿ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ರಾಮಯ್ಯ



ಮೈಸೂರು, ಮೇ 2– ಮೈಸೂರು ವಿವಿ ಮೊಹಲ್ಲಾ ನಿವಾಸಿ ಹಾಗೂ ಮಾಜಿ ಜಾವ ಕಾರ್ಖಾನೆ ನೌಕರರು, ಮುಡಾ ಡೀಡ್ ರೈಟರ್ ರಾಮಯ್ಯ(78) ಅವರು ಇಂದು ಸಂಜೆ ನಿಧನರಾದರು. ಇವರು ಇಬ್ಬರು ಪುತ್ರರು ಹಾಗೂ ಅಪಾರ ಬಂಧು ವರ್ಗ ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ನಾಳೆ (ಶನಿವಾರ) ನಂಜನಗೂಡು ಹಾಡ್ಯ ಗ್ರಾಮದ ಇವರ ಜಮೀನಿನಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರಲ್ಲಿ ಶಂಕರಾಚಾರ್ಯರ ಜಯಂತಿ ಆಚರಣೆ

ಮೈಸೂರು ಜಿಲ್ಲಾಡಳಿತದಿಂದ ಶ್ರೀಶಂಕರಾಚಾರ್ಯರ ಜಯಂತಿ ಆಚರಣೆ



ಮೈಸೂರಿನ ಕಲಾಮಂದಿರದ ಆವರಣದಲ್ಲಿರುವ ಕಿರುರಂಗಮಂದಿರದಲ್ಲಿ ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ ಶ್ರೀ ಶಂಕರಾಚಾರ್ಯರ ಜಯಂತಿ ಆಚರಿಸಲಾಯಿತು.

ಮೈಸೂರು, ಮೇ 2(ಜಿಎ)–ಶಂಕರಾಚಾರ್ಯರು ಸಮಾಜದಲ್ಲಿ ಅಸಮಾನತೆಯನ್ನು ತೊಡೆದು ಹಾಕಿ ತಮ್ಮ ತತ್ವಗಳ ಮೂಲಕ ಬೆಳಕನ್ನು ಚೆಲ್ಲಿದರು ಎಂದು ಶಾಸಕ ಟಿ.ಎಸ್.ಶ್ರೀವತ್ಸ ತಿಳಿಸಿದರು.

ಮೈಸೂರಿನ ಕಲಾಮಂದಿರದ ಆವರಣದಲ್ಲಿರುವ ಕಿರುರಂಗ ಮಂದಿರದಲ್ಲಿ ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ ಹಮ್ಮಿಕೊಳ್ಳಲಾಗಿದ್ದ ಶ್ರೀ ಶಂಕರಾಚಾರ್ಯರ ಜಯಂತಿಯನ್ನು ಉದ್ಘಾಟಿಸಿ ಮಾತನಾಡಿದ ಅವರು, ಶಂಕರಾಚಾರ್ಯರು ಚಿಕ್ಕ ವಯಸ್ಸಿನಲ್ಲಿಯೇ ಸನ್ಯಾಸ ದೀಕ್ಷೆ ಪಡೆದುಕೊಳ್ಳಬೇಕು ಎಂಬ ಆಸೆ ಹೊಂದಿದ್ದವರು. ದೇಶದ ಉದ್ದಗಲಕ್ಕೂ ಪರ್ಯಟನೆ ಮಾಡಿ ತಮ್ಮ ಕಾಲ್ನಡಿಗೆಯಲ್ಲಿಯೇ 4 ಪೀಠಗಳನ್ನು ಸ್ಥಾಪನೆ ಮಾಡಲು ಹೊರಟ ಮಹಾನುಭಾವ ಶಂಕರಚಾರ್ಯರು ಎಂದರು

ಶ್ರೀ ರಾಮಕೃಷ್ಣ ಆಶ್ರಮ, ವಿವೇಕಪ್ರಭ ಮಾಸ ಪತ್ರಿಕೆಯ ಸಂಪಾದಕರಾದ ಶ್ರೀ ಶ್ರೀ ಸ್ವಾಮಿ ಜ್ಞಾನಯೋಗಾನಂದ ಮಹಾರಾಜ್ ಮಾತನಾಡಿ, ಶಂಕರಚಾರ್ಯರು ವೇದ ವೇದಗಳ ಮಹತ್ವವನ್ನು ಭಾರತದ ಐತಿಹಾಸಿಕ ಸನ್ನಿವೇಶದಲ್ಲಿ ಪುನರ್ ಸ್ಥಾಪನೆ ಮಾಡಿದರು ಆಧ್ಯಾತ್ಮಿಕ ಪರಂಪರೆಗೆ ಇವರ ಕೊಡುಗೆ ಅಪಾರವಾಗಿದ್ದು, ತಮ್ಮ ಅಭೂತಪೂರ್ವವಾದ ಜೀವನದಲ್ಲಿ ಭಾರತದ ಅಸ್ಮಿತೆಯನ್ನು ಎತ್ತಿ ಹಿಡಿದರು. ಇವರ ತತ್ವಗಳು, ಜೀವನದ ಸಂದೇಶಗಳು ಹೆಚ್ಚು ಜನರನ್ನು ಪ್ರಭಾವಿಸಿದ್ದು, ಇಂದಿಗೂ ಸಹ ಇವರ ತತ್ವಗಳನ್ನು ಅಧ್ಯಯನ ಮಾಡುವವರು ಇದ್ದಾರೆ. ಅವರು ಹೇಳಿದಂತಹ ವಿಚಾರವನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡಿರುವವರನ್ನು ಇಂದಿಗೂ ಸಹ ನಾವು ಕಾಣಬಹುದಾಗಿದೆ ಎಂದು ತಿಳಿಸಿದರು.

ವಿದುಷಿ ಎಂ.ಸಿ ನಾಗಲಕ್ಷ್ಮಿ ಮಾತನಾಡಿ, ಅದ್ವೈತ ಎಂಬ ಖಡ್ಗವನ್ನು ಹಿಡಿದು ಯಾವ ಮತಗಳನ್ನು ಬೇಡ ಎನ್ನದೆ ಅದ್ವೈತ ತತ್ವವನ್ನು ಪ್ರಕಟ ಮಾಡಲು ಪ್ರಾರಂಭ ಮಾಡಿದವರು ಶಂಕರಾಚಾರ್ಯರು. 32 ವರ್ಷ ಮಾತ್ರ ಬದುಕಿದ್ದರು ಸಹ ಇವರ ಕೊಡುಗೆ ಅಪಾರವಾದುದ್ದು, ಇವರು ಸಂತರಲ್ಲಿಯೇ ಅಗ್ರಗಣ್ಯರಾಗಿದ್ದರು, ಪ್ರಪಂಚದಲ್ಲಿಯೇ ಪ್ರಚಂಡ ಮಹಾನ್ ಜ್ಞಾನಿಯಾಗಿದ್ದರು, ತೀಕ್ಷ್ಣ ಬುದ್ಧಿಯನ್ನು ಹೊಂದಿದ್ದರು ಎಂದರು.

ಕಾರ್ಯಕ್ರಮದಲ್ಲಿ ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್‌ನ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಡಾ.ಎಂ.ಡಿ. ಸುದರ್ಶನ್, ವಿಪ್ರ ಮುಖಂಡರಾದ ಡಾ.ಕೆ.ರಘುರಾಮ್ ವಾಜಪೇಯಿ, ಶ್ರೀಕಂಠ ಕುಮಾರ್, ನವೀನ್ ಕುಮಾರ್, ಕರ್ನಾಟಕ ಕಾವಲು ಪಡೆಯ ಅಧ್ಯಕ್ಷ ಮೋಹನ್ ಕುಮಾರ್, ಅರವಿಂದ್ ಶರ್ಮಾ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ರಾಜ್ಯದಲ್ಲಿ ಕಾನೂನು–ಸುವ್ಯವಸ್ಥೆ ಹದಗೆಟ್ಟಿರುವುದೇ ಹಿಂದೂ ಸಂಘಟನೆ ಕಾರ್ಯಕರ್ತರ ಹತ್ಯೆಗೆ ಕಾರಣ

ಶಿವಮೊಗ್ಗ ಸಂಸದ ಬಿ.ವೈ.ರಾಘವೇಂದ್ರ ಕಿಡಿ



ಪತ್ರಕರ್ತರೊಂದಿಗೆ ಸಂಸದ ಬಿ.ವೈ. ರಾಘವೇಂದ್ರ ಮಾತನಾಡಿದರು.

ಮೈಸೂರು, ಮೇ 2(ಎಂಟಿವೈ)– ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಹದಗೆಟ್ಟಿರುವುದರಿಂದ ಹಿಂದೂಪರ ಸಂಘಟನೆಗಳ ಕಾರ್ಯಕರ್ತರ ಕಗ್ಗೊಲೆ ಪ್ರಕರಣ ಹೆಚ್ಚಾಗುತ್ತಿದೆ ಎಂದು ಸಂಸದ ಬಿ.ವೈ. ರಾಘವೇಂದ್ರ ಕಿಡಿಕಾರಿದ್ದಾರೆ.

ಮೈಸೂರಿನ ಬಿಜೆಪಿ ಕಚೇರಿಯಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಮಂಗಳೂರಿನಲ್ಲಿ ಹಿಂದೂ ಕಾರ್ಯಕರ್ತನನ್ನು ಸಾರ್ವಜನಿಕ ಸ್ಥಳದಲ್ಲಿ ಸಾವಿರಾರು ಜನರ ಸಮ್ಮುಖದಲ್ಲಿಯೇ ಹತ್ಯೆ ಮಾಡಿ ಗುಂಡಾಗಿರಿ ಪ್ರದರ್ಶಿಸಲಾಗಿದೆ. ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಹಿಂದೂ ನಾಯಕರ ಮೇಲೆ ದಾಳಿ, ಹತ್ಯೆ ಪ್ರಕರಣ ಹೆಚ್ಚಳವಾಗಿದೆ. ಶಿವಮೊಗ್ಗ, ಮಂಗಳೂರು, ಮೈಸೂರಿನಲ್ಲಿ ಇಂತಹ ಘಟನೆಗಳು ಮರುಕಳಿಸುತ್ತಿವೆ. ಹಿಂದೂತ್ವದ ಹೋರಾಟ ಹತ್ತಿಕ್ಕುವ ಷಡ್ಯಂತ್ರ ನಡೆದಿದೆ. ಕಾಂಗ್ರೆಸ್ ಅಧಿಕಾರಕ್ಕೆ ಬಂದ ಬಳಿಕ ಕೆ.ಜೆ.ಹಳ್ಳಿ, ಡಿ.ಜೆ.ಹಳ್ಳಿ ಪ್ರಕರಣಗಳ ಕೇಸ್ ಹಿಂಪಡೆಯಲಾಯಿತು. ಹುಬ್ಬಳ್ಳಿ ಠಾಣೆಗೆ ಬೆಂಕಿ ಹಚ್ಚಲಾಯಿತು. ಆರೋಪಿಗಳು ಸರ್ಕಾರ ರಕ್ಷಣೆ ನೀಡುತ್ತದೆ ಎಂದು ಭಾವಿಸಿ, ಹಿಂದೂಗಳ ಹತ್ಯೆ ನಡೆಸುತ್ತಿದ್ದಾರೆ ಎಂದು ಆರೋಪಿಸಿದರು.

ಕಾಶ್ಮೀರದ ಪಹಲ್ಗಾಮ್‌ನಲ್ಲಿ ಉಗ್ರರು ನಡೆಸಿದ ದಾಳಿಗೆ ಸಂಬಂಧಿಸಿದಂತೆ ಇಡೀ ದೇಶವೇ ಪಾಕಿಸ್ತಾನದ ವಿರುದ್ಧ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸುತ್ತಿರುವಾಗ ಮುಖ್ಯಮಂತ್ರಿ ಸಿದ್ದರಾಮಯ್ಯ ಯುದ್ಧ ಬೇಡ ಎಂದರು. ಪ್ರಧಾನಿ ನರೇಂದ್ರ ಮೋದಿ ಅವರ ನಿಲುವನ್ನು ಟೀಕಿಸಿದರು. ಸಿಎಂ ಸಿದ್ದರಾಮಯ್ಯ ಅವರ ಹೇಳಿಕೆಯನ್ನು ದೇಶ ಗಮನಿಸುತ್ತಿದೆ ಎಂದರು.

ರಾಜ್ಯದಲ್ಲಿ ನಡೆಯುತ್ತಿರುವ ಹಿಂದೂಪರ ಸಂಘಟನೆಗಳ ಕಾರ್ಯಕರ್ತೆಯರ ಹತ್ಯೆಯನ್ನು ದೇಶ ಗಮನಿಸುತ್ತಿದೆ. ರಾಜ್ಯ ಸರ್ಕಾರ ಇನ್ನಾದರೂ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳದಿದ್ದರೆ, ಎರಡೂ ಧರ್ಮಗಳ ಮಧ್ಯೆ ದುರ್ಘಟನೆ ಮರುಕಳಿಸುತ್ತದೆ. ಅಲ್ಲದೆ, ಮುಂದಿನ ದಿನಗಳಲ್ಲಿ ರಾಜ್ಯದಲ್ಲಿ ಕಾಂಗ್ರೆಸ್ ನುಚ್ಚುನೂರಾಗುತ್ತದೆ ಎಂದು ಎಚ್ಚರಿಸಿದರು.

ಜಾತಿ ಗಣತಿ ಸ್ವಾಗತಾರ್ಹ: ಸ್ವಾತಂತ್ರ್ಯ ನಂತರ ದೇಶದಾದ್ಯಂತ ಜಾತಿ ಗಣತಿ ನಡೆಸುವ ಕೇಂದ್ರ ಸರ್ಕಾರದ ನಿರ್ಧಾರ ಸ್ವಾಗತಾರ್ಹ. ಅಂಬೇಡ್ಕರ್ ಫೋಟೋ ಪೂಜೆಗೆ ಸೀಮಿತಗೊಳಿಸಿದವರಿಂದ ಜಾತಿ ಗಣತಿ ನಿರೀಕ್ಷೆ ಮಾಡಲು ಸಾಧ್ಯವಿರಲಿಲ್ಲ. ಅಂಬೇಡ್ಕರ್ ಸೋಲಿಸಿದ್ದು ಯಾರು? ಎಂದು ಜಗತ್ತಿಗೆ ಗೊತ್ತಿದೆ. ಜಾತಿ ಗಣತಿಯನ್ನು ರಾಜ್ಯ ಸರ್ಕಾರದಿಂದ ಕೇಂದ್ರ ನಕಲು ಮಾಡಿದೆಯೇ? ಎಂಬ ಪ್ರಶ್ನೆಗೆ ಉತ್ತರಿಸಿದ ಬಿ.ವೈ. ರಾಘವೇಂದ್ರ, ಒಂದು ರಾಜ್ಯದ ಕಾರ್ಯಕ್ರಮದಿಂದ ದೇಶ ನಡೆಸುವ ಸ್ಥಿತಿ ಮೋದಿ ಅವರಿಗೆ ಬಂದಿಲ್ಲ ಎಂದು ಪ್ರತಿಕ್ರಿಯಿಸಿದರು.

ದಿ ಹಿಂದೂ ಎಜುಕೇಷನ್ ಪ್ಲಸ್

ಇಂದು ವಿದ್ಯಾವರ್ಧಕ ಇಂಜಿನಿಯರಿಂಗ್ ಕಾಲೇಜಲ್ಲಿ ವಿದ್ಯಾರ್ಥಿಗಳಿಗೆ ಉಪಯುಕ್ತ ಮಾರ್ಗದರ್ಶನ

ಮೈಸೂರು, ಮೇ 2– ವಿದ್ಯಾರ್ಥಿಗಳ ಭವಿಷ್ಯದ ಹಾದಿಗೆ ಮಾರ್ಗದರ್ಶಿಯಾದ 'ದಿ ಹಿಂದೂ ಎಜುಕೇಷನ್ ಪ್ಲಸ್ ಕೆರಿಯರ್ ಕೌನ್ಸೆಲಿಂಗ್' 23ನೇ ಆವೃತ್ತಿಯು ಮೈಸೂರಿನಲ್ಲಿ ಮೇ 3ರ ಶನಿವಾರ ಬೆಳಗ್ಗೆ 9.30ಕ್ಕೆ ವಿದ್ಯಾವರ್ಧಕ ಕಾಲೇಜ್ ಆಫ್ ಇಂಜಿನಿಯರಿಂಗ್‌ನ ಸಾಹುಕಾರ್ ಚನ್ನಯ್ಯ ಸಭಾಂಗಣದಲ್ಲಿ ಕಾರ್ಯಕ್ರಮ ನಡೆಯಲಿದೆ. ಬೆಳಗ್ಗೆ 9 ರಿಂದ ವಿದ್ಯಾರ್ಥಿಗಳ ನೋಂದಣಿ ಆರಂಭವಾಗುವುದು.

ವೈದ್ಯಕೀಯ, ಎಂಜಿನಿಯರಿಂಗ್ ಸಹಿತ ವೃತ್ತಿಪರ ಕೋರ್ಸ್‌ಗಳು, ಸಿಇಟಿ, ನೀಟ್, ಸಿಎ, ಸಿಎಸ್‌ನಂತಹ ಪ್ರವೇಶ ಪರೀಕ್ಷೆಗಳು ವಿಜ್ಞಾನ, ಕಲಾ, ಕಾಮರ್ಸ್ ಹಾಗೂ ಕಾನೂನು ಹೀಗೆ ವಿವಿಧ ಪದವಿ ಮತ್ತಿತರ ಶಿಕ್ಷಣಕ್ಕೆ ಸಂಬಂಧಿಸಿದ ವಿಷಯಗಳ ಬಗ್ಗೆ ವಿದ್ಯಾರ್ಥಿಗಳಿಗೆ ಅಗತ್ಯ ಮಾರ್ಗದರ್ಶನ ನೀಡಲಾಗುವುದು.

ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ಮಂಡ್ಯ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ ನಂದಿನಿ ಕೆ.ಆರ್. ಐಎಎಸ್ ಆಗಮಿಸಲಿದ್ದಾರೆ. ಯುಪಿಎಸ್‌ಸಿ ಕುರಿತು 2025ನೇ ಸಾಲಿನ ಕೇಂದ್ರ ಲೋಕ ಸೇವಾ ಆಯೋಗದ ಪರೀಕ್ಷೆಯಲ್ಲಿ ಆಲ್ ಇಂಡಿಯಾ 906 ರ್‍ಯಾಂಕ್ ಪಡೆದ ವಿನುತ ಜಿ.ಆರ್., ಚಾರ್ಟೆಡ್ ಅಕೌಂಟೆಂಸಿ ಕುರಿತು ಮೈಸೂರು ವಿಭಾಗದ ಆಲ್ ಇಂಡಿಯಾ ಚಾರ್ಟೆಡ್ ಅಕೌಂಟೆಂಟ್ಸ್ ಆಫ್ ಇಂಡಿಯಾದ ಸಿಎ ಭಾರ್ಗವ ಎಸ್., ಇಂಜಿನಿಯರಿಂಗ್ ಶಿಕ್ಷಣ ಕುರಿತು ವಿದ್ಯಾವರ್ಧಕ ಕಾಲೇಜ್ ಆಫ್ ಇಂಜಿನಿಯರಿಂಗ್ ಕಾಲೇಜಿನ ಪ್ರಾಂಶುಪಾಲರಾದ ಡಾ. ಬಿ.ಸದಾಶಿವೇಗೌಡ, ವೈದ್ಯಕೀಯದ ಶಿಕ್ಷಣ ಕುರಿತು ಮೈಸೂರು ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಕೇಂದ್ರದ ಕಮ್ಯುನಿಟಿ ಮೆಡಿಕಲ್ ವಿಭಾಗದ ಮುಖ್ಯಸ್ಥರಾದ ಡಾ. ಎಸ್.ಎನ್. ಮಂಜುನಾಥ್, ಸಿಇಟಿ ಕೌನ್ಸೆಲಿಂಗ್ ಕುರಿತು ಉದಯ್ ಶಂಕರ್ ನೋಡಲ್ ಆಫೀಸರ್, ಕೆಇಎ ಹೆಲ್ಪ್ ಲೈನ್ ವಿಭಾಗ ಹಾಗೂ ಇನ್ನಿತರ ಶಿಕ್ಷಣ ಅವಕಾಶಗಳ ಕುರಿತು ಸಿಗ್ಮಾ ಸಂಸ್ಥೆಯ ಮುಖ್ಯಸ್ಥರಾದ ಅಮೀನ್ ಈ ಮುದ್ರಾಸೀರ್ ಮಾರ್ಗದರ್ಶನ ನೀಡಲಿದ್ದಾರೆ.

ದ್ವಿತೀಯ ಪಿಯುಸಿ ಪಾಸಾದ ಹಾಗೂ ಓದುತ್ತಿರುವವರು ಈ ಕೆರಿಯರ್ ಕೌನ್ಸಿಲಿಂಗ್ ಕಾರ್ಯಕ್ರಮದಲ್ಲಿ ಭಾಗವಹಿಸಬಹುದಾಗಿದೆ ವಿದ್ಯಾರ್ಥಿಗಳು, ಪೋಷಕರು ಹಾಗೂ ಶಿಕ್ಷಣ ಸಂಸ್ಥೆಗಳ ನಡುವೆ ಸಂಪರ್ಕ ಕೊಂಡಿಯಾಗಿ ಕಾರ್ಯ ನಿರ್ವಹಿಸುವ ಈ ಕೆರಿಯರ್ ಕೌನ್ಸಿಲಿಂಗ್‌ನ ಸೂಕ್ತ ಮಾರ್ಗದರ್ಶನದಿಂದಾಗಿ ವಿದ್ಯಾರ್ಥಿಗಳು ಶೈಕ್ಷಣಿಕ ಜೀವನದಲ್ಲಿ ಸರಿಯಾದ ಕೋರ್ಸ್‌ಗಳನ್ನು ಆಯ್ಕೆ ಮಾಡಿಕೊಳ್ಳಲು ನೆರವಾಗಲಿದೆ. ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ ಬಿ.ರಾಜೇಶ್–9448871815.

ಪಾಕ್, ಬಾಂಗ್ಲಾ ವಲಸಿಗರ ಪತ್ತೆಗೆ ವಾರ್ ರೂಮ್ ಸ್ಥಾಪನೆ

ವಲಸಿಗರ ಬಗ್ಗೆ ಮಾಹಿತಿ ನೀಡಲು ಮಾಜಿ ಸಚಿವ ಅರವಿಂದ ಲಿಂಬಾವಳಿ ಮನವಿ



ಚಾಮುಂಡಿಬೆಟ್ಟದಲ್ಲಿ ಮಾಜಿ ಸಚಿವ ಅರವಿಂದ ಲಿಂಬಾವಳಿ ಮಾಧ್ಯಮದೊಂದಿಗೆ ಮಾತನಾಡಿದರು.

ಮೈಸೂರು, ಮೇ 2(ಜಿಎ)– ಪಾಕಿಸ್ತಾನ, ಬಾಂಗ್ಲಾ ದೇಶದ ವಲಸಿಗರು ಅಲ್ಲಲ್ಲಿ ಇದ್ದಾರೆ. ಅವರ ಮಾಹಿತಿಗಾಗಿ ಪ್ರತ್ಯೇಕ ವಾರ್ ರೂಮ್ ಆರಂಭಿಸಲಾಗಿದೆ ಎಂದು ಮಾಜಿ ಸಚಿವ ಅರವಿಂದ ಲಿಂಬಾವಳಿ ತಿಳಿಸಿದ್ದಾರೆ.

ಮೈಸೂರಿನ ಚಾಮುಂಡಿಬೆಟ್ಟಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಪಹಲ್ಗಾಮ್‌ನಲ್ಲಿ ಧರ್ಮ ಗುರುತಿಸಿ ಹಿಂದೂಗಳನ್ನ ಕೊಂದಿದ್ದಾರೆ. ಈ ಘಟನೆ ನಮಗೆ ದುಃಖಕರವಾದದ್ದು ಎಂದರು.

ಬಾಂಗ್ಲಾದೇಶದಿಂದ ನುಸುಳಿರುವ ನುಸುಳುಕೋರರು ಗುರುತಿಸುವ ಕೆಲಸ ಆಗಿದೆ. ಅವರನ್ನು ಪತ್ತೆ ಹಚ್ಚುವ ಕೆಲಸ ಆಗಬೇಕು. ಪಾಕಿಸ್ತಾನ, ಬಾಂಗ್ಲಾ ವಲಸಿಗರು ಅಲ್ಲಲ್ಲಿ ಇದ್ದಾರೆ. ಅವರ ಪತ್ತೆಗಾಗಿ ಈಗಾಗಲೇ ನಮ್ಮ ವಾರ್ ರೂಮ್ ಪ್ರಾರಂಭ ಮಾಡಿದ್ದೇವೆ. 400 ಕ್ಕಿಂತ ಹೆಚ್ಚು ಕರೆಗಳು ಬರುತ್ತಿವೆ. ಹಲವರು ಹಲವು ಮಾಹಿತಿಗಳನ್ನು ರವಾನೆ ಮಾಡುತ್ತಿದ್ದಾರೆ ಎಂದು ತಿಳಿಸಿದರು.

ನಕಲಿ ಆಧಾರ್ ಕಾರ್ಡ್ ಸೃಷ್ಟಿ ಮಾಡಿಕೊಂಡು ವಾಸವಿದ್ದಾರೆ. ಈ ರೀತಿಯ ವಲಸಿಗರು ಕಂಡು ಬಂದರೆ ವಾರ್ ರೂಮ್ ನಂಬರ್‌ಗೆ ಕರೆ ಮಾಡಿ ಮಾಹಿತಿ ನೀಡಲಿ. ಕರ್ನಾಟಕದಲ್ಲಿಯೂ ಕೆಲವರು ಇದ್ದಾರೆ ಎಂಬ ಮಾಹಿತಿ ಇದೆ. 9035675734, 8217686764 ಈ ಸಂಖ್ಯೆಗೆ ಮಾಹಿತಿ ನೀಡಿ ಎಂದರು. ಮಂಗಳೂರಿನಲ್ಲಿ ಹಿಂದೂ ಕಾರ್ಯಕರ್ತನ ಕೊಲೆ ಆಗಿದೆ. ಇದನ್ನ ನಾವು ಖಂಡಿಸುತ್ತೇವೆ. ಇಡೀ ರಾಜ್ಯದ ಜನತೆ ಸುಹಾಸ್ ಶೆಟ್ಟಿ ಕುಟುಂಬ ಜೊತೆ ಇದೆ. ಈ ಪ್ರಕರಣದ ಬಗ್ಗೆ ಸಮಗ್ರವಾದ ತನಿಖೆ ಆಗಬೇಕು. ಕೊಲೆಯಲ್ಲಿ ಭಾಗಿಯಾಗಿರುವವರಿಗೆ ಶಿಕ್ಷೆ ಆಗಬೇಕು ಎಂದು ಆಗ್ರಹಿಸಿದರು. ಶಾಸಕ ಶಿವಾನಂದ ಪಾಟೀಲ್ ರಾಜೀನಾಮೆ ವಿಚಾರವಾಗಿ ಪ್ರತಿಕ್ರಿಯಿಸಿ, ಆ ವಿಚಾರ ಯತ್ನಾಳ್ ಅವರನ್ನು ಕೇಳಿ. ನಾವು ಯತ್ನಾಳ್ ಜೊತೆ ಈ ವಿಚಾರ ಮಾತಾಡುತ್ತೇವೆ ಎಂದರು.

ಮಾಜಿ ಸಂಸದ ಪ್ರತಾಪ್ ಸಿಂಹ ಮಾತನಾಡಿ, ಇತ್ತೀಚಿಗೆ ಕೊಡಗಿನ ವಿನಯ್ ಸೋಮಯ್ಯ, ಕಾಂಗ್ರೆಸ್ ಶಾಸಕರ ಹೆಸರು ಬರೆದು ಆತ್ಮಹತ್ಯೆ ಮಾಡಿಕೊಂಡರು. ಈಗ ಮಂಗಳೂರಿನಲ್ಲಿ ಸುಹಾಸ್ ಶೆಟ್ಟಿ ಹತ್ಯೆಯಾಗಿದೆ. ಕಾಂಗ್ರೆಸ್‌ಗೆ ವೋಟ್ ಹಾಕಿದರೆ, ತಾಲಿಬಾನ್ ಸರ್ಕಾರ ಬರುತ್ತೆ ಅಂತಾ ಅಂದೇ ಹೇಳಿದ್ದೆ. ಈಗ ಅದೇ ಆಗಿದೆ. ರಾಜ್ಯದಲ್ಲಿ ಹಿಂದೂಗಳ ಸರಣಿ ಹತ್ಯೆಗಳು ಶುರುವಾಗಿದೆ. ಸಿದ್ದ ರಾಮಯ್ಯ ಸರ್ಕಾರ ತೆಗೆಯುವವರೆಗೆ ಇದು ನಿಲ್ಲಲ್ಲ. ಸಿದ್ದರಾಮಯ್ಯ ಸರ್ಕಾರದಲ್ಲಿ ಮುಸ್ಲಿಂರಿಗಷ್ಟೇ ಪ್ರಾಮುಖ್ಯತೆ ಸಿಕ್ಕಿದೆ ಎಂದು ಕಿಡಿಕಾರಿದರು. ಈ ವೇಳೆ ಶಾಸಕ ರಮೇಶ್ ಜಾರಕಿಹೊಳಿ, ಮಾಜಿ ಶಾಸಕ ಕುಮಾರ್ ಬಂಗಾರಪ್ಪ ಮತ್ತಿತರರು ಉಪಸ್ಥಿತರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

03.05.2025 ಶನಿವಾರ, ಮಳೆ ನಕ್ಷತ್ರ: ಭರಣಿ 27.04.2025 ರಿಂದ 10.05.2025

ವಿಶ್ವವಸು ನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ, ಕೃಷ್ಣ ಪಕ್ಷ,

ತಿಥಿ: ಷಷ್ಠಿ, ನಕ್ಷತ್ರ: ಪುನರ್ವಸು, ರಾಹುಕಾಲ: ಬೆಳಗ್ಗೆ 9 ರಿಂದ 10.30ರವರೆಗೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ನಖ ಶಿಖಾಂತ–ಅಂದ ಆರೋಗ್ಯಗಳ ಆಪ್ತ ಮಾಹಿತಿ, ಪ್ರಸ್ತುತಿ: ಡಾ. ಕೇಶವ ಕೊರಸೆ, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, 6.50 ರೈತರಿಗೆ ಸಲಹೆ, 7.15 ಮನೆಮನೆಯ ಹಣತೆ–ಪ್ರಾಯೋಜಿತ ಸರಣಿ ಕಾರ್ಯಕ್ರಮ, ಪ್ರಾಯೋಜಕರು–ಡಾ. ಬಿ.ಆರ್.ಅಂಬೇಡ್ಕರ್ ಸಂಶೋಧನಾ ಸಂಸ್ಥೆ, ಸಮಾಜ ಕಲ್ಯಾಣ ಇಲಾಖೆ, ಕರ್ನಾಟಕ ಸರ್ಕಾರ, 8.30 ಯೋಗ ಕುರಿತ ವಿಶೇಷ ಸರಣಿ ಮಹಾಯೋಗ, 8.35 ಕನ್ನಡ ಚಿತ್ರಗೀತೆಗಳು, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ನಮ್ಮೂರ್ ಹೆಸರು, ಪ್ರಸ್ತುತಿ : ಡಾ. ಮೈಸೂರು ಉಮೇಶ್

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ – ಪಿ. ಸುರಭೀ, 12.45 ಜನಪದ ಸಂಗೀತ, 1.00 ಪ್ರಗತಿ ಪಥ – ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 2.40 ಹಿಂದಿ ಚಿತ್ರಗೀತೆಗಳು, 3.00 ಹಳ್ಳಿ ಹಾಡು, 3.30 ಮಕ್ಕಳ ಮಂಟಪ, 4.00 ನಾಟಕ, 4.30 ನೆನಪಿನಂಗಳ (ಧ್ವನಿ ಭಂಡಾರದಿಂದ), 6.50 ಕೃಷಿರಂಗ: ಕಿಸಾನ್‌ವಾಣಿ–ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ ದ್ರವ ರೂಪದ ಗೊಬ್ಬರಗಳ ತಯಾರಿಕೆ ಮತ್ತು ಬಳಕೆ ಕುರಿತು ಸಂವಾದ. ಭಾಗವಹಿಸುತ್ತಾರೆ : ನಾಗನಹಳ್ಳಿಯ ಜಿಲ್ಲಾ ಕೃಷಿ ತರಬೇತಿ ಕೇಂದ್ರದ ಸಹಾಯಕ ಕೃಷಿ ನಿರ್ದೇಶಕರಾದ ಎಸ್.ಬಿ. ಮಮತಾ ಹಾಗೂ ನಂಜನಗೂಡು ತಾಲೂಕು ಚಿಕ್ಕಯ್ಯನಛತ್ರ ಹೋಬಳಿ ಹೊಸಕೋಟೆ ಗ್ರಾಮದ ಸಿದ್ಧಪ್ಪ. ಪ್ರಸ್ತುತಿ: ಎನ್. ಕೇಶವಮೂರ್ತಿ, 8.00 ಸವಿನೆನಪು–ಹಳೆಯ ಕನ್ನಡ ಚಿತ್ರಗೀತೆಗಳು, 9.30 ಯುವವಾಣಿ, 10.00 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ, ಅಪೂರ್ವ ಕೃಷ್ಣ– ವೈಯೋಲಿನ್ ವಾದನ

■ **ಮಲಬಾರ್ ಗೋಲ್ಡ್ ಅಂಡ್ ಡೈಮಂಡ್ಸ್ :** ಆರ್ಟಿಸ್ಟ್ರಿ ಶೋ, ಸ್ಥಳ: ಮಲಬಾರ್ ಗೋಲ್ಡ್ ಅಂಡ್ ಡೈಮಂಡ್ಸ್, ಬಿ.ಎನ್. ರಸ್ತೆ, ಸಬ್ ಅರ್ಬನ್ ಬಸ್ ನಿಲ್ದಾಣದ ಹತ್ತಿರ.

■ **ಶ್ರೀ ಶಂಕರ ಜಯಂತಿ ಸಭಾ :** ಶ್ರೀ ಶಂಕರ ಭಗವತ್ಪಾದರ ಜಯಂತ್ಯುತ್ಸವ ಹಾಗೂ 46ನೇ ವಾರ್ಷಿಕೋತ್ಸವ, ಬೆಳಗ್ಗೆ 8 ರಿಂದ ಶ್ರೀಮದ್ ಭಗವತ್ಪಾದರಿಗೆ ರುದ್ರಾಭಿಷೇಕ, ಷೋಡಶೋಪಚಾರ ಪೂಜೆ, ಸಹಸ್ರ ನಾಮಾರ್ಚನೆ, ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಬೆಳಗ್ಗೆ 10.30ಕ್ಕೆ ವಾರ್ಷಿಕೋತ್ಸವ, ಅಧ್ಯಕ್ಷತೆ : ಶ್ರೀ ಶಂಕರ ಜಯಂತಿ ಸಭಾ ಅಧ್ಯಕ್ಷ ಹೆಚ್.ಆರ್. ಸುಂದರೇಶನ್, ವಿಶೇಷ ಆಹ್ವಾನಿತರು: ಮಾಜಿ ಮೇಯರ್ ಆರ್. ಲಿಂಗಪ್ಪ, ಸಂಜೆ 5 ರಿಂದ ವಿದುಷಿ ಶ್ರೀಮತಿ ಅನಘ ಅವರಿಂದ ವೀಣಾವಾದನ ಕಾರ್ಯಕ್ರಮ, ಸ್ಥಳ: ಶ್ರೀ ಶಂಕರ ಜಯಂತಿ ಸಭಾ ಸಮುದಾಯ ಭವನ, ತೆಂಗಿನ ತೋಪು, ಸರಸ್ವತಿಪುರಂ.

■ **ಶ್ರೀ ನಟರಾಜ ಮಹಿಳಾ ವಸತಿ ಪ್ರಥಮ ದರ್ಜೆ ಕಾಲೇಜು :** ಕೇಂದ್ರ ಬಜೆಟ್ ವಿಶ್ಲೇಷಣೆ, ಸಾನ್ನಿಧ್ಯ : ಶ್ರೀ ಚಿದಾನಂದ ಸ್ವಾಮೀಜಿ, ವಿಶ್ಲೇಷಕರು : ಡಾ. ಆರ್.ಹೆಚ್. ಪವಿತ್ರ, ಅಧ್ಯಕ್ಷತೆ : ಶ್ರೀ ನಟರಾಜ ಪ್ರತಿಷ್ಠಾನ ವಿಶೇಷಾಧಿಕಾರಿ ಪ್ರೊ. ಎಸ್. ಶಿವರಾಜಪ್ಪ, ಉಪಸ್ಥಿತರು : ಕಾಲೇಜು ಪ್ರಿನ್ಸಿಪಾಲ್ ಡಾ. ಎಂ. ಶಾರದಾ, ಡಾ. ಎನ್.ಆರ್. ಸಿಂಧು, ಸ್ಥಳ: ಶ್ರೀ ನಟರಾಜ ಕಲ್ಯಾಣ ಮಂದಿರ, ಬೆಳಗ್ಗೆ 11ಕ್ಕೆ.

■ **ಸಂಗೀತ ನಾಟಕ ಅಕಾಡೆಮಿ, ಕರ್ನಾಟಕ ರಾಜ್ಯ, ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ :** ವಿಶ್ವ ನೃತ್ಯ ದಿನಾಚರಣೆ ಅಂಗವಾಗಿ ಎಸ್.ಎನ್.ಎ. ಫೆಲೋಗಳು ಮತ್ತು ಪ್ರಶಸ್ತಿ ಪುರಸ್ಕೃತರ ಸಂಗೀತ ಮತ್ತು ನೃತ್ಯೋತ್ಸವ, ವಿನಾಯಕ್ ಖೇಡ್ಕರ್, ಹರ್ವಿಂದರ್ ಕುಮಾರ್ ಶರ್ಮಾ – ಪಂಚ್ಕುಲ ಹಿಂದೂಸ್ಥಾನಿ ವಾದ್ಯ ಸಿತಾರ್, ಶ್ರೀಮತಿ ಪ್ರಮಿಳಾ ಗುರುಮೂರ್ತಿ, ಚೆನ್ನೈ – ಭರತನಾಟ್ಯ ಪ್ರದರ್ಶನ, ಸಂಜೆ 4 ರಿಂದ ಮೊಯಿನುದ್ದೀನ್ ಖಾನ್– ಹಿಂದೂಸ್ಥಾನಿ ವಾದ್ಯ ಸಾರಂಗಿ, ಶ್ರೀಮತಿ ಕಲಾಪಿನಿ ಕೋಮಕಲಿ ದೇವಾಸ್–ಹಿಂದೂಸ್ಥಾನಿ ಗಾಯನ, ಶಂಕರ ಶಾಸ್ತ್ರಿ, ಬೆಂಗಳೂರು–ಕರ್ನಾಟಕ ಶಾಸ್ತ್ರೀಯ ಸಂಗೀತ, ಶ್ರೀಮತಿ ಮದ್ದಾಲಿ ಉಷಾ ಗಾಯತ್ರಿ–ಕುಚಿಪುಡಿ ನೃತ್ಯ, ಶ್ರೀಮತಿ ನಿರುಪಮ ರಾಜೇಂದ್ರ ಮತ್ತು ಶ್ರೀ ಟಿ.ಡಿ. ರಾಜೇಂದ್ರ–ಸೃಜನಾತ್ಮಕ ಮತ್ತು ಪ್ರಾಯೋಗಿಕ ನೃತ್ಯ, ಸ್ಥಳ: ವಿಜ್ಞಾನ ಭವನ ಸಭಾಂಗಣ, ಮಾನಸಗಂಗೋತ್ರಿ.

■ **ಶ್ರೀ ರೇಣುಕಾದೇವಿ ಕರಗ ದೇವಸ್ಥಾನದ ಟ್ರಸ್ಟ್, ಇಟ್ಟಿಗೆಗೂಡು :** ಶ್ರೀ ಚಾಮುಂಡೇಶ್ವರಿ ಮತ್ತು ಶ್ರೀ ಮಾರಿಯಮ್ಮನವರ 101ನೇ ವರ್ಷದ ಮೈಸೂರು ಕರಗ ಮಹೋತ್ಸವ, ರಾತ್ರಿ 8 ಗಂಟೆಗೆ ಅದ್ದೂರಿ ಮೆರವಣಿಗೆ, ಸ್ಥಳ: ಅಮ್ಮನವರ ಕರಗ ದೇವಸ್ಥಾನ, ಇಟ್ಟಿಗೆಗೂಡು.

■ **ಸುರುಚಿ ರಂಗಮನೆ :** ಕಥೆ ಕೇಳೋಣ ಬನ್ನಿ ಕಾರ್ಯಕ್ರಮ – 878, ಕಥೆ ಹೇಳುವವರು: ಡಾ. ಗಿರಿಜಾಪತಿ ಎನ್ ಎಂ, ಸಂಸ್ಕೃತಿ ಚಿಂತಕರು, ಲೇಖಕರು ಹಾಗೂ ಪ್ರಾಧ್ಯಾಪಕರು, ಶಾರದಾ ವಿಲಾಸ ಲಾ ಕಾಲೇಜು, ಮೈಸೂರು. ಸ್ಥಳ:ಸ್ಥಳ: ಸುರುಚಿ ರಂಗಮನೆ, 476, ಚಿತ್ರಭಾನು ರಸ್ತೆ, ಕುವೆಂಪುನಗರ, ಸಂಜೆ 4.30 ರಿಂದ.

■ **ಶ್ರೀ ರಾಮಕೃಷ್ಣ ಆಶ್ರಮ :** ಸರಗೂರು ರಮೇಶ್ ಅವರಿಂದ ಶ್ರೀ ರಾಮಕೃಷ್ಣ ಅವರ ಸಂದೇಶಗಳು ಕುರಿತು ಪ್ರವಚನ, ಸ್ಥಳ: ಸ್ವಾಮಿ ಶಾಂಭವಾನಂದಜೀ ಸ್ಮಾರಕ ಸಭಾಂಗಣ, ಯಾದವಗಿರಿ, ಸಂಜೆ 6 ರಿಂದ.

■ **ಇನ್ಸ್‌ಟಿಟ್ಯೂಷನ್ ಆಫ್ ಇಂಜಿನಿಯರ್ಸ್ :** ಡಿಸೈನ್ ಥಿಂಕಿಂಗ್ ಅಂಡ್ ಇನ್ನೋವೇಷನ್ ಕುರಿತು ಡಾ. ಗೀತಾ ಕಿರಣ್ ಅವರಿಂದ ತಾಂತ್ರಿಕ ಉಪನ್ಯಾಸ, ಅಧ್ಯಕ್ಷತೆ : ಇನ್ಸ್‌ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಅಧ್ಯಕ್ಷ ಡಾ. ಆರ್. ದೀಪು ಸ್ಥಳ: ಎಸ್.ಪಿ. ಭಟ್ ಹಾಲ್, ಸಂಜೆ 6ಕಿಕೆ.

ನಕ್ಕರೆ ಅದೇ ಸ್ವರ್ಗ

ಹೆಂಡತಿ (ಗಂಡನಿಗೆ) : 'ನೋಡ್ರಿ ಪಕ್ಕದ ಮನೆ ಪಿಂಕಿ ಎಸ್‌ಎಸ್‌ಎಲ್‌ಸಿಯಲ್ಲಿ 100ಕ್ಕೆ 99 ಮಾರ್ಕ್ಸ್ ತಗೊಂಡವ್ಳೆ'
ಗಂಡ : ಇನ್ನೊಂದು ಮಾರ್ಕ್ಸ್ ಎಲ್ಲೋಯ್ತು?
ಹೆಂಡತಿ : ಅದನ್ನು ನಮ್ ಮಗ ತಗೊಂಡು ಬಂದವ್ನೆ ಕಣ್ರಿ!

ಮೈಸೂರು ಮಿತ್ರ

ಶನಿವಾರ, 3 ಮೇ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ..........

ಬೇರೆಯವರಿಗೆ ಇಷ್ಟವಾಗಬೇಕೆಂದು ನೀವು ಬದಲಾಗಬೇಡಿ. ನಿಮ್ಮಷ್ಟಕ್ಕೆ ನೀವೇ ಬದಲಾಗಿ. ಆಗ ಜನರು ತಂತಾನೇ ನಿಮ್ಮತ್ತ ಆಕರ್ಷಿತರಾದರೂ ಆಶ್ಚರ್ಯಪಡಬೇಕಿಲ್ಲ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಅಡಿಕೆಗೆ ಹೋದ ಮಾನ / ಆನೆ ಕೊಟ್ಟರು ಬರೋದಿಲ್ಲ

ನಿಮ್ಮ ಪತ್ರಗಳು

■ ಸೋಮನಾಥನಗರದ ಸಮಸ್ಯೆಗಳನ್ನು ಪರಿಹರಿಸಿ




ಮಾನ್ಯರೆ,

ಮೈಸೂರಿನ ಪ್ರತಿಷ್ಠಿತ ಬಡಾವಣೆಗಳಲ್ಲೊಂದಾದ ಸರ್ಕಾರಿ ನೌಕರರ ಗೃಹ ನಿರ್ಮಾಣ ಸಂಘ ಅಭಿವೃದ್ಧಿಪಡಿಸಿರುವ ದಟ್ಟಗಳ್ಳಿಗೆ ಹೊಂದಿಕೊಂಡಿರುವ ಸೋಮನಾಥನಗರ ಬಡಾವಣೆಯ ನಿವಾಸಿಗಳು ಈ ಕೆಳಕಂಡ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ.

* ಡಾಂಬರಿಲ್ಲದೆ ಹಾಗೂ ಹದಗೆಟ್ಟು ಹೋಗಿರುವ ರಸ್ತೆಗಳಿಂದ ವಾಹನ ಸಂಚಾರ ಹಾಗೂ ನಡೆದಾಡಲು ಕಷ್ಟವಾಗಿದೆ. ಅನೇಕ ರಸ್ತೆ ಅಪಘಾತಗಳು ಸಹ ನಡೆದಿದ್ದು, ಜೀವಹಾನಿಯೂ ಕೂಡ ಸಂಭವಿಸಿದೆ.

* ಮುಖ್ಯ ರಸ್ತೆ ಹಾಗೂ ಒಳ ರಸ್ತೆಗಳಲ್ಲಿ ಬೀದಿ ದೀಪಗಳು ಇಲ್ಲವಾಗಿದೆ. ಇದರಿಂದ ಮನೆ ಕಳ್ಳತನ, ಸರಗಳ್ಳತನ ಹೆಚ್ಚಾಗಿದೆ.

* ನೀರಿನ ಸಮಸ್ಯೆಯಂತೂ ಹೇಳತೀರದು. ನೀರಿನ ಪೈಪ್‌ಗಳು ಒಡೆದಿದ್ದು ಹಲವಾರು ದಿನಗಳಿಂದ ಜನ ಪರದಾಡುವಂತಾಗಿದೆ.

ಈ ಸಮಸ್ಯೆಗಳನ್ನು ಬೋಗಾದಿ ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿಗಳು, ಜನಪ್ರತಿನಿಧಿಗಳ ಗಮನಕ್ಕೆ ತಂದರೂ ಯಾವುದೇ ಪ್ರಯೋಜನವಾಗಿಲ್ಲ. ಕೂಡಲೇ ಸಂಬಂಧಪಟ್ಟ ಅಧಿಕಾರಿಗಳು ಗಮನಹರಿಸಿ, ಸಮಸ್ಯೆಗಳನ್ನು ಆದಷ್ಟು ಬೇಗ ಸರಿಪಡಿಸಬೇಕೆಂದು ಈ ಮೂಲಕ ಮನವಿ.

–ವೈ.ಎಸ್. ಹರೀಶ್, ಸೋಮನಾಥನಗರ ನಿವಾಸಿ, ಮೈಸೂರು.

■ ಸಿದ್ದರಾಮಯ್ಯ ಮುಖ್ಯಮಂತ್ರಿ ಸ್ಥಾನದ ಘನತೆ ಕಳೆದುಕೊಳ್ಳುತ್ತಿದ್ದಾರೆಯೇ?

ಮಾನ್ಯರೆ,

ಇತ್ತೀಚೆಗೆ ಬೆಳಗಾವಿಯಲ್ಲಿ ಕೇಂದ್ರ ಸರ್ಕಾರ ಅಗತ್ಯ ವಸ್ತುಗಳ ಬೆಲೆ ಏರಿಕೆ ಮಾಡಿರುವುದರ ವಿರುದ್ಧ ಕಾಂಗ್ರೆಸ್ ಆಯೋಜಿಸಿದ್ದ ಪ್ರತಿಭಟನಾ ಬಹಿರಂಗ ಸಭೆಯಲ್ಲಿ ಸಿಎಂ ಭಾಷಣ ಮಾಡುವ ವೇಳೆ ಬಿಜೆಪಿಯ ಮಹಿಳಾ ಕಾರ್ಯಕರ್ತರು ಸಿದ್ದರಾಮಯ್ಯ ವಿರುದ್ಧ ಕಪ್ಪುಬಾವುಟ ಪ್ರದರ್ಶಿಸಿ ಗೊಂದಲ ಉಂಟಾದಾಗ ಭದ್ರತೆಗೆ ನಿಯೋಜಿಸಲಾದ ಎಎಸ್ಪಿಯವರನ್ನು ವೇದಿಕೆಗೆ ಕರೆದು ಸಾರ್ವಜನಿಕರ ಎದುರೇ ಕಪಾಳಮೋಕ್ಷ ಮಾಡಲು ಮುಂದಾಗಿರುವುದು ಸುದ್ದಿ ಮಾಧ್ಯಮಗಳಲ್ಲಿ ವರದಿಯಾಗಿದೆ.

ಇದೊಂದು ದುರಾದೃಷ್ಟದ ಸಂಗತಿ. ನಾಡನ್ನಾಳುವ ದೊರೆಯೇ ತಾಳ್ಮೆ ಕಳೆದುಕೊಂಡರೆ ಹೇಗೆ? ಇವರ ಕೆಳಗಿನವರಿಗೆ ಇವರು ಯಾವ ರೀತಿಯ ಸಂದೇಶ ನೀಡುತ್ತಾರೆ. ಇದು ಮುಖ್ಯಮಂತ್ರಿ ಸ್ಥಾನದ ಘನತೆಗೆ ಚ್ಯುತಿ ಉಂಟುಮಾಡುವುದಿಲ್ಲವೇ? ತಾವು ಅಧಿಕಾರದಲ್ಲಿ ಇದ್ದಾಗ ಬೇರೆಯವರಿಗೆ ಮಾದರಿಯಾಗಬೇಕು. ಸಮಕಾಲೀನ ರಾಜಕಾರಣದ ದುರಂತಕ್ಕೆ ಇದು ಸಾಕ್ಷಿಯಾಗಿದೆ. ರಾಜಕಾರಣಿಗಳಲ್ಲಿ ಸಜ್ಜನಿಕೆ ಮಾಯವಾಗುತ್ತಿರುವುದು ದುರಂತದ ಸಂಗತಿ. ನಾನು ಕಂಡಂತೆ, ಸುಮಾರು 30 ವರ್ಷಗಳ ಹಿಂದೆ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯ ಸಚಿವರಾಗಿದ್ದ ಕೆ.ಆರ್.ನಗರದ ಎಸ್.ನಂಜಪ್ಪನವರು ಯಾವ ಕೆಳಹಂತದ ನೌಕರರನ್ನೂ ಸಹ ಏಕ ವಚನದಲ್ಲಿ ಮಾತನಾಡಿಸುತ್ತಿರಲಿಲ್ಲ. ಆದರೆ ಇವತ್ತಿನ ಮಂತ್ರಿಗಳ ನಡವಳಿಕೆಯನ್ನು ನೋಡಿದರೆ, ಅಧಿಕಾರದ ದರ್ಪದಿಂದ ಹೀಗೆಲ್ಲಾ ವರ್ತಿಸುತ್ತಿದ್ದಾರೆ ಎನಿಸುತ್ತದೆ.

–ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು

■ ಭಾರತದಲ್ಲಿ ಪ್ರಕಾಶಿಸಿದ ಸೂರ್ಯವಂಶಿ

ಮಾನ್ಯರೆ,

ಏ. 28 ರಂದು ಜೈಪುರದಲ್ಲಿ ಗುಜರಾತ್ ಟೈಟನ್ ವಿರುದ್ಧ ನಡೆದ ಐಪಿಎಲ್ ಪಂದ್ಯದಲ್ಲಿ ರಾಜಸ್ಥಾನ್ ರಾಯಲ್ಸ್ ತಂಡದ 14ರ ಪೋರ, ವೈಭವ್ ಸೂರ್ಯವಂಶಿ 35 ಚೆಂಡುಗಳಲ್ಲಿ ಶತಕ ಬಾರಿಸಿ ದಾಖಲೆ ನಿರ್ಮಿಸಿದ್ದಾರೆ. ಅಂತರ ರಾಷ್ಟ್ರೀಯ ಖ್ಯಾತಿಯ ಅನುಭವಿ ಬೌಲರ್‌ಗಳ ಎಸೆತಗಳನ್ನು ಯಾವ ಅಂಜಿಕೆಯೂ ಇಲ್ಲದೆ ಸಿಕ್ಸರ್‌ಗೆ ಬೀಸುವ ಮೂಲಕ ಬೌಲರ್‌ಗಳ ಬೆವರಿಳಿಸಿದರು.

ತಮ್ಮ ಅಭಿಮಾನಿ ಕ್ರಿಕೆಟಿಗರನ್ನು, ತಮ್ಮ ತವರಿನ ತಂಡವನ್ನು ಮಾತ್ರ ಬೆಂಬಲಿಸುತ್ತಿದ್ದ ಕ್ರಿಕೆಟ್ ಅಭಿಮಾನಿಗಳು ದೇಶಾದ್ಯಂತ ಈ ಕಿರಿಯ ಪೋರನ ಸಾಧನೆಯನ್ನು ಮುಕ್ತಕಂಠದಿಂದ ಹೊಗಳಿ ಜೈಕಾರದ ಸುರಿ ಮಳೆಗರೆಯುತ್ತಿದ್ದುದು ಕಂಡು ಬಂದಿತು.

ಸಣ್ಣ ಬೆವರು ಮಾತ್ರ ಹರಿಸಿ ಭಾರೀ ಸಾಧನೆ ಮಾಡಿದ ಸೂರ್ಯವಂಶಿ ಹೀಗೆಯೇ ಕ್ರಿಕೆಟ್ ಜಗತ್ತಿನಲ್ಲಿ ಪ್ರಕಾಶಿಸಲಿ ಎಂದು ಹಾರೈಸೋಣ. ನಕ್ಷತ್ರವೊಂದು ಉದಯಿಸಿದೆ ಎಂದು ಸ್ಟಾರ್ ಸ್ಪೋರ್ಟ್ಸ್‌ನವರು ಕರೆದಿರುವುದು ಅನ್ವರ್ಥಕವಾಗಿದೆ.

–ಮುಳ್ಳೂರು ಪ್ರಕಾಶ್, ಕನಕದಾಸನಗರ, ಮೈಸೂರು.

■ ಜಾತಿ ಸಮೀಕ್ಷೆ ಪುನಃ ಆಗಲಿ

ಮಾನ್ಯರೆ,

ಜಾತಿ ಸಮೀಕ್ಷೆ ಪೂರ್ಣ ಪ್ರಮಾಣದಲ್ಲಿ ಆಗಿಲ್ಲ. ಜಾತಿ ಸಮೀಕ್ಷೆ ಮಾಡುವ ಮುನ್ನ ಸರ್ಕಾರ ವ್ಯಾಪಕ ಪ್ರಚಾರ ಮಾಡಿ ಜನಜಾಗೃತಿ ಮೂಡಿಸಿ ಯಾವುದೇ ಒಂದು ಕುಟುಂಬವೂ ಸಮೀಕ್ಷೆಯಿಂದ ಹೊರಗುಳಿಯದಂತೆ ಸಮೀಕ್ಷೆ ಮಾಡಬೇಕು. ಪ್ರಸ್ತುತ ಆಗಿರುವ ಜಾತಿ ಸಮೀಕ್ಷೆ ನಾಮಕಾವಸ್ಥೆ ಜಾತಿ ಸಮೀಕ್ಷೆ. ಬಂದ ಪುಟ್ಟ ಹೋದ ಪುಟ್ಟ, ಸಂತೆ ಹೊತ್ತಿಗೆ ಮೂರು ಮೊಳ ನೇಯ್ದು ಕೊಟ್ಟಿರುವುದು. ಈ ಹಿನ್ನೆಲೆಯಲ್ಲಿ ಜಾತಿ ಸಮೀಕ್ಷೆ ಕ್ರಮಬದ್ಧವಾಗಿ ಆಗಲಿ. ಈ ಸಮೀಕ್ಷೆಯಿಂದ ಯಾವ ಒಂದು ಕುಟುಂಬವು ಹೊರಗುಳಿಯದಂತೆ ಕಟ್ಟುನಿಟ್ಟಾದ ಸಮೀಕ್ಷೆ ನಡೆಸಿ ತಾಲೂಕುವಾರು, ವಲಯವಾರು ಪ್ರಕಟಿಸಿ ಆಕ್ಷೇಪಣೆಗೆ ಒಂದು ತಿಂಗಳ ಕಾಲಾವಕಾಶ ನೀಡಿ ನಂತರ ಅಂತಿಮ ಜಾತಿ ಪಟ್ಟಿ ಪ್ರಕಟಿಸಿ ನಂತರದಲ್ಲಿ ಸರ್ಕಾರ ಮೀಸಲಾತಿ ಪ್ರಕಟಿಸಲಿ. ಯಾವ ಜಾತಿ, ಧರ್ಮಕ್ಕೂ ಅನ್ಯಾಯವಾಗದಂತೆ ಸಾಮಾಜಿಕ ನ್ಯಾಯದಡಿಯಲ್ಲಿ ಮೀಸಲಾತಿ ಪ್ರಕಟಿಸಲಿ. ಅಪೂರ್ಣ, ಅವೈಜ್ಞಾನಿಕ ಜಾತಿ ಸಮೀಕ್ಷೆ ವರದಿಯನ್ನು ಸರ್ಕಾರ ಹಿಂಪಡೆಯಬೇಕು ಎಂಬುದು ಸಾರ್ವತ್ರಿಕ ಅಭಿಪ್ರಾಯ ಹಾಗೂ ಒತ್ತಾಯ.

– ಬಿ.ಜಿ. ರಂಗೇಗೌಡ, ಮೈಸೂರು.



ಜೆ.ಬಿ.ರಂಗಸ್ವಾಮಿ
ವಿಶ್ರಾಂತ ಪೊಲೀಸ್ ಅಧಿಕಾರಿ,
ಮೈಸೂರು, ಮೊ.ನಂ.: 94490 10009

ಕಸ್ಟಡಿ

ಓಂಪ್ರಕಾಶ್ ಹತ್ಯೆ ನ್ಯಾಯವೇ!?

ಈ ಸುದ್ದಿ ಸ್ಫೋಟವಾದಾಗ ರಾಜ್ಯವೇ ಮಾತ್ರವಲ್ಲ ದೇಶದ ಜನರಿಗೆ ದಿಗ್ಭ್ರಮೆ. ರಾಜ್ಯ ಪೊಲೀಸ್ ಆಡಳಿತದ ರಕ್ಷಣಾ ಚುಕ್ಕಾಣಿ ಹಿಡಿದಿದ್ದ ಡಿಜಿಪಿಗೇ ಇಂತಹ ಸಾವೇ? ಮುಂದಿನ ಸುದ್ದಿ ಇನ್ನೂ ಅಚ್ಚರಿಯದ್ದು! ಕೊಲೆಗಾರ್ತಿ ಸ್ವಂತ ಹೆಂಡತಿ ಪಲ್ಲವಿ! ಕೌಟುಂಬಿಕ ಜಗಳಕ್ಕಾಗಿ ಈ ಕೊಲೆಯಂತೆ. ಆದರೆ, ಅಷ್ಟು ಬೀಭತ್ಸವಾಗಿ ಸ್ವಂತ ಗಂಡನ ಮೇಲೆರಗಿ ಚಾಕುವಿನಿಂದ ಇರಿದಿರಿದು ಕೊಂದದ್ದು ಭಯಾನಕ ಕೃತ್ಯ.

ಓರ್ವ ವಯಸ್ಸಾದ ಮಹಿಳೆ ತಾಳ್ಮೆ ಕಳೆದುಕೊಂಡು ಕೊಲೆ ಮಾಡುವಂತಹ ಅಪರಾಧವನ್ನು ಗಂಡ ಏನು ಮಾಡಿದ್ದ, ಯಾಕಾಗಿ ಈ ಕೊಲೆ. ಅವರಿಬ್ಬರ ನಡುವೆ ಇದ್ದ ಅಂತಹ ದ್ವೇಷವಾದರೂ ಯಾವುದು.



ಹತ್ಯೆಗೀಡಾದ ನಿವೃತ್ತ ಡಿಜಿಪಿ ಓಂಪ್ರಕಾಶ್

> ❝ ಮದುವೆಗೂ ಮೊದಲೇ ಆಕೆಗೆ ಮಾನಸಿಕ ಸಮಸ್ಯೆ ಇತ್ತಂತೆ. ಸ್ಥಿತಿವಂತರ ಮನೆ ಹುಡುಗಿ. ಚೆಂದದ ಐಪಿಎಸ್ ಹುಡುಗ ಸಿಕ್ಕಿದ. ಗಬಕ್ಕನೆ ಹಿಡಿದು ಕಟ್ಟಿದರು. ಖಾಯಿಲೆ ಮರೆಮಾಚಿದ್ದ ಮಡದಿ, ಮದುವೆ ನಂತರ ತಾನು ನಿತ್ಯ ತೆಗೆದುಕೊಳ್ಳಲೇ ಬೇಕಿದ್ದ ಔಷಧಿ ಕೈಬಿಟ್ಟರು. ಇತ್ತ ಸುಂದರ ಸೌಷ್ಠವವಿದ್ದ ಓಂಪ್ರಕಾಶ್ ಸಹ ನಿತ್ಯ ಖಿನ್ನತೆಯ ಜಂಜಡದಿಂದಾಗಿ ಆಕಾರ ಕಳೆದುಕೊಂಡರು. ಇಲ್ಲಿ ಯಾರನ್ನು ಯಾರೂ ದೂಷಿಸಲಾಗದು. ವಿಷಮ ಪರಿಸ್ಥಿತಿಯೇ ಹೊಣೆಗಾರ. ನಂತರದಲ್ಲಿ ಮಡದಿಯ ರೋಗ ಕೈಮೀರಿ ಉಲ್ಬಣವಾಯಿತು. ಅಗತ್ಯದ ಚಿಕಿತ್ಸೆಯನ್ನೆಲ್ಲ ಕೊಡಿಸಿದರು. ಸ್ವಲ್ಪ ದಿನ ಹುಷಾರಾದಂತೆ ಆಗಿ ಪುನಃ ಉಲ್ಬಣಿಸುತ್ತಿತ್ತು. ಇವೆಲ್ಲ ಸಹಾನುಭೂತಿಗೆ ಅರ್ಹವಾದ ಸಂಗತಿಯಾದರೂ ಮನೆಯಲ್ಲಿದ್ದು ಅನುಭವಿಸುವವರ ಪಾಡು! ದಿನವೂ ತಾಳ್ಮೆಯಿಂದ ವರ್ಷಗಟ್ಟಲೇ ಏಗಬಲ್ಲರೇ.

ಈಗಾಗಲೇ ಸುದ್ದಿ ಮಾಧ್ಯಮದಲ್ಲಿ ಬಿತ್ತರವಾಗಿರುವಂತೆ ಆಕೆ ಏಳೆಂಟು ಬಾರಿ ಚುಚ್ಚಿ... ಚುಚ್ಚಿ... ಕೊಂದಿದ್ದಾಳೆ ಎಂದರೆ ಅದಿನ್ನೆಂತಹ ಆಕ್ರೋಶ. ಅದಿನ್ನೆಂತಹ ಪ್ರತೀಕಾರ! ಅದಿನ್ನಾವ ಬಗೆಯಲ್ಲಿ ಆತ ಆಕೆಗೆ ಚಿತ್ರಹಿಂಸೆ ನೀಡಿರಬೇಕು. ಓರ್ವ ಗೃಹಿಣಿ ಇನ್ನೆಷ್ಟು ಬೇಸತ್ತಿರಬೇಕು. ತಡೆಯಲಾಗದ ಅಸಹನೆಯ ಕಟ್ಟ ಕಡೆಯ ಕೃತ್ಯ ಇದಾಗಿದೆ ಎಂಬೆಲ್ಲ ವಿಶ್ಲೇಷಣೆಗಳು ಕೇಳಿ ಬಂದಿವೆ. ಮುಂದಿನ ತನಿಖಾ ಹೆಜ್ಜೆಗಳು ನಿಜವಾದ ಕಾರಣ ಪತ್ತೆ ಹಚ್ಚಲಿವೆ.

ಯಾವ ಕಾರಣಕ್ಕಾಗಿ ಅತಿ ಹೆಚ್ಚು ಕೊಲೆಗಳಾಗುತ್ತವೆ?

ಹೆಣ್ಣು, ಹೊನ್ನು, ಮಣ್ಣು ಮತ್ತು ಇತ್ತೀಚೆಗೆ ಹೆಚ್ಚಾಗಿರುವ ಅಧಿಕಾರ ದಾಹದ ಜಿದ್ದು ಅಥವಾ ಸೇಡು. ಬಹುಜನ ಹೇಳುವಂತೆ ಹೆಣ್ಣಿಗಾಗಿ ಹೆಚ್ಚು ಮರ್ಡರ್‌ಗಳಾಗುತ್ತವೆ ಎಂಬುದು ನಿಜವಾದರೂ, ಅತೀ ಹೆಚ್ಚು ಮರ್ಡರ್‌ಗಳಾಗುವುದು ಮಣ್ಣಿಗಾಗಿ.

ಹೆಣ್ಣಿಗಾಗಿ ನಡೆಯುವ ಕೊಲೆಗಳು ತೀವ್ರ ಮಾನಸಿಕ ಒತ್ತಡದಿಂದಾಗಿ ಬರ್ಬರ ಹತ್ಯೆಗೆ ಕಾರಣವಾಗಿ ಬಿಡುತ್ತವೆ. ಪರಪುರುಷನ ತೆಕ್ಕೆಯಲ್ಲಿದ್ದ ಪತ್ನಿಯನ್ನು ನೋಡಿದೊಡನೆ ಗಂಡ ಸ್ಥಿಮಿತತೆ ಕಳೆದುಕೊಂಡು ಕೊಚ್ಚಿ ಹಾಕುತ್ತಾನೆ. ಐದು ರೂಪಾಯಿ ಚಿಲ್ಲರೆ ಕೊಡಲು ತಡಮಾಡಿದ್ದಕ್ಕೂ ಕೊಂದವರಿದ್ದಾರೆ! ಇವೆಲ್ಲ ತತ್ ಕ್ಷಣದ ಪ್ರಚೋದನೆಯ ಭೀಕರ ಕೊಲೆಯೇನೋ ನಿಜ. ಅದಕ್ಕೆ ಪ್ರಿ ಪ್ಲ್ಯಾನ್‌ನ ಪಿತೂರಿ, ಒಳಸಂಚುಗಳಿರುವುದು ಕಡಿಮೆ. ಏಕ್ ಮಾರ್ ದೊ ತುಕ್ಡಾ! ಇದೇ sudden provocation.

ಆದರೆ ಆಸ್ತಿಗಾಗಿ ನಡೆಯುವ ಭೀಕರ ಕೊಲೆಗಳಲ್ಲಿ ತಣ್ಣಗಿನ ಕ್ರೌರ್ಯ ಮನೆ ಮಾಡಿರುತ್ತದೆ. ಪಿತೂರಿ, ಹೊಂಚು ಹಾಕಿ ಸುಳಿವೇ ಸಿಗದಂತೆ ಮರ್ಡರ್ ಮಾಡಿಸುವವರೇ ಹೆಚ್ಚು. ವೈರಿಗಳು ಆತ್ಮಹತ್ಯೆ, ಅಪಘಾತಗಳ ರೂಪದಲ್ಲೂ ಕೊಲೆಯಾಗಿರಬಹುದು. ಆಸ್ತಿಗಾಗಿ ಸಂಭವಿಸುವ ಸಾವುಗಳು ಮೇಲ್ನೋಟಕ್ಕೆ ಕೊಲೆ ಎಂದು ಹೇಳಲಾಗದ ರೀತಿಯಲ್ಲಿರುತ್ತವೆ.

ಅಂಕಿ ಅಂಶ ನೋಡಿದಾಗ ಅತೀ ಹೆಚ್ಚು ಭೀಕರ ಕೊಲೆಗಳು ನಡೆದಿರುವುದು ಆಸ್ತಿಯ ದುರಾಸೆಗಾಗಿಯೇ. ಅದು ಹುಟ್ಟಿಸುವ ಆಕ್ರೋಶ, ಜಿದ್ದು ವರ್ಷಗಳ ಕಾಲವೂ ಹಸಿಯಾಗಿಯೇ ಉಳಿದಿದ್ದು ಹೊಸ ಹುನ್ನಾರದ ಸ್ಕೆಚ್ ಹಾಕುತ್ತಿರುತ್ತದೆ.

ಮೊನ್ನಿನ ಡಿಜಿಪಿ ಕೊಲೆಗೆ ಕೂಡ ಆಸ್ತಿಯದೇ ನೆಪ. ಆದರೆ ಅದನ್ನು ಪೂರ್ಣ ನಿಜವೆಂದು ನಂಬಲಾಗದು. ಮಾನಸಿಕ- Schizophrenia- ರೋಗವಿರುವ ಹೆಂಡತಿಯೇ ಕೊಲೆಗಾರ್ತಿ. ಮಾನಸಿಕ ಸ್ಥಿಮಿತತೆ ಇಲ್ಲದ ಆಕೆಯೇ ತನ್ನ ಕೃತ್ಯವನ್ನು ಹೇಳಿ ಶರಣಾಗಿರುವುದರಿಂದ ಸದ್ಯಕ್ಕೆ ಅದೇ ಚಲಾವಣೆಯಲ್ಲಿರುವ ಕಾರಣ.

ಆಕೆಗಿರುವುದು ಅದೊಂದು ಭಯಾನಕ ಮಾನಸಿಕ ಖಾಯಿಲೆ. ಇಂತಹವರನ್ನು ಸಹಿಸಿ ಕೊಳ್ಳೋದು ತುಂಬಾ ಕಷ್ಟ ಸದಾ ಮಾನಸಿಕ ಒತ್ತಡದಲ್ಲಿರುತ್ತಾರೆ. ಕ್ಷಣ ಚಿತ್ತ ಕ್ಷಣ ಪಿತ್ತದ ತಿಕ್ಕಲು ನಡವಳಿಕೆ. ಈಗಿದ್ದಂತೆ ಇನ್ನೈದು ನಿಮಿಷದಲ್ಲಿ ಇರಲಾರರು. ಸದಾ ನಿಷ್ಕಾರಣವಾದ ಆಕ್ರೋಶ, ಅನುಮಾನ. ದೂಷಣೆ ಮಾಡಿ ಇಲ್ಲದ ಜಗಳ ತೆಯುತ್ತಾರೆ ಯಾವಾಗ ಏನು ಮಾಡುತ್ತಾರೆ ಎಂದು ಹೇಳಲಾಗದು. ಆವೇಶ ಭುಗಿಲೆದ್ದು ಎದುರಿದ್ದವರನ್ನೇ ಒದ್ದು ಹಾಕುವುದು. ಮನೆಯ ಸಾಮಾನುಗಳನ್ನು ಕುಟ್ಟಿ ಪುಡಿಗಟ್ಟುವುದು ನಡೆಯುತ್ತಲೇ ಇರುತ್ತದೆ. ಕೊಲೆ ಬೆದರಿಕೆ ಹಾಕೋದು ಬೇರೆ. ಇಂಥವರು ಮನೆಯೊಳಗೇ ಇದ್ದರೆ ಯಾವತ್ತೂ ಅಪಾಯ ತಪ್ಪಿದ್ದಲ್ಲ. ಆದ್ದರಿಂದಲೇ ಓಂ ಪ್ರಕಾಶ್ ಪ್ರತ್ಯೇಕವಾಗಿ ನೆಲೆಸಿದ್ದರು. ಮನೆಯಲ್ಲಿ ಇದ್ದಾಗಲೂ ಸ್ವರಕ್ಷಣೆಗಾಗಿ ಪಿಸ್ತೂಲು ಹಿಡಿದು ತಿರುಗುತ್ತಿದ್ದರು ಎಂದೆಲ್ಲಾ ಹೇಳಲಾಗಿದೆ. ಇವೆಲ್ಲವೂ ಎಷ್ಟು ನಿಜವೋ, ಸುಳ್ಳೋ ಗೊತ್ತಿಲ್ಲ.

* * * *

ಓಂ ಪ್ರಕಾಶ್‌ರ ಅಧೀನದಲ್ಲಿ ಎರಡು ವರ್ಷ ಕೆಲಸ ಮಾಡಿದ್ದೆ (2006–07 ಪೊಲೀಸ್ ಅಕ್ಯಾಡೆಮಿ ಮೈಸೂರು). ಭೂಮಿ ತೂಕದ ತಾಳ್ಮೆಯ ಮನುಷ್ಯ. ಮಿತಭಾಷಿ. ನಕ್ಕದ್ದೂ ಕಡಿಮೆ. ಸದಾ ಮ್ಲಾನತೆ. ಯಾರ ಮೇಲೂ ಎಂದೂ ರೇಗಿದವರಲ್ಲ. ದಢೂತಿ ಎನ್ನಬಲ್ಲ ಆಕಾರ. ಕುರ್ಚಿ ಭರ್ತಿ ಕೂರೋರು. ಹುಲ್ಲು ತಿಂದ ಬಸಣ್ಣಾ ಹ್ಯೂಂ ಸ್ವಭಾವ. ತಾವಾಯ್ತು ತಮ್ಮ ಪಾಡಾಯ್ತು ಎಂಬಂತೆ ಮಾತುಕತೆ.

ಆ ರಣ ಪಿಶಾಚಿಯನ್ನು - Monster – ಕೊಚ್ಚಿ ಉರುಳಿಸಿದ್ದೇನೆ, ಅದೋ ಇಲ್ಲೇ ಬಿದ್ದಿದೆ! ಎಂಬ ಕೊಲೆಗಾರ್ತಿಯ ಆವೇಶದ ಉದ್ಗಾರ ಅವರಿಗೆ ಎಷ್ಟೂ ಹೋಲಿಕೆಯಾಗದು.

* * * *

ಅದೊಂದು ದಿನ ಅವರ ಆರ್ಡರ್ಲಿ ಬಂದು 'ಸಾಹೇಬ್ರು ನಿಮ್ಮನ್ನ ಕರೀತೌರೆ, ನೋಡ್ಬೇಕಂತೆ' ಎಂದ.

ಅಪರೂಪದ ಬುಲಾವ್. ಅಕ್ಯಾಡೆಮಿಯಲ್ಲಿ ಹೇಳಿ ಕಳಿಸುವಂತಹ ತುರ್ತು ಕೆಲಸವೇನೂ ಇರೋದಿಲ್ಲ. ಯಾಕಿರಬಹುದು? ಊಹಿಸಲಾಗಲಿಲ್ಲ.

ಹೋಗಿ ಸೆಲ್ಯೂಟ್ ಹೊಡೆದೆ. ಕೂರಲು ಹೇಳಿ ತಮ್ಮ ಪಾಡಿಗೆ ಫೈಲ್ ಕೆಲಸ ಮುಂದುವರೆಸಿದರು. ಕಾಲು ಗಂಟೆ ಹೋಗಿ ಮುಕ್ಕಾಲು ಗಂಟೆ ಮುಗಿಯಿತು. ನನ್ನ ಕುತೂಹಲ ಆತಂಕವಾಗಿ ಬೆಳೆಯಿತು– ಏನಾದರೂ ವರ್ಗಾವಣೆ! ಕಳೆದ ಐದಾರು ವರ್ಷ ಕುಟುಂಬದಿಂದ ದೂರವಿದ್ದು ಇತ್ತೀಚೆಗೆ ಸ್ವಂತಮನೆ ಸೇರಿಕೊಂಡಿದ್ದೆ. ಮತ್ತೆ ಬೆಳಗಾಂ, ಧಾರವಾಡ ಅಂತ ಎಲ್ಲಿಗೋ ದೂರ ಬಿಸಾಡಿದರೆ ಗತಿ ಏನಪ್ಪಾ.

'ನೀವು ಯಾವ ಸಬ್ಜೆಕ್ಟ್ ತಗೊಳ್ಳೋದು. ಅಂತ ಮಾತು ಶುರು ಮಾಡಿದವರು, ಒಂದರ ಹಿಂದೆ ಒಂದು, ಅನೇಕ ಪ್ರಶ್ನೆಗಳನ್ನು ಕೇಳತೊಡಗಿದರು. ಉತ್ತರಿಸುತ್ತಾ ಹೋದೆ. ಅದಕ್ಕೆ ಸಹಜ ಪ್ರತಿಕ್ರಿಯೆಯ ಯಾವುದೇ ಮಾತಿಲ್ಲ. ಆ ಪ್ರಶ್ನೆಗಳೆಲ್ಲ ಯಾಕಾಗಿ, ಅದನ್ನೂ ಹೇಳಲೊಲ್ಲರು. ಇಪ್ಪತ್ತು ನಿಮಿಷ ಕಳೆಯಿತು. ಅವರೇಕೆ ಕರೆಸಿರಬಹುದು... ಜಾಡೇ ಸಿಕ್ಕಲಿಲ್ಲ.

ನಂತರ ಯಾರೋ ಮೇಲಧಿಕಾರಿಗೆ, ಡಿಜಿಯವರೇ ಇರಬೇಕು ಕಾಲ್ ಮಾಡಿ ಮಾತಾಡಿದರು. ನನ್ನ ಹೆಸರೂ ಕೇಳಿಸಿತು. ಎತ್ತಂಗಡಿ ಖಚಿತ. ಪುನಃ ಅರೆ ಸಂಸಾರಿ ಯೋಗ. ಊರೂರು ಸುತ್ತಾಟ. ರಗಳೆ ಬದುಕು ಶುರು.

'ಹೈದರಾಬಾದ್‌ನಲ್ಲಿ Trainers Training courseಗೆ ಹಾಕಿದ್ದೀನಿ ಹೋಗಿ. ಮುಂದಿನ ವಾರದಿಂದ ಒಂದು ತಿಂಗಳು' ಎಂದರು.

ಅದಕ್ಕೆ ಏನಾದರೊಂದು ಪ್ರಶ್ನೆ ಕೇಳಬೇಕಲ್ಲಾ, ಕೇಳಿದೆ.

'ಆಂಧ್ರಪ್ರದೇಶ್ ಪೊಲೀಸ್ ಅಕ್ಯಾಡೆಮಿನಾ ಸರ್?'

'ಅಲ್ರೀ, ನ್ಯಾಷನಲ್ ಪೊಲೀಸ್ ಅಕ್ಯಾಡೆಮಿ. ಐಪಿಎಸ್ ಅಧಿಕಾರಿಗಳ ತರಬೇತಿ ಕೇಂದ್ರ.

Its the Flagship Police Institution of our country! ತರಬೇತಿ ವಿವರ ತಿಳಿಸಿದರು.

'ನನ್ನ ಸರ್ವೀಸ್ ಕಡಿಮೆ ಇದೆ. ಬೇಗ ರಿಟೈರ್ ಆಗ್ತೀನಲ್ಲ ಸರ್,

'ಏನೂ ಪರ್ವಾಗಿಲ್ಲ. ರಿಟೈರ್ ಆದ ಮೇಲೂ ನಿಮ್ಮ ಸರ್ವೀಸ್ ತಗೋಳ್ತೀವಿ. ಹೋಗ್ಬನ್ನಿ' ಅಂದ್ರು.

ಕೈಕೆಳಗಿನವರು ಮುಂದೆ ಮಾತಾಡದಂತೆ ಒಪ್ಪಿಸುವ ಕಲೆ ಅವರಿಗೆ ಕರಗತವಾಗಿತ್ತು. ಕಮಕ್–ಕಿಮಕ್ ಎನ್ನದೆ ಹೊರಡಲು ಸಿದ್ಧನಾದೆ. ಅದಾದ ಮೇಲೆ ನಾಲ್ಕಾರು ಬಾರಿ ಕರೆಸಿ ಟ್ರೇನಿಂಗ್ ಮಹತ್ವವನ್ನು ಹೇಳಿದರು.

ಟ್ರೇನಿಂಗ್ ಮುಗಿಸಿ ಬಂದ ಮೇಲೂ ತನಿಖೆಯಲ್ಲಿ SIMULATION ವಿಧಾನದ ಬಗ್ಗೆ ವಿವರಿಸುತ್ತಲೇ ಇದ್ದರು. ಸಬ್‌ಇನ್ಸ್‌ಪೆಕ್ಟರ್, DySp ಟ್ರೇನಿಗಳಿಗೆ ಅದರ ಮಹತ್ವವನ್ನು ಒತ್ತಿ ಹೇಳಬೇಕೆಂಬ ಅಭಿಲಾಷೆ ಅವರದು.

ಹಾಗೆ ಕರೆಸಿದಾಗಲೆಲ್ಲ ಜೊತೆಯಲ್ಲಿ ಬೇರೆ ಬೇರೆ ವಿಭಾಗದ ಮೀಟಿಂಗ್‌ಗಳನ್ನೂ ಮಾಡುತ್ತಿದ್ದರು. ಅದೊಂದು ದಿನ ಮೆಸ್ ಮೀಟಿಂಗ್ ಕರೆದಾಗ ಕ್ಯಾಡೆಟ್‌ಗಳಿಗೆ ಎಂತೆಂತಹ ಆಹಾರ ಕೊಡಬೇಕೆಂಬುದನ್ನು ಹೇಳುತ್ತಾ ವಾರಕ್ಕೆ ಎರಡು ದಿನ ಬೆಲ್ಲದ ಪಾಯಸ ಮಾಡಿಸಿ ಕೊಡಿ. ಶರೀರಕ್ಕೆ ತಂಪು. ಉರಿ ಬಿಸಲ್ನಲ್ಲಿ ಪೆರೇಡ್ ಮಾಡೋದ್ರಿಂದ ಬೆಲ್ಲ Bodyಗೆ ಹೋಗೋದು ಒಳ್ಳೇದು.

'Ensure that ರಾತ್ರಿ ಒಂಬತ್ತು ಗಂಟೆಯೊಳಗೆ ಎಲ್ಲಾ ಕ್ಯಾಡೆಟ್ಸೂ ಮಲಗಿರಬೇಕು. ಬೆಳಿಗ್ಗೆ ಕ್ಲಾಸಲ್ಲಿ ಅವರು ನಿದ್ದೆ ಮಾಡೋದು ಬೇಡ!'

ಕ್ಯಾಡೆಟ್‌ಗಳಿಗೆ OLQ (Officers Like Qualities) ಅಂದರೇನು ಎಂಬುದನ್ನು ನೀವು ಸರಿಯಾಗಿ ಹೇಳಿಕೊಡಬೇಕು. ಲುಂಗಿ ಪಂಚೆ, ಚಪ್ಪಲಿಯಲ್ಲಿ ಅವರು ಹೊರಗಡೆ shabby ಯಾಗಿ ತಿರುಗಾಡಕೂಡದು. ಯೂನಿಫಾರಂನಲ್ಲಿರಬೇಕು. ಇಲ್ಲವೇ ಟ್ರ್ಯಾಕ್ ಸೂಟಿನಲ್ಲಿರಬೇಕು. ನೋಡಿದೊಡನೆ ಪೊಲೀಸ್ ಆಫಿಸರ್ ಥರಾ ಕಾಣಬೇಕು. They should look Smart ಹಾಗೆ ತಿದ್ದಿ ಹೇಳಿ. ಇಂತಹ ಹಲವು ಹತ್ತು ಉಪಯುಕ್ತ ಸೂಚನೆಗಳು. ತನ್ನ ಅಧೀನದ ಟ್ರೇನಿಗಳ ಬೇಕು ಬೇಡಗಳ ಬಗ್ಗೆ ಅವರಿಗಿದ್ದ ಆಸಕ್ತಿ, ಕಾಳಜಿ.

ಅವರೇ ಅಪರೂಪಕ್ಕೆ ತೆಗೆದುಕೊಳ್ಳುತ್ತಿದ್ದ ವಿಶೇಷ ಕ್ಲಾಸುಗಳಲ್ಲಿ ಟ್ರೇನರ್ಸ್ ಆದ ನಾವೂ ಕೂರುತ್ತಿದ್ದೆವು. ಮದುವೆ ವಿಷಯ ಬಂದಾಗ, ಹುಡುಗಿ ಒಳ್ಳೆಯ ವಿದ್ಯಾವಂತೆ, ರೂಪವಂತೆ. ದೊಡ್ಡ ಕುಟುಂಬದಿಂದ ಬಂದವಳು ಎಂಬುದೇನೋ ಸರಿ. ಆದರೆ ಅವಳ ಸ್ವಭಾವ ಹೇಗೆ Temperament ಹೇಗೆ ಎಂಬುದನ್ನೂ ಅಗತ್ಯವಾಗಿ ತಿಳಿದುಕೊಳ್ಳಬೇಕು. ಹುಚ್ಚು, ತಿಕ್ಕಲು, ಬೆಪ್ಪುತನ ಇರೋರನ್ನು ಕಟ್ಟಿಕೊಂಡರೆ ಗಂಡನ ಪಾಡು ನಾಯಿ ಪಾಡಾಗಿ ಬಿಡುತ್ತೆ. ಈ ಹುಚ್ಚುತನಾ ಅನ್ನೋದು runs in the family. ಅವಳ ರೂಪ ವಿದ್ಯೆಗಿಂತ ಸರಿಯಾಗಿ ವಿಚಾರಿಸಬೇಕಾದದ್ದು ಅವಳ ಗುಣ ಸ್ವಭಾವ ಮತ್ತು ಅವಳ ಫ್ಯಾಮಿಲಿ ಹಿಸ್ಟರಿ ಎಂದು ಒಂದೆರಡು ಬಾರಿ ಒತ್ತಿ ಮಾತಾಡಿದ್ದರು. ಅದು ಅವಿವಾಹಿತ ಕ್ಯಾಡೆಟ್ಟುಗಳಿಗೆ ಹೇಳಿದ ಕಿವಿಮಾತು ಅಂದುಕೊಂಡಿದ್ದೆ. ತಮ್ಮ ಸ್ವಂತ ಸಮಸ್ಯೆಯನ್ನೇ ಹೇಳ್ತಿದ್ದಾರೆ ಅಂತ ಆಗ ಗೊತ್ತಾಗಿರಲಿಲ್ಲ. ಅವರ ವೈಯಕ್ತಿಕ ವಿಷಯ ಯಾರಿಗೂ ಗೊತ್ತಿರಲಿಲ್ಲ. ಫ್ಯಾಮಿಲಿ ಬೆಂಗಳೂರಲ್ಲಿತ್ತು. ಇವರೊಬ್ಬರೆ ಮೈಸೂರಿನ ಕ್ವಾರ್ಟರ್ಸ್‌ನಲ್ಲಿದ್ದರು.

* * * *

ಈಗಿನ ದುರಂತವನ್ನು ನೋಡಿದ ಮೇಲೆ ಅವರೆಷ್ಟು ಏಕಾಂಗಿಯಾಗಿ ದುಃಖ ತಿನ್ನುತ್ತಿದ್ದರು ಎಂಬುದು ವೇದ್ಯವಾಗುತ್ತದೆ. ಆಗಿದ್ದ ಡ್ರೈವರುಗಳು ಈಗ ಹೇಳುವಂತೆ, ಮನೆಯಲ್ಲಿ ಹತ್ತಿದ ಜಗಳ ಅಷ್ಟು ಬೇಗ ತಣ್ಣಗಾಗುತ್ತಿರಲಿಲ್ಲವಂತೆ. ಯಾವುದಕ್ಕಾಗಿ ಹಾರಾಟ, ಕೀರಾಟ ತಿಳಿಯುತ್ತಿರಲಿಲ್ಲ. ಮಡದಿ ಬೈಯ್ಯುತ್ತಿದ್ದರೆ ಇವರು ಗಣಪತಿಯಂತೆ ಸುಮ್ಮನೆ ಕೂತಿರುತ್ತಿದ್ದರಂತೆ. ನಂತರ ಕಾರಿಗೆ ಬಂದಾಗ ಒಂದೇ ಮಾತು. ಆಫೀಸು ಅಷ್ಟೇ. ಹೋಗೋಣಾ ಅಂತಲೂ ಹೇಳುತ್ತಿರಲಿಲ್ಲ. ಬೇರ್‍ಯಾವುದೇ ಮಾತಿಲ್ಲ. ಬೈಗಳು ತಿಂದ ಬಾಲಕನಂತೆ ಮೌನ. ಇದು ನಿತ್ಯದ ಚರ್ಯೆ. ಎಷ್ಟು ದೊಡ್ಡ ಅಧಿಕಾರಿಯಾದರೇನು ಇವೆಲ್ಲ ವನ್ನೂ ಹೇಳಿಕೊಳ್ಳಬಲ್ಲರೇ? ಅದೆಷ್ಟು ನೋವನ್ನು ಒಬ್ಬರೇ ತಿಂದಿದ್ದರೋ ನರಳಿದ್ದರೋ, ಬುದ್ಧಿ ಸ್ಥಿಮಿತತೆ ಇಲ್ಲದವರ ಜೊತೆ ಎಷ್ಟೆಂದು ಏಗಬಹುದು. ಯಾವ ಮಾತನ್ನೂ ಸರಿಯಾಗಿ ಗ್ರಹಿಸದೆ ಬೇರೇನೋ ಅರ್ಥ ಕಟ್ಟಿ ಜಗಳಾಡುವ ಪತ್ನಿ ಯನ್ನು ಹೇಗೆ ಸಮಾಧಾನಿಸಬಹುದು. ಹೇಳಿದ ಮಾತನ್ನೆಲ್ಲ ಅನುಮಾನ, ಅಪನಂಬಿಕೆಯಿಂದ ನೋಡಿದರೆ ಮಾತು ಮುಂದುವರೆಯಬಲ್ಲದೇ. ಇವನು ತನ್ನನ್ನು ಕೊಲೆ ಮಾಡುತ್ತಾನೆ ಎಂದು ಸದಾ ಸಂಶಯಿಸುತ್ತಾ ಜಗಳ ತೆಗೆದರೆ ಹೇಗೆ ನಿಭಾಯಿಸಬಹುದು. ಲಕ್ಷಾಂತರ ಖರ್ಚು ಮಾಡಿ ಚಿಕಿತ್ಸೆಯನ್ನೇನೋ ಕೊಡಿಸಿದ್ದರು. ಆದರೆ ಹುಚ್ಚು ಯಾವಾಗ ಕೆರಳುತ್ತೆ, ವ್ಯಗ್ರತೆಗೆ ತಿರುಗುತ್ತೆ ಅನುಭವಿಸಿದವರೇ ಬಲ್ಲರು.

ಈಗಿನ ದುರಂತಕ್ಕೆ ಕಾರಣವಾಗಿರುವ ಆಸ್ತಿ ವಿವಾದ ದೊಡ್ಡದೂ ಅಲ್ಲ. ಕ್ಯಾನ್ಸರ್ ಪೀಡಿತ ಸೋದರಿ ಹೆಸರಿಗೆ ಒಂದು ಚಿಕ್ಕ ಭಾಗ ಬರೆದಿದ್ದಾರೆ. ಬಹುಶಃ ಅಕೌಂಟ್ ಅಡ್ಜಸ್ಟ್‌ಮೆಂಟಿಗೂ ಇದ್ದಿರಬಹುದು. ಇದೆಲ್ಲವನ್ನೂ ವಿವರಿಸಿದರೂ ಅರ್ಥವಾಗದ ಹುಚ್ಚು ಮಡದಿ. ವಿಚಿತ್ರ ಮನೋರೋಗ ಇದ್ದವರು ಹೇಗೆ ವರ್ತಿಸುತ್ತಾರೆಂದು ಹೇಳಲಾಗದು. ಪ್ರತಿಯೊಂದಕ್ಕೂ ಏತಿ ಅಂದರೆ ಪ್ರೇತಿ. ಯಾವುದೋ ಮಾತಿನ ಜಗಳ ವಿಕೋಪಕ್ಕೆ ಹೋಗಿ ದುರಂತದಲ್ಲಿ ಅಂತ್ಯವಾಗಿದೆ. ಅದೂ ಹೇಗೆ?

ಆಕೆ ತನ್ನ ತಪ್ಪೊಪ್ಪಿಗೆಯಲ್ಲಿ ಹೇಳಿರುವಂತೆ ಏಳೆಂಟು ಬಾರಿ ಚಾಕುವಿನಲ್ಲಿ ಮನ ಬಂದಂತೆ ಇರಿದ ಮೇಲೆ, ಓಂಪ್ರಕಾಶ್ ಕಿರಿಚುತ್ತಾ ಕೆಳ ಬಿದ್ದು ಒದ್ದಾಡುತ್ತಿದ್ದರಂತೆ. ನಿನಗೆ ನರಕ ತೋರಿಸುತ್ತೇನೆ ಎಂದು ಗಾಯಗಳ ಮೇಲೆ ಹಾರ್ಪಿಕ್ ದ್ರಾವಣ ಸುರಿದೆ. ಮಲಗಿದ್ದಂತೆಯೇ ಎದ್ದೆದ್ದು ಬೊಬ್ಬೆಹಾಕಿದ. ಇಪ್ಪತ್ತೈದು ನಿಮಿಷವಾದರೂ ಸತ್ತಿರಲಿಲ್ಲ. ಅವನ ಮೇಲೆ ಮತ್ತೆ ಖಾರದ ಪುಡಿ ಸುರಿದೆ... ! ಒದ್ದಾಡಿ ಒದ್ದಾಡಿ ಸತ್ತ. ಹೀಗೆ ಹೇಳುವಾಗ ಆಕೆಗೆ ಒಂದು ಪಶ್ಚಾತ್ತಾಪದ ಎಳೆಯೂ ಇರಲಿಲ್ಲ. ತಾನು ಮಾಡಿದ್ದೇ ಸರಿ ಎಂಬ ಆಕ್ರೋಶಭರಿತ ಛಲ.

ಮದುವೆಗೂ ಮೊದಲೇ ಆಕೆಗೆ ಮಾನಸಿಕ ಸಮಸ್ಯೆ ಇತ್ತಂತೆ. ಸ್ಥಿತಿವಂತರ ಮನೆ ಹುಡುಗಿ. ಚೆಂದದ ಐಪಿಎಸ್ ಹುಡುಗ ಸಿಕ್ಕಿದ. ಗಬಕ್ಕನೆ ಹಿಡಿದು ಕಟ್ಟಿದರು. ಖಾಯಿಲೆ ಮರೆಮಾಚಿದ್ದ ಮಡದಿ , ಮದುವೆ ನಂತರ ತಾನು ನಿತ್ಯ ತೆಗೆದು ಕೊಳ್ಳಲೇ ಬೇಕಿದ್ದ ಔಷಧಿ ಕೈಬಿಟ್ಟರು. ಇತ್ತ ಸುಂದರ ಸೌಷ್ಠವವಿದ್ದ ಓಂ ಪ್ರಕಾಶ್ ಸಹ ನಿತ್ಯ ಖಿನ್ನತೆಯ ಜಂಜಡದಿಂದಾಗಿ ಆಕಾರ ಕಳೆದು ಕೊಂಡರು. ಇಲ್ಲಿ ಯಾರನ್ನು ಯಾರೂ ದೂಷಿಸಲಾಗದು. ವಿಷಮ ಪರಿಸ್ಥಿತಿಯೇ ಹೊಣೆಗಾರ. ನಂತರದಲ್ಲಿ ಮಡದಿಯ ರೋಗ ಕೈಮೀರಿ ಉಲ್ಬಣವಾಯಿತು. ಅಗತ್ಯದ ಚಿಕಿತ್ಸೆಯನ್ನೆಲ್ಲ ಕೊಡಿಸಿದರು. ಸ್ವಲ್ಪ ದಿನ ಹುಷಾರಾದಂತೆ ಆಗಿ ಪುನಃ ಉಲ್ಬಣಿಸುತ್ತಿತ್ತು. ಇವೆಲ್ಲ ಸಹಾನುಭೂತಿಗೆ ಅರ್ಹವಾದ ಸಂಗತಿಯಾದರೂ ಮನೆಯಲ್ಲಿದ್ದು ಅನುಭವಿಸುವವರ ಪಾಡು! ದಿನವೂ ತಾಳ್ಮೆಯಿಂದ ವರ್ಷಗಟ್ಟಲೇ ಏಗಬಲ್ಲರೇ.

ಬಿಸಿಲಾಗಲಿ, ಮಳೆಯಾಗಲಿ ನೆರಳಾಗಿ ನಾನು ಬರುವೆನು ಜೊತೆಗೆ ಎಂದು ಹಾಡುಬಲ್ಲರೇ. ಅದ್ದೇಕೆ ಸಂಭಾವಿತರಿಗೇ ಇಂತಹ ಸಂಗಾತಿ ಸಿಗುತ್ತಾರೋ...

ದುರದೃಷ್ಟದ ಪ್ರಹಾರವೆಂದರೆ ಇದೇನಾ?

ಸರ್ ನಿಮ್ಮ ಆತ್ಮಕ್ಕೆ ಶಾಂತಿ ಸಿಗಲಿ.

ಮಂಗಳೂರಲ್ಲಿ ಹಿಂದೂ ಕಾರ್ಯಕರ್ತನ ಹತ್ಯೆ ಖಂಡಿಸಿ ಮೈಸೂರಲ್ಲಿ ಬಿಜೆಪಿ ಪ್ರತಿಭಟನೆ



ಮೈಸೂರಿನ ರಾಮಸ್ವಾಮಿ ವೃತ್ತದಲ್ಲಿ ಬಿಜೆಪಿ ನಗರ ಮತ್ತು ಗ್ರಾಮಾಂತರ ಪದಾಧಿಕಾರಿಗಳು ಶುಕ್ರವಾರ ಪ್ರತಿಭಟನೆ ನಡೆಸಿದರು.

ಮೈಸೂರು, ಮೇ 2(ಎಸ್‌ಪಿಎನ್)– ಮಂಗಳೂರಿನಲ್ಲಿ ಭಜರಂಗದಳ ಕಾರ್ಯಕರ್ತ ಸುಹಾಸ್ ಶೆಟ್ಟಿ ಭೀಕರ ಹತ್ಯೆಗೆ ರಾಜ್ಯ ಸರ್ಕಾರದ ಹಿಂದೂ ವಿರೋಧಿ ಧೋರಣೆಯೇ ಕಾರಣ ಎಂದು ಆರೋಪಿಸಿ ಬಿಜೆಪಿ ನಗರ ಮತ್ತು ಗ್ರಾಮಾಂತರ ಘಟಕದ ಕಾರ್ಯಕರ್ತರು ಮೈಸೂರಿನ ರಾಮಸ್ವಾಮಿ ವೃತ್ತದಲ್ಲಿ ಶುಕ್ರವಾರ ಪ್ರತಿಭಟನೆ ನಡೆಸಿದರು.

ಬಿಜೆಪಿ ಮೈಸೂರು ನಗರಾಧ್ಯಕ್ಷ ಎಲ್.ನಾಗೇಂದ್ರ ಹಾಗೂ ಗ್ರಾಮಾಂತರ ಘಟಕದ ಅಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ ನೇತೃತ್ವದಲ್ಲಿ ನಡೆದ ಈ ಪ್ರತಿಭಟನೆಯಲ್ಲಿ ರಾಜ್ಯ ಸರ್ಕಾರ ಹಾಗೂ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ವಿವಿಧ ಘೋಷಣೆಗಳನ್ನು ಕೂಗಿ ಆಕ್ರೋಶ ವ್ಯಕ್ತಪಡಿಸಲಾಯಿತು.

ಶಾಸಕ ಟಿ.ಎಸ್.ಶ್ರೀವತ್ಸ ಮಾತನಾಡಿ, ಭಜರಂಗ ದಳದ ಕಾರ್ಯಕರ್ತ ಸುಹಾಸ್ ಶೆಟ್ಟಿ ಕೊಲೆಯಲ್ಲಿ ಒಂದು ಕೋಮಿನ ಯುವಕರ ಗುಂಪು ನೇರ ಭಾಗಿಯಾಗಿದ್ದು, ಇವರ ವಿರುದ್ಧ ಕಠಿಣ ಕ್ರಮ ಜರುಗಿಸುವಂತೆ ಒತ್ತಾಯಿಸಿದರಲ್ಲದೆ, ರಾಜ್ಯಾದ್ಯಂತ ಹಿಂದೂ ಕಾರ್ಯಕರ್ತರು ಓಡಾಡುವ ವೇಳೆ ಅವರ ವಾಹನವನ್ನು ಪೊಲೀಸರು ಆಯುಧಗಳಿವೆಯೇ ಎಂಬುದಾಗಿ ಪರಿಶೀಲಿಸುತ್ತಾರೆ. ಆದರೆ, ಅನ್ಯಕೋಮಿನ ಯುವಕರ ವಾಹನ ಪೊಲೀಸರ ಪಕ್ಕದಲ್ಲೇ ಹೋದರೂ ತಪಾಸಣೆಯನ್ನೇ ಮಾಡುತ್ತಿಲ್ಲ. ಪೊಲೀಸರ ಈ ಕಾರ್ಯವೈಖರಿ ಗಮನಿಸಿದರೆ, ಸುಹಾಸ್ ಶೆಟ್ಟಿ ಸಾವಿಗೆ ರಾಜ್ಯ ಸರ್ಕಾರವೇ ಪರೋಕ್ಷ ಕಾರಣ ಎಂದು ಆರೋಪಿಸಿದರು.

ಮಾಜಿ ಶಾಸಕ ಎಲ್.ನಾಗೇಂದ್ರ ಮಾತನಾಡಿ, ಡಿಜೆ ಹಳ್ಳಿ ಮತ್ತು ಕೆಜಿ ಹಳ್ಳಿ ಪ್ರಕರಣದಲ್ಲಿ ರಾಜ್ಯ ಸರ್ಕಾರ ನಡೆದುಕೊಂಡ ರೀತಿ ಗಮನಿಸಿದರೆ, ಕಾಂಗ್ರೆಸ್ ಸರ್ಕಾರದಲ್ಲಿ ಹಿಂದೂಗಳು ಬದುಕುವುದೇ ಕಷ್ಟ ಎನ್ನುವ ಭಾವನೆ ಮೂಡುತ್ತಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಕಾಂಗ್ರೆಸ್ ಪಕ್ಷದ ಒಂದು ಕೋಮಿನ ತುಷ್ಟೀಕರಣ ಸಿದ್ಧಾಂತಕ್ಕೆ ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಸಂಪೂರ್ಣ ಹದಗೆಟ್ಟಿದೆ. ಹಿಂದೂಗಳು ಇನ್ನುಂದೆ ಒಗ್ಗಟ್ಟಾಗಿ ಬದುಕುವುದನ್ನು ಕಲಿಯಬೇಕು ಎಂದು ಸಲಹೆ ನೀಡಿದರು.

ಬಿಜೆಪಿ ಮಾಧ್ಯಮ ರಾಜ್ಯ ವಕ್ತಾರ ಎಂ.ಜಿ. ಮಹೇಶ್ ಮಾತನಾಡಿ, ಸಿದ್ದರಾಮಯ್ಯ ಸರ್ಕಾರ, ರಾಜ್ಯದಲ್ಲಿ ಅಧಿಕಾರ ವಹಿಸಿ ಕೊಂಡ ದಿನದಿಂದ ಹಿಂದೂ ವಿರೋಧಿ ನೀತಿಯನ್ನು ತಮ್ಮ ಕಾರ್ಯವೈಖರಿಯಲ್ಲಿ ಅಳವಡಿಸಿಕೊಂಡಿದ್ದಾರೆ ಎಂದು ದೂರಿದರು.

ಪ್ರತಿಭಟನೆಯಲ್ಲಿ ಜಿಲ್ಲಾ ಎಸ್ಸಿ ಮೋರ್ಚಾ ಅಧ್ಯಕ್ಷ ಶೈಲೇಂದ್ರ, ಬಿಜೆಪಿ ನಗರ ಘಟಕದ ಪ್ರಧಾನ ಕಾರ್ಯದರ್ಶಿಗಳಾದ ಕೇಬಲ್ ಮಹೇಶ್, ಬಿ.ಎಂ.ರಘು, ಉಪಾಧ್ಯಕ್ಷ ಜೋಗಿ ಮಂಜು, ವೇದರಾಜು, ಚಾಮರಾಜ ಕ್ಷೇತ್ರದ ಯುವ ಮುಖಂಡ ಪುನೀತ್, ಮೈಸೂರು ನಗರ ಪಾಲಿಕೆ ಮಾಜಿ ಸದಸ್ಯ ಬಿ.ವಿ.ಮಂಜುನಾಥ್, ಚಾಮರಾಜ ಕ್ಷೇತ್ರದ ಅಧ್ಯಕ್ಷ ದಿನೇಶ್‌ಗೌಡ, ಚಾಮುಂಡೇಶ್ವರಿ ನಗರಮಂಡಲ ಅಧ್ಯಕ್ಷ ರಾಕೇಶ್ ಭಟ್, ಮುಖಂಡರಾದ ಗೋಕುಲ್ ಗೋವರ್ಧನ್, ಬಿಜೆಪಿ ಅಲ್ಪಸಂಖ್ಯಾತ ಘಟಕದ ರಾಜ್ಯಧ್ಯಕ್ಷ ಡಾ.ಅನಿಲ್ ಥಾಮಸ್, ಸದಸ್ಯ ಪ್ರಭಾಕರ್ ಜೈನ್ ಕಿರಣ್ ಜಯರಾಮೇಗೌಡ, ಪೈ.ರವಿ, ಕೆ.ಆರ್. ಕ್ಷೇತ್ರದ ಅಧ್ಯಕ್ಷ ರಘು ಅರಸ್, ಪುನೀತ್, ಉಪೇಂದ್ರ, ಹಿನಕಲ್ ಪಾಪಣ್ಣ, ವೇಲು, ಕಿಶೋರ್, ದೇವರಾಜೇಗೌಡ, ಜಯಪ್ಪ, ಸತೀಶ್, ಮಹೇಶ್‌ರಾಜೇ ಅರಸ್, ನಂದೀಶ್‌ನಾಯ್ಕ, ವಿಜಯ್ ನಾಯಕ್ ಸೇರಿದಂತೆ ಇತರರಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: mysoorumithra@gmail.com For advertisements: mysoorumithra@gmail.com

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮೇ 3 ಶನಿವಾರ 2025

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

46

ಸಂಪುಟ: 46 | ಸಂಚಿಕೆ: 17 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಎಸ್‌ಎಸ್‌ಎಲ್‌ಸಿ ಫಲಿತಾಂಶ ಪ್ರಕಟ

22 ಮಂದಿಗೆ 625ಕ್ಕೆ 625

● ಶೇ.66.14 ತೇರ್ಗಡೆ; ಬಾಲಕಿಯರೇ ಮೇಲುಗೈ ● ದಕ್ಷಿಣ ಕನ್ನಡ ಫಲಿತಾಂಶದಲ್ಲಿ ಮೊದಲಾದರೆ; ಕಲಬುರಗಿ ಕೊನೆ ● ಮೈಸೂರಿನ ತಾನ್ಯಾ, ಧನುಷ್, ಮಂಡ್ಯದ ಧೃತಿ, ಹಾಸನದ ಉತ್ಸವ ಪಟೇಲ್ ಟಾಪರ್ಸ್ ● ಎಸ್‌ಎಸ್‌ಎಲ್‌ಸಿ 2ನೇ ಪರೀಕ್ಷೆ ಮೇ 26ರಿಂದ ಜೂನ್ 2; 3ನೇ ಪರೀಕ್ಷೆ ಜೂ.23ರಿಂದ 30

ಬೆಂಗಳೂರು, ಮೇ 2(ಕೆಎಂಶಿ)– ಕಳೆದ ಮಾರ್ಚ್–ಏಪ್ರಿಲ್‌ನಲ್ಲಿ ನಡೆದ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಫಲಿತಾಂಶ ಶುಕ್ರವಾರ ಪ್ರಕಟವಾಗಿದ್ದು, ಎಂದಿನಂತೆ ಬಾಲಕಿಯರೇ ಮೇಲುಗೈ ಸಾಧಿಸಿದ್ದರೆ, 625ಕ್ಕೆ 625 ಅಂಕ ಪಡೆದು 22 ವಿದ್ಯಾರ್ಥಿಗಳು ಪ್ರಥಮ ಸ್ಥಾನದಲ್ಲಿದ್ದು, ಇವರಲ್ಲಿ ಇಬ್ಬರು ಸರ್ಕಾರಿ ಶಾಲೆ ಮಕ್ಕಳು.

ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ಮಧುಬಂಗಾರಪ್ಪ, ಒಟ್ಟಾರೆ ಶೇ.66.14ರಷ್ಟು ವಿದ್ಯಾರ್ಥಿಗಳು ತೇರ್ಗಡೆ ಹೊಂದಿದ್ದಾರೆ ಎಂದರು.

ಒಟ್ಟು 7,90,890 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದು, ಅದರಲ್ಲಿ 5,23,075 ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದಾರೆ.

ದಕ್ಷಿಣ ಕನ್ನಡ ಜಿಲ್ಲೆ ಶೇ.91.12ರಷ್ಟು ವಿದ್ಯಾರ್ಥಿಗಳ ತೇರ್ಗಡೆಯೊಂದಿಗೆ ಪ್ರಥಮ ಸ್ಥಾನ ಗಳಿಸಿದ್ದರೆ, ಶೇ.42.43 ವಿದ್ಯಾರ್ಥಿಗಳ ತೇರ್ಗಡೆಯೊಂದಿಗೆ ಕಲಬುರಗಿ ಕೊನೆ ಸ್ಥಾನದಲ್ಲಿದೆ.

ಅನುತ್ತೀರ್ಣರಾದವರಿಗೆ 2ನೇ ಪರೀಕ್ಷೆಯನ್ನು ಮೇ 26ರಿಂದ ಜೂನ್ 2ರವರೆಗೆ, 3ನೇ ಪರೀಕ್ಷೆಯನ್ನು ಜೂನ್ 23ರಿಂದ 30ರವರೆಗೆ ನಡೆಸಲಾಗುತ್ತದೆ.

2ನೇ ಪರೀಕ್ಷೆಗೆ ನೋಂದಣಿಗೆ ಮೇ 10 ಕಡೆಯ ದಿನವಾಗಿರುತ್ತದೆ. ಪರೀಕ್ಷೆ ತೆಗೆದುಕೊಳ್ಳುವ ವಿದ್ಯಾರ್ಥಿಗಳಿಗೆ ಒಂದು ಬಾರಿಗೆ ಅನ್ವಯವಾಗುವಂತೆ ಪರೀಕ್ಷಾ ಶುಲ್ಕದಿಂದ ವಿನಾಯಿತಿ ನೀಡಲಾಗಿದೆ.

ಮೊದಲ ಸ್ಥಾನದಲ್ಲಿ 22 ವಿದ್ಯಾರ್ಥಿಗಳಿದ್ದರೆ, 65 ವಿದ್ಯಾರ್ಥಿಗಳು 624 ಅಂಕ ಪಡೆಯುವ ಮೂಲಕ 2ನೇ ಸ್ಥಾನದಲ್ಲಿದ್ದಾರೆ, 108 ವಿದ್ಯಾರ್ಥಿಗಳು 623 ಅಂಕ, 189 ಮಂದಿ 622 ಅಂಕ, 259 ಮಂದಿ 621 ಹಾಗೂ 327 ವಿದ್ಯಾರ್ಥಿಗಳು 620 ಅಂಕ ಪಡೆದು 5ನೇ ಸ್ಥಾನ ಗಳಿಸಿದ್ದಾರೆ ಎಂದರು.

ಕೊಡಗು ಜಿಲ್ಲೆ ರಾಜ್ಯಕ್ಕೆ 5ನೇ ಸ್ಥಾನ ಪಡೆದಿದ್ದು, ಪರೀಕ್ಷೆಗೆ ಹಾಜರಾದ 6255 ವಿದ್ಯಾರ್ಥಿಗಳ ಪೈಕಿ 5142 ಮಂದಿ ತೇರ್ಗಡೆ ಹೊಂದಿ ಜಿಲ್ಲೆ ಶೇ.82.21ರಷ್ಟು ಫಲಿತಾಂಶ ಪಡೆದಿದೆ. ಹಾಸನ ಜಿಲ್ಲೆಯಲ್ಲಿ 19248 ಮಂದಿ ಪರೀಕ್ಷೆಗೆ ಹಾಜರಾಗಿದ್ದು, ಅವರ ಪೈಕಿ 15807 ವಿದ್ಯಾರ್ಥಿಗಳು ತೇರ್ಗಡೆ ಹೊಂದುವ ಮೂಲಕ ಶೇ.82.12ರಷ್ಟು ಫಲಿತಾಂಶ ಪಡೆದಿದ್ದು, ರಾಜ್ಯಕ್ಕೆ 6ನೇ ಸ್ಥಾನ ಪಡೆದಿದೆ. ಅಲ್ಲದೇ ಹಾಸನದ ವಿಜಯ ಶಾಲೆಯ ವಿದ್ಯಾರ್ಥಿ ಉತ್ಸವ ಪಟೇಲ್ ರಾಜ್ಯಕ್ಕೆ ಮೊದಲ ಸ್ಥಾನ ಪಡೆದಿದ್ದಾನೆ. ಮಂಡ್ಯ ಜಿಲ್ಲೆಯಲ್ಲಿ 19453 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದು, ಅವರ ಪೈಕಿ 13476 ಮಂದಿ ತೇರ್ಗಡೆ ಹೊಂದುವ ಮೂಲಕ ಜಿಲ್ಲೆ ಶೇ.69.27ರಷ್ಟು ಫಲಿತಾಂಶದೊಂದಿಗೆ ರಾಜ್ಯದಲ್ಲಿ 12ನೇ ಸ್ಥಾನ ಪಡೆದಿದೆ. ಈ ಜಿಲ್ಲೆಯ ಕೆ.ಆರ್.ಪೇಟೆ ಎಸ್‌ಎಸ್‌ಕೆಸಿ ಪ್ರೌಢಶಾಲೆ ವಿದ್ಯಾರ್ಥಿನಿ ಧೃತಿ 625ಕ್ಕೆ 625 ಅಂಕ ಪಡೆದು ರಾಜ್ಯಕ್ಕೆ ಮೊದಲಿಗರಾಗಿದ್ದಾರೆ. ಮೈಸೂರು ಜಿಲ್ಲೆಯ 35264 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದು,

■ 6ನೇ ಪುಟಕ್ಕೆ



ತಾನ್ಯಾ



ಧನುಷ್



ಧೃತಿ



ಉತ್ಸವ್ ಪಟೇಲ್

ಜಿಲ್ಲೆ	ಹಾಜರಾದವರು	ಉತ್ತೀರ್ಣರಾದವರು	ಶೇಕಡಾ ಫಲಿತಾಂಶ
ಕೊಡಗು	6255	5142	82.21
ಹಾಸನ	19248	15807	82.12
ಮಂಡ್ಯ	19453	13476	69.27
ಮೈಸೂರು	35264	24116	68.39
ಚಾಮರಾಜನಗರ	10749	6605	61.45

ನವದೆಹಲಿ, ನವಚಂಡೀಗಢ ಮಾದರಿ

‘ನವ ಮೈಸೂರು’ ನಿರ್ಮಾಣ

ಮುಖ್ಯಮಂತ್ರಿ ಸಿದ್ದರಾಮಯ್ಯ ಮಹತ್ವಾಕಾಂಕ್ಷಿ ಯೋಜನೆ

■ ಮೇ 5ರಂದು ಕಾವೇರಿಯಲ್ಲಿ ವಿಶೇಷ ಸಭೆ; ಮೇ 9ರ ಸಂಪುಟ ಸಭೆಯಲ್ಲಿ ಮಂಡಿಸಿ ಅನುಮೋದನೆ ಬಳಿಕ ಘೋಷಣೆ ■ ಮುಡಾ, ಕೆಹೆಚ್‌ಬಿ ಮೂಲಕ ನವ ಮೈಸೂರು ಸಾಕಾರ! ■ ರಿಯಲ್ ಎಸ್ಟೇಟ್ ಮಾಫಿಯಾಗೆ ಸುಳಿವು ಸಿಗದಂತೆ ಯೋಜನೆ ಸ್ಥಳದ ಬಗ್ಗೆ ‘ರಹಸ್ಯ’ ಕಾಯ್ದುಕೊಂಡಿರುವ ಸಿಎಂ

ಬೆಂಗಳೂರು, ಮೇ 2(ಕೆಎಂಶಿ)– ನವದೆಹಲಿ ಹಾಗೂ ಚಂಡೀಗಢ ಮಾದರಿಯಲ್ಲಿ ಅರಮನೆ ನಗರಿ ಮೈಸೂರಿಗೆ ಪರ್ಯಾಯವಾಗಿ ನವ ಮೈಸೂರು ನಿರ್ಮಾಣಕ್ಕೆ ಸರ್ಕಾರ ಮುಂದಾಗಿದೆ.

ತಮ್ಮ ಆಡಳಿತಾವಧಿಯಲ್ಲೇ ಮೈಸೂರು ನಗರ ಸೌಂದರ್ಯ ಮತ್ತು ಅಭಿವೃದ್ಧಿ ಜೊತೆಗೆ ಪರ್ಯಾಯ ನಗರ ಸ್ಥಾಪನೆ ಕಾಮಗಾರಿ ಮುಗಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಮುಂದಾಗಿದ್ದಾರೆ.

ನವ ಮೈಸೂರು ನಿರ್ಮಾಣಕ್ಕೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಅವರು, ಮೇ 5ರಂದು ತಮ್ಮ ಸರ್ಕಾರಿ ನಿವಾಸ ಕಾವೇರಿಯಲ್ಲಿ ಉನ್ನತ ಮಟ್ಟದ ಸಭೆ ಕರೆದಿದ್ದಾರೆ.

ಸಭೆಗೆ ಜಿಲ್ಲಾ ಉಸ್ತುವಾರಿ ಸಚಿವ ಡಾ. ಮಹದೇವಪ್ಪ, ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್, ಅಲ್ಲದೆ, ಸಚಿವರುಗಳಾದ ವೆಂಕಟೇಶ್, ರಾಮ ಲಿಂಗಾರೆಡ್ಡಿ, ದಿನೇಶ್ ಗುಂಡೂರಾವ್, ಕೃಷ್ಣಬೈರೇಗೌಡ, ಅಲ್ಲದೆ, ಹಣಕಾಸು, ನಗರಾಭಿವೃದ್ಧಿ, ಕಂದಾಯ ಇಲಾಖೆ ಪ್ರಧಾನ ಕಾರ್ಯದರ್ಶಿಗಳೂ ಸೇರಿದಂತೆ ಉನ್ನತ ಅಧಿಕಾರಿಗಳನ್ನು ಆಹ್ವಾನಿಸಿದ್ದಾರೆ.

ಕೇಂದ್ರ ಸರ್ಕಾರದ ಸಹಕಾರದೊಂದಿಗೆ ನವ ಮೈಸೂರು ನಿರ್ಮಾಣಕ್ಕೆ ಹೊರಟಿರುವ ಮುಖ್ಯಮಂತ್ರಿ, ನವದೆಹಲಿ ಮತ್ತು ಚಂಡೀಗಢ ನಗರಗಳನ್ನು ಮಾದರಿಯಾಗಿ ಇಟ್ಟುಕೊಂಡಿದ್ದಾರೆ. ನವ ಮೈಸೂರು ನಗರದಲ್ಲಿ ಮುಡಾ ಹಾಗೂ ಕೆಎಚ್‌ಬಿ ಸಂಸ್ಥೆಗಳಿಂದ ಆಧುನಿಕ ಬಡಾವಣೆಗಳ ನಿರ್ಮಾಣ, ಒಂದೇ ಸೂರಿನಡಿ ಸರ್ಕಾರಿ ಕಚೇರಿಗಳ ಜೊತೆಗೆ ವಿಶಾಲವಾದ ರಸ್ತೆ ಮತ್ತು ಉದ್ಯಾನಗಳು ಒಳಗೊಂಡಿರುತ್ತದೆ.



ನವ ಮೈಸೂರು ನಗರದಲ್ಲಿ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ನಿರ್ಮಾಣ ಸೇರಿದಂತೆ ಅನೇಕ ಆಧುನಿಕ ಸೌಲಭ್ಯಗಳನ್ನು ಕಲ್ಪಿಸಬೇಕೆಂಬ ಚಿಂತನೆ ಮುಖ್ಯಮಂತ್ರಿ ಅವರದ್ದಾಗಿದೆ. ಮೈಸೂರು ನಗರದ ಹೊರವಲಯದಲ್ಲಿ ಹೊಸ ನಗರ ನಿರ್ಮಾಣ ಸಂಬಂಧ ಸ್ಥಳವನ್ನೂ ಮುಖ್ಯಮಂತ್ರಿ ಅವರು ನಿರ್ಧರಿಸಿದ್ದರೂ ಅದನ್ನು ಬಹಿರಂಗಪಡಿಸಿಲ್ಲ. ನವ ಮೈಸೂರು ನಗರ ಎಲ್ಲಿ ನಿರ್ಮಿಸಲಾಗುವುದು ಎಂಬ ವಿಷಯ ಬಹಿರಂಗಗೊಂಡರೆ ಮಧ್ಯವರ್ತಿಗಳು ರೈತರ ಭೂಮಿ ಕಸಿಯುತ್ತಾರೆ. ಅಲ್ಲದೆ, ಭೂಮಿ ದರವೂ ದುಪ್ಪಟ್ಟಾಗಲಿದೆ ಎಂಬ ಕಾರಣದಿಂದ ಗೌಪ್ಯವಾಗಿಡಲಾಗಿದೆ.

> ‘ನವ ಮೈಸೂರು’ ನಿರ್ಮಾಣ ಸಂಬಂಧ ಚರ್ಚೆ ನಡೆಸುವುದಕ್ಕಾಗಿಯೇ ಮುಖ್ಯಮಂತ್ರಿಗಳು ಸಭೆ ಕರೆದಿದ್ದಾರೆ. ನನಗೂ ಸಭೆಗೆ ಆಹ್ವಾನವಿದೆ. ಆದರೆ ಈ ಯೋಜನೆ ಬಗ್ಗೆ ಯಾವುದೇ ಮಾಹಿತಿ ಇಲ್ಲ.
> -ಲಕ್ಷ್ಮೀಕಾಂತ ರೆಡ್ಡಿ, ಜಿಲ್ಲಾಧಿಕಾರಿ

ನವ ಮೈಸೂರು ನಗರ ನಿರ್ಮಾಣಕ್ಕೆ ಸಂಬಂಧಿಸಿದಂತೆ ಮೇ 5ರಂದು ಕೈಗೊಳ್ಳುವ ತೀರ್ಮಾನವನ್ನು ಮೇ 9ರಂದು ಜರುಗುವ ಸಂಪುಟ ಸಭೆಯಲ್ಲಿ ಮಂಡನೆ ಮಾಡಿ, ಅಧಿಕೃತ ಆದೇಶಗಳನ್ನು ಹೊರಡಿಸಲು ಮುಂದಾಗಿದ್ದಾರೆ ಎನ್ನಲಾಗಿದೆ.

ಇತ್ತೀಚೆಗೆ ನಡೆದ ಸಚಿವ ಸಂಪುಟ ಸಭೆಗಳಲ್ಲಿ ಮೈಸೂರು ನಗರಕ್ಕೆ ಒಂದಲ್ಲಾ ಒಂದು ಅಭಿವೃದ್ಧಿ ಯೋಜನೆಗಳಿಗೆ ಅನುಮತಿ ಪಡೆದು ಚಾಲನೆ ಕೊಟ್ಟಿದ್ದಾರೆ, ಇದೀಗ ಒಂದು ಪರ್ಯಾಯ ನಗರ ನಿರ್ಮಾಣಕ್ಕೆ ಮುಖ್ಯಮಂತ್ರಿ ಮುಂದಾಗಿದ್ದಾರೆ. ಆ ಮೂಲಕ ಅಧಿಕಾರದ ಅಂತಿಮದಲ್ಲಿ ಮಹಾನ್ ಕೊಡುಗೆ ಕೊಟ್ಟು ಹೋಗುವ ಉದ್ದೇಶವೂ ಮುಖ್ಯಮಂತ್ರಿಗಳ ಮನಸ್ಸಲ್ಲಿದೆ ಎಂದು ಹೇಳಲಾಗುತ್ತಿದೆ.

ಮೈಸೂರಿನ ಉದ್ದೇಶಿತ 3,425.60 ಕೋಟಿಯ ಸೆಮಿಕಂಡಕ್ಟರ್ ಯೋಜನೆಗೆ ಗ್ರಹಣ

ಮೈಸೂರು, ಮೇ 2(ಆರ್‌ಕೆ)– ಮೈಸೂರಿನ ಉದ್ದೇಶಿತ ಸೆಮಿಕಂಡಕ್ಟರ್ ಮಹತ್ವಾಕಾಂಕ್ಷಿ ಯೋಜನೆಗೆ ಗ್ರಹಣ ಹಿಡಿದಿದೆ.

ಜೋಹೋ ಕಾರ್ಪೊರೇಷನ್‌ನಿಂದ ಪರಿವರ್ತಿತವಾದ ಚೆನ್ನೈ ಮೂಲದ ಎಲೆಕ್ಟ್ರಿಕ್ ಸೆಮಿಕಂಡಕ್ಟರ್ ಮ್ಯಾನುಫಾಕ್ಚರಿಂಗ್ ಪ್ರೈವೇಟ್ ಲಿಮಿಟೆಡ್ ಕಂಪನಿಯು ನಂಜನಗೂಡು ಬಳಿ ಕೋಚನಹಳ್ಳಿಯ ಕರ್ನಾಟಕದ ಮೊದಲ ಎಲೆಕ್ಟ್ರಾನಿಕ್ಸ್ ಉತ್ಪಾದನಾ ಕ್ಲಸ್ಟರ್‌ನಲ್ಲಿ ಹೂಡಿಕೆ ಮಾಡಲುದ್ದೇಶಿಸಿದ್ದು, 3,425.60 ಕೋಟಿ ರೂ. ಯೋಜನೆಯನ್ನು ಕೈಬಿಟ್ಟಿದೆ.

460 ಮಂದಿಗೆ ಉದ್ಯೋಗ ಒದಗಿಸುವ ಸೆಮಿಕಂಡಕ್ಟರ್ ಉತ್ಪಾದನಾ ಪ್ರಕ್ರಿಯೆಗಳಿಗೆ ಮಾರ್ಗದರ್ಶನ ನೀಡಲು ಸೂಕ್ತ ತಂತ್ರಜ್ಞಾನ ಪಾಲುದಾರರನ್ನು ಹುಡುಕಲು ಜೋಹೋ ಕಾರ್ಪೊರೇಷನ್ ವಿಫಲವಾದ ಕಾರಣ ಈ ಯೋಜನೆಯನ್ನು ಸ್ಥಗಿತಗೊಳಿಸಲಾಗಿದೆ ಎನ್ನಲಾಗಿದೆ. ಜೋಹೋ ವಿಜ್ಞಾನಿ ಶ್ರೀಧರ್ ಎಂಬುವರು ಈ ವ್ಯವಹಾರಕ್ಕೆ ಅತೀ ಹೆಚ್ಚು ಬಂಡವಾಳ ಬೇಕಿರುವುದರಿಂದ ಅದಕ್ಕೆ ಸರ್ಕಾರದ ಬೆಂಬಲ ಅಗತ್ಯವಿದೆ. ತೆರಿಗೆದಾರರ ಹಣ ಪಡೆಯುವ ಮೊದಲು ನಾವು ತಂತ್ರಜ್ಞಾನದ ಬಗ್ಗೆ ಖಚಿತಪಡಿಸಿಕೊಳ್ಳಬಯಸುತ್ತೇವೆ. ಈಗಿನ ಪರಿಸ್ಥಿತಿಯಲ್ಲಿ ನಮಗೆ ಆ ವಿಶ್ವಾಸವಿಲ್ಲವಾದ್ದರಿಂದ ಉತ್ತಮ ತಾಂತ್ರಿಕ ವಿಧಾನ ಕಂಡುಕೊಳ್ಳುವವರೆಗೆ ನಮ್ಮ ಆಡಳಿತ ಮಂಡಳಿಯು ಸದ್ಯಕ್ಕೆ ಸೆಮಿಕಂಡಕ್ಟರ್ ಯೋಜನೆಯನ್ನು ಮುಂದೂಡಲು ನಿರ್ಧರಿಸಲಾಗಿದೆ ಎಂದಿದ್ದಾರೆ.

ಈ ಯೋಜನೆಗೆ ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿ (ಕೆಐಎಡಿಬಿ)ಯು ಇನ್ನೂ ಭೂಮಿಯನ್ನು ಸಂಪೂರ್ಣವಾಗಿ ಸ್ವಾಧೀನಪಡಿಸಿಕೊಂಡಿಲ್ಲ. ಭೂಮಿ ಬೆಲೆ ಗಗನಕ್ಕೇರಿರುವುದರಿಂದ ಕಾನೂನಿನ ವಿವಾದಗಳೂ ಇತ್ಯರ್ಥವಾಗಿಲ್ಲದ ಕಾರಣ ಯೋಜನೆಗೆ ಹಣ ತೊಡಗಿಸಲು ಕಂಪನಿಯು ಹಿಂದೇಟು ಹಾಕುತ್ತಿದೆ ಎಂದು ಹೆಸರೇಳಲಿಚ್ಛಿಸದ ಕೈಗಾರಿಕಾ ಇಲಾಖೆ ಅಧಿಕಾರಿಯೊಬ್ಬರು ‘ಮೈಸೂರು ಮಿತ್ರ’ನಿಗೆ ತಿಳಿಸಿದ್ದಾರೆ. ಕಡಕೊಳ ಬಳಿ ಕೋಚನಹಳ್ಳಿಯಲ್ಲಿ ಎಲೆಕ್ಟ್ರಾನಿಕ್ಸ್ ಉತ್ಪಾದನಾ ಕ್ಲಸ್ಟರ್ (ಇಎಂಸಿ)ಗಾಗಿ ಸರ್ಕಾರವು 140 ಎಕರೆ ಭೂಮಿಯನ್ನು ಮೀಸಲಿರಿಸಿ ಸೆಮಿಕಂಡಕ್ಟರ್ ಘಟಕಗಳಿಗೆ ಹಂಚಿಕೆ ಮಾಡಿದ್ದ ಬಹುತೇಕ ಪ್ರದೇಶಗಳು ಕಾನೂನು

■ 6ನೇ ಪುಟಕ್ಕೆ

ಕೆಆರ್‌ಎಸ್‌ನಲ್ಲಿ ಭದ್ರತೆ ಕೊರತೆ; ಪ್ರವಾಸಿಗರನ್ನು ಕಾಡುತ್ತಿದೆ ಅಭದ್ರತೆ

261 ಸಿಬ್ಬಂದಿ ಬದಲು ಕೇವಲ 61 ಮಂದಿ ಮಾತ್ರ ಭದ್ರತಾ ಕಾರ್ಯ ನಿರ್ವಹಣೆ

ಶ್ರೀರಂಗಪಟ್ಟಣ, ಮೇ 2– ಭದ್ರತಾ ಸಿಬ್ಬಂದಿಯ ಕೊರತೆ ಎದುರಿಸುತ್ತಿರುವ ವಿಶ್ವವಿಖ್ಯಾತ ಪ್ರವಾಸಿ ತಾಣವಾದ ಕೆಆರ್‌ಎಸ್‌ನ ಬೃಂದಾವನ ಗಾರ್ಡನ್‌ನಲ್ಲಿ ಪ್ರವಾಸಿಗರಿಗೆ ಅಭದ್ರತೆ ಮತ್ತು ಆತಂಕ ಎದುರಾಗಿದೆ.

ಕಳೆದ ಕೆಲ ದಿನಗಳ ಹಿಂದೆ ಕಾಶ್ಮೀರದ ಪ್ರವಾಸಿ ತಾಣಗಳನ್ನು ಗುರಿಯಾಗಿಸಿಕೊಂಡು ಉಗ್ರರು ದಾಳಿ ಮಾಡಿ ಹಲವು ಅಮಾಯಕ ಪ್ರವಾಸಿಗರನ್ನು ಹತ್ಯೆಗೈದ ಘಟನೆಯಿಂದ ಆತಂಕಗೊಂಡಿರುವ ಪ್ರವಾಸಿಗರು ಈಗಾಗಲೇ ಉಗ್ರರ ಕರಿ ನೆರಳಿರುವ ಕೆಆರ್‌ಎಸ್‌ನಲ್ಲಿ ತಮಗೆ ನಿಜಕ್ಕೂ ರಕ್ಷಣೆ ಇದೆಯಾ ಎಂಬ ಅನುಮಾನ, ಭಯದಲ್ಲಿದ್ದಾರೆ.

ಪ್ರಸ್ತುತ ಕೆಆರ್‌ಎಸ್‌ಗೆ 261 ಮಂದಿ ಭದ್ರತಾ ಸಿಬ್ಬಂದಿ ಅಗತ್ಯವಿದೆ. ಆದರೆ ಈಗ ಕೇವಲ 53 ಮಂದಿ ಮಾತ್ರ ಕಾರ್ಯ ನಿರ್ವಹಿಸುತ್ತಿದ್ದಾರೆ. ಇದಲ್ಲದೆ ಕೆಆರ್‌ಎಸ್‌ನಲ್ಲಿ ಅಳವಡಿಸಲಾಗಿರುವ ಎಲ್ಲಾ 75 ಸಿಸಿ ಕ್ಯಾಮರಾಗಳಲ್ಲಿ ಒಂದೇ ಒಂದು ಸಿಸಿ ಕ್ಯಾಮರಾ ಮಾತ್ರ ಕಾರ್ಯ ನಿರ್ವಹಿಸುತ್ತಿದ್ದು, ಉಳಿದ ಎಲ್ಲಾ ಸಿಸಿ ಕ್ಯಾಮರಾಗಳು ಸ್ಥಗಿತಗೊಂಡಿವೆ. ಇದರಿಂದ ಕಮಾಂಡೆಂಟ್ ಕೆ.ಸಿ.ಪ್ರಮೋದ್ ಅವರನ್ನು ಚಿಂತೆಗೀಡು ಮಾಡಿದ್ದು, ಭದ್ರತಾ ಸಿಬ್ಬಂದಿ ಕೊರತೆ ನೀಗಿಸುವಂತೆ ಕೋರಿದ್ದಾರೆ. ಈ ಸಂಬಂಧ ಕಾವೇರಿ ನೀರಾವರಿ ನಿಗಮ ಮತ್ತು ಸರ್ಕಾರಕ್ಕೆ ಹಲವು ಬಾರಿ ಪತ್ರ ಬರೆದು ಭದ್ರತಾ ವ್ಯವಸ್ಥೆಯನ್ನು ಸರಿಪಡಿಸುವಂತೆ ಕೋರಿದರೂ ಯಾವುದೇ ಪ್ರತಿಕ್ರಿಯೆ ಬಂದಿಲ್ಲ ಎಂದು ಅವರು ಬೇಸರ ವ್ಯಕ್ತಪಡಿಸಿದ್ದಾರೆ.

ಒಂದು ಸಿಸಿ ಕ್ಯಾಮರಾ ಬಿಟ್ಟು ಉಳಿದ 74 ಕ್ಯಾಮರಾ ಸ್ಥಗಿತ

2019ರಲ್ಲಿ ಭಾರೀ ಮಳೆ ಹಾಗೂ ಗುಡುಗು ಸಿಡಿಲಿಗೆ ಲಗೇಜ್ ಸ್ಕ್ಯಾನರ್ ಕೂಡ ಕೆಟ್ಟು ನಿಂತಿದೆ. ಅಲ್ಲಿಂದ ಇಲ್ಲಿವರೆಗೂ ಪ್ರತಿ ತಿಂಗಳು ನಿಗಮಕ್ಕೆ ಅಗತ್ಯ ಭದ್ರತಾ ಸಲಕರಣೆಗಳನ್ನು ಒದಗಿಸುವಂತೆ ಮನವಿ ಮಾಡಿದರೂ ಈವರೆಗೂ ಕಾವೇರಿ

■ 6ನೇ ಪುಟಕ್ಕೆ

> ಕೆಆರ್‌ಎಸ್ ಮೈಸೂರು ಮಹಾರಾಜರ ಕೊಡುಗೆ ಹಾಗೂ ಹಲವು ಇಂಜಿನಿಯರ್‌ಗಳ ಶ್ರಮದ ಫಲ. ಅಣೆಕಟ್ಟೆಯನ್ನು ನಂಬಿ ಲಕ್ಷಾಂತರ ಜನರು ಜೀವನ ನಡೆಸುತ್ತಿದ್ದಾರೆ. ಹಾಗಾಗಿ ಸರ್ಕಾರ ಈ ಕೆಆರ್‌ಎಸ್ ಅಣೆಕಟ್ಟೆಯನ್ನು ವಿಶೇಷ ಕಾಳಜಿಯಿಂದ ಈಗಿರುವ ಭದ್ರತಾ ಸಿಬ್ಬಂದಿಯ ಕೊರತೆಯನ್ನು ನಿವಾರಿಸಿ ಅತ್ಯಾಧುನಿಕ ರೀತಿಯಲ್ಲಿ ಅಣೆಕಟ್ಟೆಯ ರಕ್ಷಣೆ ಮಾಡಬೇಕಾಗಿದೆ.
> -ರವೀಂದ್ರ ಶ್ರೀಕಂಠಯ್ಯ, ಮಾಜಿ ಶಾಸಕರು.



ಕೆಆರ್‌ಎಸ್ ಬೃಂದಾವನ ಪ್ರವೇಶ ದ್ವಾರ, ವಾಹನ ನಿಲುಗಡೆ ಶುಲ್ಕ ಭಾರಿ ಹೆಚ್ಚಳ

ಪ್ರವಾಸಿ ತಾಣಗಳಿಗೂ ಸರ್ಕಾರದ ದರ ಏರಿಕೆ ಸರದಿ ಶುರು

ವರ್ಷ	ಪ್ರವೇಶ ಶುಲ್ಕ	ಪಾರ್ಕಿಂಗ್ ಶುಲ್ಕ
2022	4.97 ಕೋಟಿ	86.43 ಲಕ್ಷ
2023	5.06 ಕೋಟಿ	79.42 ಲಕ್ಷ
2024	4.90 ಕೋಟಿ	73.63 ಲಕ್ಷ

ಶ್ರೀರಂಗಪಟ್ಟಣ, ಮೇ 2– ವಿಶ್ವ ವಿಖ್ಯಾತ ಪ್ರವಾಸಿ ತಾಣ ಕೆಆರ್‌ಎಸ್‌ನ ಬೃಂದಾವನ ಪ್ರವೇಶ ದ್ವಾರವೂ ಸೇರಿದಂತೆ ವಿವಿಧ ಶುಲ್ಕಗಳನ್ನು ದುಪ್ಪಟ್ಟು ಏರಿಸಲಾಗಿದ್ದು, ಪ್ರವಾಸಿಗರು ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ.

ಕೆಆರ್‌ಎಸ್‌ಗೆ ಸೂಕ್ತ ಭದ್ರತಾ ವ್ಯವಸ್ಥೆಯನ್ನು ಕಲ್ಪಿಸಲು ವಿಫಲವಾಗಿರುವ ಕಾವೇರಿ ನೀರಾವರಿ ನಿಗಮವು ಬೃಂದಾವನ ಪ್ರವೇಶ ದ್ವಾರದ ಶುಲ್ಕ ವಾಹನ ಪಾರ್ಕಿಂಗ್ ಹಾಗೂ ಬೃಂದಾವನ ಮುಖ್ಯ ರಸ್ತೆ ಮೇಲ್ಸೇತುವೆ ಟೋಲ್ ಸಂಗ್ರಹ ಟೆಂಡರ್ ಕರೆದಿದ್ದು, ಕರ್ನಾಟಕ ಕಮರ್ಷಿಯಲ್ ಅಂಡ್ ಇಂಡಸ್ಟ್ರಿಯಲ್ ಕಾರ್ಪೊರೇಷನ್ (ಕೆಸಿಐಸಿ) 3 ವರ್ಷಗಳಿಗೆ ಗುತ್ತಿಗೆ ಪಡೆದು, ಎಲ್ಲಾ ಪ್ರವೇಶ ಶುಲ್ಕ ಮತ್ತು ದರಗಳನ್ನು ಮೇ 10ರಿಂದ ಜಾರಿಗೆ ಬರುವಂತೆ ಯದ್ವಾತದ್ವಾ ಹೆಚ್ಚಿಸಿರುವುದರಿಂದ ಪ್ರವಾಸಿಗರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಆರು ವರ್ಷ ಮೇಲ್ಪಟ್ಟ ಪ್ರವಾಸಿಗರಿಗೆ ರೂ. 50ರಿಂದ 100 ರೂ., 3ರಿಂದ 6 ವರ್ಷದ ಮಕ್ಕಳಿಗೆ ರೂ. 10ರಿಂದ 50ರೂ.ಗಳಿಗೆ ಪ್ರವೇಶ ಶುಲ್ಕವನ್ನು ಹೆಚ್ಚಳ ಮಾಡಲಾಗಿದೆ. ಶಾಲಾ ಮಕ್ಕಳಿಗೆ 5ರೂ., ಕ್ಯಾಮೆರಾಕ್ಕೆ 100 ರೂ.ಶುಲ್ಕ ನಿಗದಿಪಡಿಸಲಾಗಿದ್ದು, ಪ್ರವಾಸಿಗರು ಕೆಆರ್‌ಎಸ್‌ಗೆ ಭೇಟಿ ನೀಡಲು ಹಿಂದೇಟು ಹಾಕುವ ಲಕ್ಷಣಗಳು ಕಂಡು ಬರುತ್ತಿವೆ.

■ 6ನೇ ಪುಟಕ್ಕೆ

ಮೈಸೂರು, ಚಾಮರಾಜನಗರದಲ್ಲಿ ‘ಬಾಂಬ್’ ಬೆದರಿಕೆ!

ಇ-ಮೇಲ್ ಸಂದೇಶ ಹಿನ್ನೆಲೆ ನಗರದಾದ್ಯಂತ ತೀವ್ರ ಶೋಧ, ವ್ಯಾಪಕ ಕಟ್ಟೆಚ್ಚರ

ಮೈಸೂರು/ಚಾಮರಾಜನಗರ, ಮೇ 2(ಆರ್‌ಕೆ, ಎಸ್‌ಎಸ್)– ಮೈಸೂರು ನಗರ ಹಾಗೂ ಚಾಮರಾಜನಗರದಲ್ಲಿ ಬಾಂಬ್ ಇರಿಸಿರುವುದಾಗಿ ಬೆದರಿಕೆ ಸಂದೇಶ ಬಂದ ಹಿನ್ನೆಲೆಯಲ್ಲಿ ಉಭಯ ನಗರಗಳಲ್ಲೂ ಶುಕ್ರವಾರ ಕೆಲ ಕಾಲ ಆತಂಕದ ಪರಿಸ್ಥಿತಿ ನಿರ್ಮಾಣವಾಗಿತ್ತು.

ಮೈಸೂರು ನಗರದ ವಿವಿಧೆಡೆ ಬಾಂಬ್ ಇರಿಸಲಾಗಿದ್ದು, 24 ಗಂಟೆಯೊಳಗಾಗಿ ಸ್ಫೋಟವಾಗಲಿದೆ ಎಂಬ ಸಂದೇಶ ಇಂದು ಮುಂಜಾನೆ 1.33ರ ವೇಳೆಗೆ ನಗರ ಪೊಲೀಸ್ ಆಯುಕ್ತರ ಕಚೇರಿ ಇ–ಮೇಲ್‌ಗೆ ರವಾನೆಯಾದರೆ, ಚಾಮರಾಜನಗರ ಜಿಲ್ಲಾಡಳಿತ ಭವನವನ್ನು ಸ್ಫೋಟಿಸುವುದಾಗಿ ಇಲ್ಲಿನ ಜಿಲ್ಲಾಧಿಕಾರಿಗಳ ಕಚೇರಿ ಇ–ಮೇಲ್‌ಗೆ ಇಂದು ಮುಂಜಾನೆ 2.40ರ ವೇಳೆಗೆ ಸಂದೇಶ ಬಂದಿದೆ. ಇದರಿಂದ ಎರಡೂ ನಗರಗಳಲ್ಲಿ ಭಯಭೀತ ಪರಿಸ್ಥಿತಿ ಸೃಷ್ಟಿಯಾದರೂ ಪೊಲೀಸರ ಮಿಂಚಿನ ಕಾರ್ಯಾಚರಣೆಯಿಂದ ಇದು ಹುಸಿ ಬಾಂಬ್ ಬೆದರಿಕೆ ಸಂದೇಶ ಎಂಬುದು ತಿಳಿಯಿತು.





ಮೈಸೂರು ಲಲಿತ ಮಹಲ್ ಪ್ಯಾಲೆಸ್ ಹೋಟೆಲ್ ಬಳಿ ಹಾಗೂ ಚಾಮರಾಜನಗರ ಜಿಲ್ಲಾಡಳಿತ ಭವನದಲ್ಲಿ (ಬಲಚಿತ್ರ) ಬಾಂಬ್ ನಿಷ್ಕ್ರಿಯ ದಳ ಪರಿಶೀಲನೆ ನಡೆಸಿದವು

ಮೈಸೂರಲ್ಲಿ ವ್ಯಾಪಕ ಶೋಧ: ಮೈಸೂರು ನಗರ ಪೊಲೀಸ್ ಆಯುಕ್ತರ ಕಚೇರಿ ಇ–ಮೇಲ್‌ಗೆ ಇಂದು ಮುಂಜಾನೆ 1.33ರ ವೇಳೆಗೆ ಇಂಗ್ಲಿಷ್‌ನಲ್ಲಿ ಬಂದಿರುವ ಸಂದೇಶದಲ್ಲಿ ‘ಮೈಸೂರು ನಗರದ ವಿವಿಧ ಸ್ಥಳಗಳಲ್ಲಿ ಬಾಂಬ್ ಇರಿಸಲಾಗಿದೆ. ಅವು 24 ಗಂಟೆಯೊಳಗಾಗಿ ಸ್ಫೋಟವಾಗುತ್ತವೆ ಎಂದು ನಮೂದಾಗಿತ್ತು. ವಿಷಯ ತಿಳಿಯುತ್ತಿದ್ದಂತೆಯೇ ಎಚ್ಚೆತ್ತ ನಗರ ಪೊಲೀಸ್ ಅಧಿಕಾರಿಗಳು ತಕ್ಷಣ ಕಾರ್ಯಾಚರಣೆ ಆರಂಭಿಸಿ, ತೀವ್ರ ತಪಾಸಣೆ ನಡೆಸಿದರು.

ಮೈಸೂರು ನಗರ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್ ನಿರ್ದೇಶನದಂತೆ ಡಿಸಿಪಿಗಳಾದ ಎಂ.ಮುತ್ತುರಾಜ್ ಮತ್ತು ಸುಂದರರಾಜ್ ಮೇಲ್ವಿಚಾರಣೆಯಲ್ಲಿ ಎಲ್ಲಾ ಉಪವಿಭಾಗಗಳ ಎಸಿಪಿಗಳು, ಇನ್‌ಸ್ಪೆಕ್ಟರ್‌ಗಳು ಶ್ವಾನದಳ, ಬಾಂಬ್ ಪತ್ತೆ ಮತ್ತು ನಿಗ್ರಹ ದಳ, ಕೆಎಸ್‌ಆರ್‌ಪಿ, ಸಿಎಆರ್, ಮೌಂಟೆಡ್ ಪೊಲೀಸ್ ಸಿಬ್ಬಂದಿಗಳೊಂದಿಗೆ ಪರಿಶೀಲನೆ ನಡೆಸಿದರು.

ಲಾಡ್ಜ್, ರೆಸ್ಟೋರೆಂಟ್, ಪ್ರಾರ್ಥನಾ ಮಂದಿರ, ಬಸ್, ರೈಲು, ವಿಮಾನ ನಿಲ್ದಾಣ, ವಾಣಿಜ್ಯ ಸಂಕೀರ್ಣ, ರಾಜ್ಯ–ಕೇಂದ್ರ ಸರ್ಕಾರಿ ಕಚೇರಿ, ಆಸ್ಪತ್ರೆ, ಮಾರುಕಟ್ಟೆಗಳು, ಪ್ರವಾಸಿ ತಾಣಗಳು, ಕೆಲ ಸಂಘಟನೆಗಳ ಕಚೇರಿ, ಫ್ಯಾಕ್ಟರಿ, ಐಟಿ–ಬಿಟಿ ಕಂಪನಿಗಳು, ಸಾರ್ವಜನಿಕರು ಅತಿ ಹೆಚ್ಚು ಸೇರುವ ಸ್ಥಳಗಳು, ಹೋಟೆಲುಗಳಲ್ಲಿ ತೀವ್ರ ತಪಾಸಣೆ ನಡೆಸಲಾಯಿತು.

ಮೈಸೂರಿಗೆ ಸಂಪರ್ಕ ಕಲ್ಪಿಸುವ ರಾಜ್ಯ, ರಾಷ್ಟ್ರೀಯ ಹೆದ್ದಾರಿ, ಜಿಲ್ಲಾ ಮುಖ್ಯ ರಸ್ತೆಗಳಲ್ಲಿ ಬರುವ ವಾಹನಗಳನ್ನು ಚೆಕ್‌ಪೋಸ್ಟ್‌ನಲ್ಲಿ ಪೊಲೀಸರು ಇನ್ನೂ ತಪಾಸಣೆ ನಡೆಸುತ್ತಿದ್ದು, ಬಾಂಬ್ ಪತ್ತೆ ಮತ್ತು ನಿಗ್ರಹ ದಳದ ಸಿಬ್ಬಂದಿಗಳು ತೀವ್ರ ಶೋಧ ನಡೆಸುತ್ತಿದ್ದಾರೆ. ಅರಮನೆ, ಜಗನ್ಮೋಹನ ಪ್ಯಾಲೇಸ್, ಕಾರಂಜಿ ಕೆರೆ ಉದ್ಯಾನವನ, ಚಾಮುಂಡಿಬೆಟ್ಟ, ಉತ್ತನಹಳ್ಳಿ ತ್ರಿಪುರ ಸುಂದರಿ ಅಮ್ಮನವರ ದೇವಸ್ಥಾನ, ನಂಜನಗೂಡಿನ ಶ್ರೀ ನಂಜುಂಡೇಶ್ವರ ದೇವಸ್ಥಾನ, ಕೆಆರ್‌ಎಸ್, ರಂಗನತಿಟ್ಟು ಪಕ್ಷಿಧಾಮ, ಶ್ರೀರಂಗಪಟ್ಟಣದ ಶ್ರೀ ರಂಗನಾಥ ದೇವಸ್ಥಾನ, ಟಿಪ್ಪು ಸುಲ್ತಾನ, ದರಿಯಾ ದೌಲತ್, ಮೇಲುಕೋಟೆಗಳಲ್ಲೂ ಪೊಲೀಸರು ರಾತ್ರಿವರೆಗೂ ಶೋಧ ಕಾರ್ಯ ನಡೆಸಿದರು. ಮುಂಜಾಗ್ರತಾ ಕ್ರಮವಾಗಿ ವಾಣಿಜ್ಯ ಕೇಂದ್ರಗಳು, ಸಾರ್ವಜನಿಕ ಸ್ಥಳಗಳಲ್ಲಿ ಕೆಎಸ್‌ಆರ್‌ಪಿ, ಸಿಎಆರ್, ಮೌಂಟೆಡ್ ಕಂಪನಿ ತುಕಡಿಗಳನ್ನು ಬಂದೋಬಸ್ತ್‌ಗಾಗಿ ನಿಯೋಜಿಸಿ, ತೀವ್ರ ಕಟ್ಟೆಚ್ಚರ ವಹಿಸಲಾಗಿದೆ.

ಚಾ.ನಗರದಲ್ಲೂ ತಲಾಶ್: ಚಾಮರಾಜನಗರ ಜಿಲ್ಲಾಡಳಿತ ಭವನವನ್ನು ಸ್ಫೋಟಿಸುವುದಾಗಿ ಶುಕ್ರವಾರ ಮುಂಜಾನೆ 2.40ರ ಸುಮಾರಿನಲ್ಲಿ ಜಿಲ್ಲಾಧಿಕಾರಿಗಳ ಕಚೇರಿ ಇ–ಮೇಲ್‌ಗೆ ಸಂದೇಶವೊಂದು ಬಂದಿತ್ತು. ಅದರಲ್ಲಿ ತಮಿಳುನಾಡಿನ ಬಾಂಬ್ ಸ್ಫೋಟ ಪ್ರಕರಣ, ಡಿಎಂಕೆ ನಾಯಕರ

■ 6ನೇ ಪುಟಕ್ಕೆ

ಮನೆ ದೇವರು ಅನ್ನದಾನೇಶ್ವರ ಸ್ವಾಮಿಯ ದರ್ಶನ ಪಡೆದ ಸಿಎಂ

ಅಲ್ಲಪಟ್ಟಣದಿಂದ ಮೆಲ್ಲ ಮೆಲ್ಲನೇ ಬಂದೆ... ರಾಮೇಶ್ವರಾ... ಅನ್ನದಾನೇಶ್ವರಾ: ಮನೆ ದೇವರ ಲಾವಣಿ ಹಾಡಿದ ಸಿದ್ದರಾಮಯ್ಯ

ಶ್ರೀರಂಗಪಟ್ಟಣ, ಮೇ 2– ಅಲ್ಲಪಟ್ಟಣದಿಂದ ಮೆಲ್ಲ ಮೆಲ್ಲನೇ ಬಂದೆ ಅನ್ನದಾನೇಶ್ವರಾ... ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಮ್ಮ ಮನೆದೇವರ ಕುರಿತಾದ ಲಾವಣಿಯ ಸಾಲುಗಳನ್ನು ಹಾಡಿದರು.

ಶುಕ್ರವಾರ ತಾಲೂಕಿನ ಅಲ್ಲಾಪಟ್ಟಣದ ಶ್ರೀ ಅನ್ನದಾನೇಶ್ವರ ಸ್ವಾಮಿ ದೇವಸ್ಥಾನ ಪುನರ್ ನಿರ್ಮಾಣ, ವಿಗ್ರಹಗಳ ಸ್ಥಾಪನೆ ಹಾಗೂ ಗೋಪುರ ಕುಂಭಾಭಿಷೇಕ ನೆರವೇರಿಸಿ ಮಾತನಾಡುವ ವೇಳೆ ತಾವು ಬಾಲ್ಯದಲ್ಲಿ ಹಾಡುತ್ತಿದ್ದ ಮತ್ತು ವೀರ ಕುಣಿತದಲ್ಲಿ ನರ್ತಿಸುತ್ತಿದ್ದದ್ದನ್ನು ಉಲ್ಲೇಖಿಸಿ ಲಾವಣಿ ಹಾಡಿದರು.

ಸಿದ್ದರಾಮೇಶ್ವರ ಪೂಜೆಗೆ ವೀರಕುಣಿತದ ಜನಪದ ನೃತ್ಯ ಈಗಲೂ ಚಾಲ್ತಿಯಲ್ಲಿದೆ. ನಾನೂ ವೀರಕುಣಿತ ಸೇರಿದ್ದೆ. ಆಮೇಲೆ ರಾಜಪ್ಪ ಮೇಸ್ಟ್ರು ನನ್ನನ್ನು ಕರೆದುಕೊಂಡು ಹೋಗಿ ಐದನೇ ತರಗತಿಗೆ ಸೇರಿದರು. ಹೀಗೆ ನನ್ನ ಶಿಕ್ಷಣ ಆರಂಭವಾಯಿತು. ಅಲ್ಲಿಂದ ನಾನು ಎಲ್ಲೂ ಫೇಲಾಗಲೇ ಇಲ್ಲ. ಜನರ ಸೇವೆಯೇ ದೇವರ ಸೇವೆ ಎಂದು ನಂಬಿದವನು ನಾನು. ಬಸವಣ್ಣನವರು ಇದನ್ನೇ "ದೇಹವೇ ದೇಗುಲ" ಎಂದು ಹಾಡಿದರು. ದೇವರು ಮತ್ತು ಜನರ ನಡುವೆ ಮಧ್ಯವರ್ತಿ ಇರಬಾರದು ಎನ್ನುವುದು ಬಸವಣ್ಣನವರ ಮೌಲ್ಯವಾಗಿತ್ತು ಎಂದರು.

ನಾವು ಮಾನವೀಯವಾಗಿ ಇದ್ದರಷ್ಟೆ ದೇವರ ಸಹಾಯ ಸಿಗುತ್ತದೆ. ಅಮಾನವೀಯತೆಯಿಂದ ನಡೆಸುವವರಿಗೆ ಯಾವ ದೇವರೂ ಸಹಾಯ ಮಾಡುವುದಿಲ್ಲ. ಅಂಬೇಡ್ಕರ್ ಅವರ ಸಂವಿಧಾನ, ಬಸವಾದಿ ಶರಣರ ಆಶಯದಂತೆ ಜಾತಿ ನಿರ್ಮೂಲನೆ ಮಾಡಬೇಕಿದೆ. ಜಾತಿಗೆ ಚಲನೆ ಇಲ್ಲ, ವರ್ಗಕ್ಕೆ ಚಲನೆ ಇದೆ ನಿಂತ ನೀರಾಗಿರುವ ಜಾತಿಯನ್ನು ಅಳಿಸಬೇಕಾದರೆ ಶಿಕ್ಷಣ ಮತ್ತು ಆರ್ಥಿಕ ಹಾಗೂ ಸಾಮಾಜಿಕ ಸ್ವಾತಂತ್ರ್ಯ ಮತ್ತು ಅವಕಾಶಗಳನ್ನು ಒದಗಿಸಬೇಕು. ಆಗ ಮಾತ್ರ ಜಾತಿ ಅಳಿಸುವ ದಿಕ್ಕಿನಲ್ಲಿ ಸಾಗಬಹುದು ಎಂದು ಹೇಳಿದರು.

ಮೊದಲೆಲ್ಲಾ ವ್ಯಕ್ತಿಗಳ ಅರ್ಹತೆಯನ್ನು ಜಾತಿ ಆಧಾರದಲ್ಲಿ ಅಳೆಯುತ್ತಿದ್ದರು. ಇದು ಹೋಗಿ ನಿಜವಾದ ಅರ್ಹತೆ ಆಧಾರದಲ್ಲಿ ಅಳೆಯಬೇಕು. ನಾನು ಉಪಮುಖ್ಯಮಂತ್ರಿಯಾಗಿ ಮೊದಲ ಬಜೆಟ್ ಮಂಡಿಸುವಾಗ 'ನೂರು ಕುರಿ ಎಣಿಸಲು ಬರದವನು ಬಜೆಟ್ ಮಂಡಿಸ್ತಾನಾ' ಎಂದು ಅಣಕಿಸಿದ್ದರು. ಈಗ ನಾನು 16 ಬಜೆಟ್ ಮಂಡಿಸಿದ್ದೇನೆ. ಆದ್ದರಿಂದ ಅವಕಾಶ ಮುಖ್ಯ. ಅವಕಾಶ ಸಿಕ್ಕಾಗ ಎಲ್ಲರ ಪ್ರತಿಭೆ ಹೊರಗೆ ಬರುತ್ತದೆ ಎಂದರು.


ಆಚಾರವೇ ಸ್ವರ್ಗ, ಅನಾಚಾರವೇ ನರಕ ಎನ್ನುವ ಬಸವಣ್ಣನವರ ಸರಳ ಧರ್ಮದ ಸಾರವನ್ನು ಪಾಲಿಸಬೇಕು. ಕರ್ಮ ಸಿದ್ಧಾಂತವನ್ನು ತಿರಸ್ಕರಿಸಬೇಕು. ಮಾಡಬಾರದ ಪಾಪದ ಕೆಲಸಗಳನ್ನು ಮಾಡಿ ಒಳ್ಳೆದು ಮಾಡಪ್ಪಾ ಅಂದರೆ ದೇವರು ಒಳ್ಳೆಯದು ಮಾಡಲ್ಲ ಎಂದರು.

ಕೃಷಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಮಾತನಾಡಿ, ರೈತರು ಹಾಗೂ ಕೃಷಿ ಇಲಾಖೆ ಅಭಿವೃದ್ಧಿ ಬಗ್ಗೆ ಮುಖ್ಯಮಂತ್ರಿಗಳು ಸದಾ ಚಿಂತಿಸುತ್ತಾರೆ. ಜನಪ್ರಿಯ ನಾಯಕ ಸಿದ್ದರಾಮಯ್ಯ ಮತ್ತು ಅವರ ಪತ್ನಿ ಪಾರ್ವತಮ್ಮ ಅವರು ಎಲೆ ಮರೆ ಕಾಯಿಯಾಗಿ ಸಾರ್ವಜನಿಕರು ಹಾಗೂ ಧಾರ್ಮಿಕ ಸೇವೆ ಮಾಡುತ್ತಾರೆ. ಅವರ ಪತ್ನಿ ಹಲವಾರು ವರ್ಷಗಳಿಂದ ರಾಜಕೀಯದಲ್ಲಿ ತೊಡಗಿಸಿಕೊಂಡಿದ್ದರು ಸರಳ ಜೀವನ ನಡೆಸುತ್ತಾರೆ ಎಂದರು.

ಸಿದ್ದರಾಮಯ್ಯ ಅವರ ಮಾತುಗಳು ಕಟುವಾಗಿದ್ದರು. ಅವರ ಮನಸ್ಸು ಬಹಳ ಮೃದು. ಸಚಿವರ ಹಾಗೂ ಶಾಸಕರು ತಮ್ಮ ಕ್ಷೇತ್ರದ ಅಭಿವೃದ್ಧಿಯ ಬಗ್ಗೆ ಸಕ್ರಿಯವಾಗಿ ತೊಡಗಿಕೊಂಡು ಅನುದಾನವನ್ನು ನೀಡಿ ಸ್ಪಂದಿಸುತ್ತಾರೆ. ಸಾರ್ವಜನಿಕರಿಗೆ ಸುಖ, ಶಾಂತಿ ನೆಮ್ಮದಿ ನೀಡಲಿ ಎಂದು ಅನ್ನದಾನೇಶ್ವರ ದೇವಸ್ಥಾನವನ್ನು ಉತ್ತಮ ದೇವಸ್ಥಾನವನ್ನಾಗಿ ಅಭಿವೃದ್ಧಿ ಪಡಿಸಿದ್ದಾರೆ. ಇದಕ್ಕೆ ಗ್ರಾಮಸ್ಥರ ಕಡೆಯಿಂದ ಧನ್ಯಾವಾದಗಳು ಎಂದು ಹೇಳಿದರು.

ಸಿದ್ದರಾಮಯ್ಯ ಅವರು ಅಧಿಕಾರ ಸ್ವೀಕರಿಸಿದ ನಂತರ ರಾಜ್ಯದಲ್ಲಿ ಉತ್ತಮ ಮಳೆಯಾಗಿದೆ ಕಳೆದ ವರ್ಷ 148 ಲಕ್ಷ ಮೆಟ್ರಿಕ್ ಟನ್ ಆಹಾರ ಉತ್ಪಾದನೆ ಮಾಡಲಾಗಿದೆ. ಇದು ಅಭಿವೃದ್ಧಿಯ ಸಂಕೇತ ಇದೇ ರೀತಿ ಕೃಷಿಯಲ್ಲಿ ಉತ್ತಮ ಸಾಧನೆ ಮಾಡಬೇಕು ಎಂದು ಮುಖ್ಯಮಂತ್ರಿಗಳು ಸಲಹೆ ಸೂಚನೆಗಳನ್ನು ನೀಡಿದ್ದಾರೆ. ರಾಜ್ಯದಲ್ಲಿ ರೈತರಿಗೆ ಬಿತ್ತನೆ ಬೀಜ, ಗೊಬ್ಬರದ ತೊಂದರೆಯಾಗಬಾರದು, ಅರ್ಹ ರೈತರಿಗೆ ಕೃಷಿ ಉಪಕರಣಗಳಿಗೆ ಸಹಾಯಧನ ಹಾಗೂ ಇನ್ನಿತರೆ ಕಾರ್ಯಕ್ರಮಗಳಿಗೆ 1000 ಕೋಟಿ ಅನುದಾನ ನೀಡಲಾಗಿದೆ ರಾಜ್ಯದ ನಾಲೆ, ಕೆರೆಗಳ ಅಭಿವೃದ್ಧಿಗೆ ಹೆಚ್ಚು ಒತ್ತು ನೀಡಲಾಗುತ್ತಿದೆ ಎಂದರು.

ವೇದಿಕೆಯಲ್ಲಿ ಶಾಸಕ ಎ.ಬಿ.ರಮೇಶ್ ಬಂಡಿಸಿದ್ದೇಗೌಡ ರವಿಕುಮಾರ್ ಗಣಿಗ ಕಿಂಬಿಉದಯ್, ವಿಧಾನಪರಿಷತ್ ಸದಸ್ಯರಾದ ದಿನೇಶ್ ಗೂಳೀಗೌಡ, ಮಧು ಜಿ.ಮಾದೇಗೌಡ, ಯತೀಂದ್ರ ಸಿದ್ದರಾಮಯ್ಯ, ಮಾಜಿ ಶಾಸಕಿ ವಿಜಯಲಕ್ಷ್ಮಮ್ಮ ಬಂಡಿಸಿದ್ದೇಗೌಡ, ಕಾಂಗ್ರೆಸ್ ಮುಖಂಡ ಬಿ.ರೇವಣ್ಣ ಸೇರಿದಂತೆ ಇನ್ನಿತರೆ ಗಣ್ಯರು ಉಪಸ್ಥಿತರಿದ್ದರು.



ಅಲ್ಲಾಪಟ್ಟಣದ ಶ್ರೀ ಅನ್ನದಾನೇಶ್ವರ ಸ್ವಾಮಿ ದೇವಸ್ಥಾನ ಪುನರ್ ನಿರ್ಮಾಣ, ವಿಗ್ರಹಗಳ ಸ್ಥಾಪನೆ ಹಾಗೂ ಗೋಪುರ ಕುಂಭಾಭಿಷೇಕ ಕಾರ್ಯಕ್ರಮದಲ್ಲಿ ಪಾಲ್ಗೊಂಡಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ, ಸಚಿವರು ಹಾಗೂ ಶಾಸಕರು.

ಬಿಜೆಪಿ, ಆರ್‌ಎಸ್‌ಎಸ್‌ಗೆ ಸಾಮಾಜಿಕ ನ್ಯಾಯದಲ್ಲಿ ನಂಬಿಕೆ ಇಲ್ಲ: ಮುಖ್ಯಮಂತ್ರಿ

ಮಂಡ್ಯ: ಬಿಜೆಪಿ ಮತ್ತು ಆರ್‌ಎಸ್‌ಎಸ್‌ಗೆ ಸಾಮಾಜಿಕ ನ್ಯಾಯದಲ್ಲಿ ನಂಬಿಕೆ ಇಲ್ಲ. ಈ ಬಗ್ಗೆ ಅವರಿಗೆ ಬದ್ಧತೆಯೂ ಇಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ವಾಗ್ದಾಳಿ ನಡೆಸಿದರು.

ಶುಕ್ರವಾರ ತಾಲ್ಲೂಕಿನ ತೂಬಿನಕೆರೆ ಹೆಲಿಪ್ಯಾಡ್‌ನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನೂರು ವರ್ಷಗಳ ಇತಿಹಾಸ ನೋಡಿದರೆ ಅವರು ಯಾವಾಗಲೂ ಸಾಮಾಜಿಕ ನ್ಯಾಯವನ್ನು ವಿರೋಧಿಸುತ್ತಲೇ ಬಂದವರು. ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಮಿಲ್ಲರ್ ಆಯೋಗದಿಂದ ಹಿಡಿದು ಇಂದಿನವರೆಗೆ ವಿರೋಧ ಮಾಡುತ್ತಲೇ ಬಂದಿದ್ದಾರೆ. ಆರ್‌ಎಸ್‌ಎಸ್ 1925 ರಂದು ಪ್ರಾರಂಭವಾಗಿದ್ದು 2025 ಕ್ಕೆ ನೂರು ವರ್ಷಗಳಾಗುತ್ತಿದೆ. ಅವರು ಮೀಸಲಾತಿಯನ್ನು ಎಂದೂ ಒಪ್ಪಿಲ್ಲ ಎಂದರು.

ಸಾಮಾಜಿಕ, ಶೈಕ್ಷಣಿಕ ಮತ್ತು ಆರ್ಥಿಕ ಸಮೀಕ್ಷೆ ಆಗಬೇಕು: ರಾಹುಲ್ ಗಾಂಧಿ ಅವರು ಎರಡು ವರ್ಷಗಳಿಂದ ಈ ಬಗ್ಗೆ ಬಹಳ ಗಂಭೀರವಾಗಿ ಒತ್ತಾಯ ಮಾಡುತ್ತಿದ್ದರು. ಕಾಂಗ್ರೆಸ್ ಪ್ರಣಾಳಿಕೆಯಲ್ಲಿ ಕೂಡ ಇದನ್ನು ಸೇರಿಸಲು ಅವರೇ ಕಾರಣಕರ್ತರು. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಪ್ರಧಾನಿ ಮೋದಿಯವರಿಗೆ ಪತ್ರವನ್ನೂ ಬರೆದಿದ್ದರು. ಈ ಎಲ್ಲರ ಹೋರಾಟ ಮತ್ತು ಒತ್ತಡದ ನಂತರ ಜಾತಿಗಣತಿ ಮಾಡುತ್ತೇವೆ ಎಂದು ಕೇಂದ್ರ ಸರ್ಕಾರ ಹೇಳಿದೆ. ಆದರೆ ಯಾವಾಗ ಎಂದು ಸಮಯ ನಿಗದಿ ಮಾಡಿಲ್ಲ ಎಂದರು.

ಜನಗಣತಿಯಲ್ಲಿಯೇ ಜಾತಿ ಗಣತಿಯನ್ನು ಮಾಡುವುದಾಗಿ ಹೇಳಿದ್ದಾರೆ. ಸಾಮಾಜಿಕ, ಶೈಕ್ಷಣಿಕ ಮತ್ತು ಆರ್ಥಿಕ ಸಮೀಕ್ಷೆ ಆಗಬೇಕು. ಸಂವಿಧಾನಕ್ಕೆ ತಿದ್ದುಪಡಿ ತಂದು ಮೀಸಲಾತಿಯ ಗರಿಷ್ಠ ಪರಿಮಿತಿಯನ್ನು ಹೆಚ್ಚು ಮಾಡಬೇಕು. ಸರ್ವೋಚ್ಚ ನ್ಯಾಯಾಲಯದ ವಿಭಾಗೀಯ ಪೀಠವು ಶೇ.50% ಗಿಂತ ಹೆಚ್ಚಬಾರದು ಎಂದು ಹೇಳಿದೆ. ಮೀಸಲಾತಿ 50% ಆದರೆ, ಜನಸಂಖ್ಯೆಯ ಅನುಗುಣವಾಗಿ ಮೀಸಲಾತಿ ನೀಡಬೇಕು ಎಂದರು.

ಹಿಂದುಳಿದವರಿಗೆ ಮೀಸಲಾತಿ ಅತ್ಯಂತ ಅನಿವಾರ್ಯ ಮತ್ತು ಅಗತ್ಯ: ಸಾಮಾಜಿಕ, ಶೈಕ್ಷಣಿಕ, ಆರ್ಥಿಕವಾಗಿ ಹಿಂದುಳಿದವರಿಗೆ ಮೀಸಲಾತಿ ಕೊಡಬೇಕಾಗಿರುವುದು ಅತ್ಯಂತ ಅನಿವಾರ್ಯ ಮತ್ತು ಅಗತ್ಯ. ಸಮ ಸಮಾಜದ ನಿರ್ಮಾಣಕ್ಕೆ ಎಲ್ಲರೂ ಆರ್ಥಿಕವಾಗಿ ಸಾಮಾಜಿಕವಾಗಿ ಸಬಲರಾಗಬೇಕು. ಆಗ ಮಾತ್ರ ಜಾತಿಯನ್ನು ಹೋಗಲಾಡಿಸಲು ಸಾಧ್ಯವಾಗುತ್ತದೆ ಎಂದು ತಿಳಿಸಿದರು.

ಸುಂಕಾತೊಣ್ಣೂರು ಡೇರಿಗೆ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆ



ಪಾಂಡವಪುರ ತಾಲೂಕಿನ ಸುಂಕಾತೊಣ್ಣೂರು ಗ್ರಾಮದ ಹಾಲು ಉತ್ಪಾದಕರ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಎಸ್.ಜಿ.ಮಹೇಶ್, ಉಪಾಧ್ಯಕ್ಷ ಹೇಮಂತ್‌ಕುಮಾರ್ ಆಯ್ಕೆಯಾಗಿದ್ದು, ಅವರನ್ನು ಮನ್‌ಮುಲ್ ನಿರ್ದೇಶಕ ಸಿ.ಶಿವಕುಮಾರ್ ಸೇರಿದಂತೆ ಮುಖಂಡರು ಅಭಿನಂದಿಸಿದರು. ನಿರ್ದೇಶಕರಾದ ಜಿ.ದೇವೇಗೌಡ, ಲೋಕೇಶ, ಅಪ್ಪುಗೌಡ, ಸತೀಶ್, ಮಧುಶಂಕರ್, ಬಿ.ಸವೀನ, ಯಶೋಧಮ್ಮ, ರಾಮಚಂದ್ರು, ಕಾಳೇಗೌಡ, ಸಿ.ಎಸ್.ಲೋಕೇಶ್, ನಂದೀಶ್, ಪಾರ್ಥಸಾರಥಿ, ಎಸ್.ಕೆ.ಪ್ರಭಾಕರ, ಕೋಡಾಲರಾಧಾಕೃಷ್ಣ, ಮೋಹನ್‌ಕುಮಾರ್, ಡೇರಿಸ್ವಾಮೀಗೌಡ, ಯೋಗರಾಜು, ಧರ್ಮ, ಮೋಹನ್ ಹಲವರು ಹಾಜರಿದ್ದರು.

ಎಸ್‌ಎಸ್‌ಎಲ್‌ಸಿ ಫಲಿತಾಂಶ: ಮಂಡ್ಯಕ್ಕೆ 12ನೇ ಸ್ಥಾನ, ಧೃತಿ ರಾಜ್ಯಕ್ಕೆ ಪ್ರಥಮ

ಮಂಡ್ಯ: ಎಸ್ಸೆಸ್ಸೆಲ್ಸಿ ಪರೀಕ್ಷೆ ಫಲಿತಾಂಶ ಪ್ರಕಟಗೊಂಡಿದ್ದು, ಮಂಡ್ಯ ಜಿಲ್ಲೆಯು ರಾಜ್ಯದಲ್ಲಿಯೇ 12ನೇ ಸ್ಥಾನಕ್ಕೆ ಜಿಗಿದಿದೆ. ಆದರೆ ಫಲಿತಾಂಶ ಕುಸಿತವಾದರೂ 7 ಸ್ಥಾನಗಳ ಜಿಗಿತ ಕಂಡಿದ್ದು, ಕೆ.ಆರ್.ಪೇಟೆಯ ವಿದ್ಯಾರ್ಥಿ ಧೃತಿ ರಾಜ್ಯಕ್ಕೆ ಟಾಪರ್ ಆಗಿ ಹೊರ ಹೊಮ್ಮಿದ್ದಾರೆ.

ಜಿಲ್ಲೆಯು ಶೇ.69.27ರಷ್ಟು ಫಲಿತಾಂಶ ಪಡೆದಿದ್ದು, ಕಳೆದ ವರ್ಷ ಶೇ.74.54ರಷ್ಟು ಫಲಿತಾಂಶದೊಂದಿಗೆ 19ನೇ ಸ್ಥಾನದಲ್ಲಿತ್ತು. ಆದರೆ ಈ ಬಾರಿ ಶೇ.5.27ರಷ್ಟು ಫಲಿತಾಂಶದಲ್ಲಿ ಕುಸಿತ ಕಂಡಿದೆ.

13476 ವಿದ್ಯಾರ್ಥಿಗಳು ಉತ್ತೀರ್ಣ: ರಾಜ್ಯ ಫಲಿತಾಂಶದಲ್ಲಿ ಶೇ.66.14ರಷ್ಟು ಇದ್ದರೆ, ಜಿಲ್ಲಾ ಫಲಿತಾಂಶದಲ್ಲಿ ಶೇ.69.27ರಷ್ಟು ಪಡೆದಿದೆ ಈ ಬಾರಿಯೂ ಗ್ರಾಮೀಣ ವಿದ್ಯಾರ್ಥಿಗಳು ಹಾಗೂ ಮಹಿಳಾ ವಿದ್ಯಾರ್ಥಿಗಳೇ ಮೇಲುಗೈ ಸಾಧಿಸಿದ್ದಾರೆ. ಜಿಲ್ಲೆಯಾದ್ಯಂತ ಒಟ್ಟು 19453 ಅಭ್ಯರ್ಥಿಗಳು ಪರೀಕ್ಷೆ ಬರೆದಿದ್ದರು. ಅದರಲ್ಲಿ 13476 ಅಭ್ಯರ್ಥಿಗಳು ಉತ್ತೀರ್ಣರಾಗಿದ್ದು, 5977 ವಿದ್ಯಾರ್ಥಿಗಳು ಅನುತ್ತೀರ್ಣರಾಗಿದ್ದಾರೆ.

ಬಾಲಕಿಯರೇ ಮೇಲುಗೈ: ಜಿಲ್ಲೆಯಲ್ಲಿ ಈ ಬಾರಿಯೂ ಬಾಲಕಿಯರೇ ಮೇಲುಗೈ ಸಾಧಿಸಿದ್ದಾರೆ ಉತ್ತೀರ್ಣರಾಗಿರುವ 13476 ವಿದ್ಯಾರ್ಥಿಗಳಲ್ಲಿ 7587 ಬಾಲಕಿಯರು ಉತ್ತೀರ್ಣರಾಗಿದ್ದರೆ, 5889 ಮಂದಿ ಬಾಲಕರು ಪಾಸ್ ಆಗಿದ್ದಾರೆ. ಬಾಲಕರು ಶೇ.55.74ರಷ್ಟು ಫಲಿತಾಂಶ ಪಡೆದಿದ್ದರೆ, ಬಾಲಕಿಯರು ಶೇ.75.76ರಷ್ಟು ಫಲಿತಾಂಶ ಪಡೆದಿದ್ದಾರೆ.

ನನ್ನ ಸಾಧನೆಗೆ ಕುಟುಂಬ, ಶಿಕ್ಷಕರೇ ಕಾರಣ; ಧೃತಿ



ಕೆ.ಆರ್.ಪೇಟೆ ತಾಲೂಕಿನ ಎಸ್‌ಎಸ್‌ಕೆಸಿ ಪ್ರೌಢಶಾಲೆಯ ವಿದ್ಯಾರ್ಥಿನಿ ಧೃತಿ 625ಕ್ಕೆ 625 ಅಂಕ ಗಳಿಸುವ ಮೂಲಕ ರಾಜ್ಯಕ್ಕೆ ಪ್ರಥಮ ಸ್ಥಾನ ಗಳಿಸಿದ್ದಾರೆ. ತಮ್ಮ ಸಾಧನೆ ಬಗ್ಗೆ ಹರ್ಷ ವ್ಯಕ್ತಪಡಿಸಿ ಮಾತನಾಡಿರುವ ಅವರು, ನನ್ನ ಈ ಫಲಿತಾಂಶಕ್ಕೆ ನನ್ನ ತಂದೆ, ತಾಯಿ, ಸಹೋದರಿ ಹಾಗೂ ಶಿಕ್ಷಕರು ಕಾರಣರಾಗಿದ್ದಾರೆ. ಮುಂದೆ ಉನ್ನತ ವಿದ್ಯಾಭ್ಯಾಸ ಮಾಡುವ ಕನಸು ಹೊಂದಿದ್ದೇನೆ ಎಂದು ಹೇಳಿದ್ದಾರೆ.

ಮಂಡ್ಯ ದಕ್ಷಿಣ ವಲಯ ಪ್ರಥಮ: ಜಿಲ್ಲೆಯ ತಾಲೂಕುವಾರು ಫಲಿತಾಂಶದಲ್ಲಿ ಮಂಡ್ಯ ದಕ್ಷಿಣ ವಲಯ ಶೇ.79.77ರಷ್ಟು ಫಲಿತಾಂಶದೊಂದಿಗೆ ಪ್ರಥಮ ಸ್ಥಾನ ಪಡೆದಿದೆ. ದಕ್ಷಿಣ ಉತ್ತರ ವಲಯ ಶೇ.79.26ರಷ್ಟು ಫಲಿತಾಂಶದೊಂದಿಗೆ ದ್ವಿತೀಯ ಸ್ಥಾನದಲ್ಲಿದೆ. ಇನ್ನುಳಿದಂತೆ ನಾಗಮಂಗಲ ಶೇ.69.22 ಫಲಿತಾಂಶದೊಂದಿಗೆ ತೃತೀಯ ಸ್ಥಾನ, ಮಳವಳ್ಳಿ ಶೇ.68.59 ನಾಲ್ಕನೇ ಸ್ಥಾನ, ಶ್ರೀರಂಗಪಟ್ಟಣ ಶೇ.65.65ರಷ್ಟು ಫಲಿತಾಂಶದೊಂದಿಗೆ 5ನೇ ಸ್ಥಾನ, ಮದ್ದೂರು ಶೇ.65.65ರಷ್ಟು ಪಡೆದು 6ನೇ ಸ್ಥಾನ, ಪಾಂಡವಪುರ ಶೇ.64.88 ಹಾಗೂ ಕೆ.ಆರ್.ಪೇಟೆ ಶೇ.60.89ರ ಫಲಿತಾಂಶದೊಂದಿಗೆ 7 ಮತ್ತು 8ನೇ ಸ್ಥಾನ ಪಡೆದಿವೆ.

12 ಶಾಲೆಗಳಿಗೆ ಶೇ.100ರಷ್ಟು ಫಲಿತಾಂಶ: ಜಿಲ್ಲೆಯ 12 ಶಾಲೆಗಳು ಮಾತ್ರ ಶೇ.100ರಷ್ಟು ಫಲಿತಾಂಶ ಪಡೆದಿವೆ. ಅದರಲ್ಲಿ ನಾಲ್ಕು ಸರ್ಕಾರಿ ಪ್ರೌಢಶಾಲೆಗಳಿದ್ದರೆ, 8 ಅನುದಾನರಹಿತ ಶಾಲೆಗಳು ಪಡೆದಿವೆ. ಇದರಲ್ಲಿ ಅನುದಾನಿತ ಒಂದೂ ಶಾಲೆಯೂ ಶೇ.100ರಷ್ಟು ಫಲಿತಾಂಶ ಪಡೆದಿಲ್ಲ.

ಡಿಡಿಪಿಐ ಶಿವರಾಮೇಗೌಡ ಪ್ರತಿಕ್ರಿಯಿಸಿ, ಟಾಪ್ 10 ಒಳಗೆ ಮಂಡ್ಯ ಜಿಲ್ಲೆ ಇರಬೇಕೆಂಬ ಕನಸು ಕಂಡಿದ್ದೆವು. ಜೊತೆಗೆ ಪ್ರಯತ್ನ ಸಹ ಮಾಡಿದ್ದೆವು. ಆದರೆ ನಮಗೆ ಹಿನ್ನಡೆಯಾಗಿದೆ. ಅನುತ್ತೀರ್ಣರಾದ ವಿದ್ಯಾರ್ಥಿಗಳಿಗೆ ಶೀಘ್ರ ವಿಶೇಷ ತರಗತಿ ಆರಂಭಿಸಲಾಗುವುದು. ಮುಂದಿನ ಶೈಕ್ಷಣಿಕ ವರ್ಷದಲ್ಲಿ ಹೆಚ್ಚಿನ ಫಲಿತಾಂಶಗಳಿಸಲು ಪ್ರಯತ್ನಿಸಲಾಗುವುದು ಎಂದು ಸ್ಪಷ್ಟಪಡಿಸಿದರು.

ಐದನೇ ಪುಟದಿಂದ

ಮೈಸೂರು, ಚಾಮರಾಜನಗರದಲ್ಲಿ 'ಬಾಂಬ್' ಬೆದರಿಕೆ!

ಹೆಸರು ಉಲ್ಲೇಖಿಸಿ, ಕೊನೆಯಲ್ಲಿ ಅಲ್ಲಾಹು ಅಕ್ಬರ್, ಮದ್ರಾಸ್ ಪುಲಿಗಳು ಎಂದು ಬರೆಯಲಾಗಿತ್ತು. ಅಲ್ಲದೆ ಮಧ್ಯಾಹ್ನ 3 ಗಂಟೆ ವೇಳೆಗೆ ಪೈಪ್‌ಗಳಲ್ಲಿ ಅಡಗಿಸಿಟ್ಟಿರುವ ಬಾಂಬ್‌ಗಳು ಸ್ಫೋಟಗೊಳ್ಳುವುದಾಗಿ ಬೆದರಿಸಲಾಗಿತ್ತು. ಬೆಳಗ್ಗೆ 11.30ರ ವೇಳೆಗೆ ಈ ಸಂದೇಶದ ಬಗ್ಗೆ ತಿಳಿದ ಜಿಲ್ಲಾಧಿಕಾರಿ ಶಿಲ್ಪಾನಾಗ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಬಿ.ಟಿ. ಕವಿತಾ ಅವರ ಗಮಕ್ಕೆ ತಂದ ಬಳಿಕ ಅಗತ್ಯ ಮುಂಜಾಗ್ರತಾ ಕ್ರಮ ಕೈಗೊಂಡು ಜಿಲ್ಲಾಡಳಿತ ಭವನದಲ್ಲಿನ ವಿವಿಧ ಇಲಾಖೆ ಗಳ ಅಧಿಕಾರಿಗಳು, ಸಿಬ್ಬಂದಿ ಹಾಗೂ ಸಾರ್ವಜನಿಕರನ್ನು ಹೊರಗೆ ಕಳುಹಿಸಿದರು.



ಭವನ ಆವರಣದೊಳಕ್ಕೆ ಸಾರ್ವಜನಿಕರ ಪ್ರವೇಶವನ್ನು ನಿರ್ಬಂಧಿಸಿ ಬಿಗಿ ಪೊಲೀಸ್ ಬಂದೋಬಸ್ತ್ ಕೈಗೊಂಡು, ಶ್ವಾನದಳ, ಬಾಂಬ್ ನಿಷ್ಕ್ರಿಯ ದಳದ ಸಿಬ್ಬಂದಿ ಭವನದ ಮೂಲೆ–ಮೂಲೆ ಪರಿಶೀಲನೆ ನಡೆಸಿದರು. ಆದರೆ ಯಾವುದೇ ಸ್ಫೋಟಕ ಪತ್ತೆಯಾಗಲಿಲ್ಲ. ಶೋಧ ಕಾರ್ಯಾಚರಣೆ ವೇಳೆ ಜಿಲ್ಲಾಧಿಕಾರಿ ಶಿಲ್ಪಾನಾಗ್, ಎಡಿಸಿ ಗೀತಾ ಹುಡೇದಾ ಹಾಗೂ ಜಿಪಂ ಸಿಇಒ ಮೋನಾ ರೋತ್ ಜಿಲ್ಲಾಡಳಿತ ಭವನದ ಹೊರಗಿರುವ ಮರದ ಕೆಳಗೆ ಕುಳಿತು ಕಾರ್ಯನಿರ್ವಹಿಸಿದರು.

ಘಟನೆ ಸಂಬಂಧ ಜಿಲ್ಲಾಧಿಕಾರಿ ಶಿಲ್ಪಾನಾಗ್ ಪ್ರತಿಕ್ರಿಯಿಸಿ, ಜಿಲ್ಲಾಡಳಿತ ಭವನ ಸ್ಫೋಟಿಸುವುದಾಗಿ ಬಾಂಬ್ ಬೆದರಿಕೆ ಸಂದೇಶ ಬಂದಿರುವ ಸಂಬಂಧ ಪೊಲೀಸ್ ಇಲಾಖೆ ಸೂಕ್ತ ಕ್ರಮ ಕೈಗೊಳ್ಳಲಿದೆ. ಈ ಬಗ್ಗೆ ಸೆನ್ ಠಾಣೆಗೆ ದೂರು ನೀಡಿ, ರಾಜ್ಯ ಮಟ್ಟದ ಅಧಿಕಾರಿಗಳ ಗಮನಕ್ಕೂ ತರಲಾಗಿದೆ. ಮುಂಜಾಗ್ರತಾ ಕ್ರಮವಾಗಿ ಎಲ್ಲಾ ನೌಕರರನ್ನು ಹೊರಗೆ ಕಳಿಸಿ, ಜಿಲ್ಲಾಡಳಿತ ಭವನದಲ್ಲಿ ತಪಾಸಣೆ ಮಾಡಲಾಗಿದೆ. ಯಾರೂ ಆತಂಕಪಡುವ ಅಗತ್ಯ ಇಲ್ಲ ಎಂದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಬಿ.ಟಿ. ಕವಿತಾ ಮಾತನಾಡಿ, ವಿಷಯ ತಿಳಿಯುತ್ತಿದ್ದಂತೆ ಎಲ್ಲಾ ಮುಂಜಾಗ್ರತಾ ಕ್ರಮ ಕೈಗೊಂಡು ಕಚೇರಿಯಲ್ಲಿದ್ದ ನೌಕರರು, ಸಾರ್ವಜನಿಕರನ್ನು ಹೊರ ಕಳುಹಿಸಿ ಬಾಂಬ್ ನಿಷ್ಕ್ರಿಯ ದಳ ಹಾಗೂ ಶ್ವಾನದಳದಿಂದ ಶೋಧ ಕಾರ್ಯ ನಡೆಸ ಲಾಯಿತು. ಆದರೆ, ಯಾವುದೇ ಬಾಂಬ್ ಪತ್ತೆಯಾಗಿಲ್ಲ. ಈ ಬಗ್ಗೆ ಎಲ್ಲಾ ಆಯಾಮಗಳಲ್ಲೂ ತನಿಖೆ ನಡೆಸಲಾಗುತ್ತಿದ್ದು, ಸಂದೇಶ ಎಲ್ಲಿಂದ ಬಂದಿದೆ, ಯಾರು ಕಳುಹಿಸಿದ್ದಾರೆ ಎಂದು ಪತ್ತೆ ಹಚ್ಚಲಾಗುತ್ತಿದೆ ಎಂದು ತಿಳಿಸಿದರು.

22 ಮಂದಿಗೆ 625ಕ್ಕೆ 625

24116 ಮಂದಿ ತೇರ್ಗಡೆ ಹೊಂದುವ ಮೂಲಕ ಜಿಲ್ಲೇ ಶೇ.68.39ರಷ್ಟು ಫಲಿತಾಂಶದೊಂದಿಗೆ ರಾಜ್ಯದಲ್ಲಿ 15ನೇ ಸ್ಥಾನ ಪಡೆದಿದ್ದು, ಮೈಸೂರಿನ ಬಿವಿವಿ ಶಾಲೆಯ ತಾನ್ಯಾ ಮತ್ತು ಮರಿಮಲ್ಲಪ್ಪ ಶಾಲೆಯ ಧನುಷ್ 625ಕ್ಕೆ 625 ಅಂಕ ಪಡೆದು ರಾಜ್ಯಕ್ಕೆ ಟಾಪರ್‌ಗಳಾಗಿ ಹೊರ ಹೊಮ್ಮಿದ್ದಾರೆ. ಚಾಮರಾಜನಗರ ಜಿಲ್ಲೆಯಲ್ಲಿ 10749 ಮಂದಿ ಪರೀಕ್ಷೆಗೆ ಹಾಜರಾಗಿದ್ದು, ಅವರ ಪೈಕಿ 6605 ವಿದ್ಯಾರ್ಥಿಗಳು ತೇರ್ಗಡೆ ಹೊಂದುವ ಮೂಲಕ ಜಿಲ್ಲೆ ಶೇ.61.45ರಷ್ಟು ಫಲಿತಾಂಶದೊಂದಿಗೆ ರಾಜ್ಯಕ್ಕೆ 27ನೇ ಸ್ಥಾನ ಪಡೆದಿದೆ.

625ಕ್ಕೆ 625 ಅಂಕ ಪಡೆದವರು: ಅಖೀಲ್ ಅಹ್ಮದ್ ನದಾಫ್–ಆಕ್ಸ್‌ಫರ್ಡ್ ಶಾಲೆ, ವಿಜಯಪುರ, ಭಾವನಾ–ನೀಲಗಿರೇಶ್ವರ ವಿದ್ಯಾನಿಕೇತನ ಶಾಲೆ, ದೇವನಹಳ್ಳಿ, ಎಂ.ಧನಲಕ್ಷ್ಮೀ–ಸೇಂಟ್ ಯಶ್ ಶಾಲೆ, ಬೆಂಗಳೂರು ಉತ್ತರ, ಎಸ್.ಧನುಷ್–ಮರಿಮಲ್ಲಪ್ಪ ಹೈಸ್ಕೂಲ್, ಮೈಸೂರು ಜಿಲ್ಲೆ, ಜೆ.ಧೃತಿ–ಸಾಹುಕಾರ್ ಚಿಕ್ಕನಗೌಡ ಶಾಲೆ, ಕೆ.ಆರ್.ಪೇಟೆ, ಮಂಡ್ಯ, ಎಸ್.ಎನ್.ಜಾಹ್ನವಿ–ವಿಜಯ ಭಾರತಿ ವಿದ್ಯಾಲಯ, ಬೆಂಗಳೂರು ದಕ್ಷಿಣ, ಮಧುಸೂದನ್ ರಾಜ್–ಎಂಇಎಸ್ ಕಿಶೋರ ಕೇಂದ್ರ, ಬೆಂಗಳೂರು ಉತ್ತರ. ಮೊಹಮ್ಮದ್ ಮಸ್ತೂರ್–ಚೇತನ ವಿದ್ಯಾಮಂದಿರ, ತುಮಕೂರು, ವೌಲ್ಯ ಡಿ. ರಾಜ್–ರಾಷ್ಟ್ರೀಯ ಅಕಾಡೆಮಿ ಶಾಲೆ, ಚಿತ್ರದುರ್ಗ, ಕೆ.ನವ್ಯನ–ಪ್ರಿಯದರ್ಶಿನಿ ಹೈಸ್ಕೂಲ್, ಶಿವಮೊಗ್ಗ ಜಿಲ್ಲೆ, ನಮಿತಾ–ಮಾತಾ ನ್ಯಾಷನಲ್ ಇಂಗ್ಲಿಷ್ ಶಾಲೆ, ಬೆಂಗಳೂರು ದಕ್ಷಿಣ, ನಂದನ್–ರಾಷ್ಟ್ರೀಯ ಅಕಾಡೆಮಿ ಇಂಗ್ಲಿಷ್ ಶಾಲೆ, ಚಿತ್ರದುರ್ಗ, ನಿತ್ಯ ಎಂ.ಕುಲಕರ್ಣಿ–ರಾಮಕೃಷ್ಣ ಇಂಗ್ಲಿಷ್ ಶಾಲೆ, ಶಿವಮೊಗ್ಗ, ರಂಜಿತಾ–ಚಂದ್ರಶೇಖರನಾಥ ಸ್ವಾಮೀಜಿ ಶಾಲೆ, ಬೆಂಗಳೂರು ಗ್ರಾಮಾಂತರ, ರೂಪಾ ಪಾಟೀಲ್–ಸರ್ಕಾರಿ ಕಾಂಪೋಸಿಟ್ ಪಿಯು ಕಾಲೇಜು, ಬೆಳಗಾವಿ, ಸಹಿಷ್ಣು ಎನ್–ಆದಿಚುಂಚನಗಿರಿ ಹೈಸ್ಕೂಲ್, ಶಿವಮೊಗ್ಗ ಜಿಲ್ಲೆ, ಶಗುಫ್ತಾ ಅಂಜುಮ್–ಸರ್ಕಾರಿ ಕಾಂಪೋಸಿಟ್ ಉರ್ದು ಶಾಲೆ, ಶಿರಸಿ, ಸ್ವಸ್ತಿ ಕಾಮತ್–ಕಾರ್ಕಳ ಜ್ಞಾನಸುಧಾ ಇಂಗ್ಲಿಷ್ ಶಾಲೆ, ಉಡುಪಿ, ಆರ್.ಎನ್.ತಾನ್ಯಾ–ಭಾರತೀಯ ವಿದ್ಯಾಭವನ ಶಾಲೆ (ಬಿಕೆಎಸ್‌ವಿಬಿ) ಶಾಲೆ, ವಿಜಯನಗರ, ಮೈಸೂರು, ಉತ್ಸವ್ ಪಟೇಲ್–ವಿಜಯ ಸ್ಕೂಲ್, ಚಿಕ್ಕಹೊನ್ನೇನಹಳ್ಳಿ, ಹಾಸನ, ಯಶ್ವಿತಾ ರೆಡ್ಡಿ–ಚಿರೆಕ್ ಪಬ್ಲಿಕ್ ಸ್ಕೂಲ್, ಮಧುಗಿರಿ, ತುಮಕೂರು, ಯುಕ್ತಾ ಎಸ್–ಹೋಲಿ ಚೈಲ್ಡ್ ಇಂಗ್ಲಿಷ್ ಶಾಲೆ, ಬೆಂಗಳೂರು ಉತ್ತರ.

ಕಾಡುತ್ತಿದೆ ಅಭದ್ರತೆ

ನೀರಾವರಿ ನಿಗಮದ ಅಧಿಕಾರಿಗಳು ಕ್ಯಾರೆ ಎನ್ನುತ್ತಿಲ್ಲ ಎಂಬ ದೂರುಗಳು ಕೇಳಿ ಬಂದಿವೆ. ಕೆಲ ದಿನಗಳ ಹಿಂದೆ ಕೆಆರ್‌ಎಸ್ ಬೃಂದಾವನದಲ್ಲಿ ಪ್ರವಾಸಕ್ಕೆ ಬಂದಿದ್ದ ಮಹಿಳೆಯರೊಂದಿಗೆ ಅಸಭ್ಯವಾಗಿ ವರ್ತಿಸಿದ ಕೇರಳ ಮೂಲದ ಪ್ರವಾಸಿಗನಿಗೆ ಸ್ಥಳದಲ್ಲಿದ್ದ ಸಾರ್ವಜನಿಕರು ಸರಿಯಾಗಿ ಗೂಸಾ ಕೊಟ್ಟಿದ್ದಾರೆ. ಇದರಿಂದ ಕುಸಿದು ಬಿದ್ದ ವ್ಯಕ್ತಿ ಚಿಕಿತ್ಸೆ ಫಲಿಸದೆ ಮೃತಪಟ್ಟಿದ್ದು, ಈ ಸಂಬಂಧ ಕೆಆರ್‌ಎಸ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ಕೂಡ ದಾಖಲಾಗಿದೆ. ಆದರೆ ಸ್ಥಳದಲ್ಲಿ ಯಾವುದೇ ಭದ್ರತಾ ಸಿಬ್ಬಂದಿ ಹಾಗೂ ಸಿಸಿ ಟಿವಿ ಕ್ಯಾಮಾರಾ ಇಲ್ಲದ ಕಾರಣ ಆ ವ್ಯಕ್ತಿಯ ಸಾವು ನಿಗೂಢವಾಗಿಯೇ ಉಳಿದು ಹೋಗಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಕಾವೇರಿ ನೀರಾವರಿ ನಿಗಮದ ಅಧಿಕಾರಿಗಳು ಮತ್ತು ಸರ್ಕಾರ ನಮ್ಮ ಮನವಿಗೆ ಸ್ಪಂದಿಸದ ಕಾರಣ ಈಗಿರುವ ನಮ್ಮ ಸಿಬ್ಬಂದಿಯೇ ಆದಷ್ಟು ಮ್ಯಾನುವಲ್ ಆಗಿಯೇ ತಪಾಸಣೆ ನಡೆಸುತ್ತಿದ್ದಾರೆ. ಮುಂದಿನ ದಿನಗಳಲ್ಲಾದರೂ ಅಧಿಕಾರಿಗಳು ಈ ಬಗ್ಗೆ ಗಮನ ಹರಿಸಲಿ ಎಂದು ಕಮಾಂಡೆಂಟ್ ಪ್ರಮೋದ್ ಆಗ್ರಹಿಸಿದ್ದಾರೆ.

ಯೋಜನೆಗೆ ಗ್ರಹಣ

ವಿವಾದದಲ್ಲಿವೆ. ಹೆಚ್ಚಿನ ಪರಿಹಾರಕ್ಕಾಗಿ ಕೆಲ ರೈತರು ನ್ಯಾಯಾಲಯದ ಮೊರೆ ಹೋಗಿದ್ದು, ಅವು ಇತ್ಯರ್ಥ ವಾಗಲು ಹಲವು ವರ್ಷಗಳೇ ಬೇಕಾಗಬಹುದು ಎಂದು ಮೂಲಗಳು ತಿಳಿಸಿವೆ. ಕೋಚನಹಳ್ಳಿ, ಅಡಕನಹಳ್ಳಿ, ಇಮ್ಮಾವು, ಕಡಕೊಳ ಸುತ್ತಲಿನ ಪ್ರದೇಶಗಳಲ್ಲಿ ಭೂಮಿ ಬೆಲೆ ಗಮನಾರ್ಹವಾಗಿ ಏರಿಕೆಯಾಗಿರುವುದರಿಂದ ಹೆಚ್ಚಿನ ಪರಿಹಾರಕ್ಕಾಗಿ ನ್ಯಾಯಾಲಯದ ಮೆಟ್ಟಿಲೇರಲು ಕಾರಣವಾಗಿವೆ ಎಂದು ಹೇಳಲಾಗಿದೆ. 2024ರ ಡಿಸೆಂಬರ್ ಮಾಹೆಯಲ್ಲಿ ಸರ್ಕಾರವು ಮೈಸೂರಲ್ಲಿ ಜೋಹೋ ಕಾರ್ಪೊರೇಷನ್‌ನ 400 ಮಿಲಿಯನ್ ಡಾಲರ್‌ಗಳ ಪ್ರಸ್ತಾವಿತ ಸೆಮಿಕಂಡಕ್ಟರ್ ಸೌಲಭ್ಯಕ್ಕೆ ಅನುಮೋದನೆ ನೀಡುವುದಾಗಿ ಘೋಷಿಸಿದ್ದನ್ನು ಇಲ್ಲಿ ಸ್ಮರಿಸಬಹುದಾಗಿದೆ. ಮೈಕ್ರೋ ಸಾಫ್ಟ್‌ನಂತಹ ತಂತ್ರಜ್ಞಾನ ದೈತ್ಯನ ಪರಿಕರಗಳಿಗೆ ಖ್ಯಾತಿಯಾದ 12 ಬಿಲಿಯನ್ ಡಾಲರ್‌ಗಳ ಸಾಫ್ಟ್‌ವೇರ್ ಕಂಪನಿ ಯಾದ ಜೋಹೋ ಸಿಲಿಕ್ಟ್ರೀ ಸೆಮಿಕಂಡಕ್ಟರ್ ಉತ್ಪಾದನೆ ಮೂಲಕ ಸ್ವಾವಲಂಬನೆಗೆ ಮುಂದಾಗಿದ್ದು, ಈಗ ಅದರಿಂದ ಹಿಂದೆ ಸರಿದಿದೆ.

ಶುಲ್ಕ ಭಾರಿ ಹೆಚ್ಚಳ

ಇದೇ ರೀತಿ ಪಾರ್ಕಿಂಗ್ ಶುಲ್ಕವನ್ನು ಬೇಕಾದಂತೆ ಹೆಚ್ಚಿಸಿರುವ ಗುತ್ತಿಗೆದಾರರು ದ್ವಿಚಕ್ರವಾಹನಕ್ಕೆ ರೂ. 10ರಿಂದ 20 ರೂ., ತ್ರಿಚಕ್ರ ವಾಹನಕ್ಕೆ ರೂ.40 ರಿಂದ 50 ರೂ.ಗೆ, ನಾಲ್ಕು ಚಕ್ರ (ಕಾರು, ಜೀಪು) ವಾಹನಗಳಿಗೆ 50ರಿಂದ 100 ರೂಗಳಿಗೆ, ಟೆಂಪೊ ಟ್ರಾವಲರ್ ಮತ್ತು ಮಿನಿ ಬಸ್‌ಗಳಿಗೆ 70ರಿಂದ 100 ರೂಗಳಿಗೆ ಹಾಗೂ ಬಸ್‌ಗಳಿಗೆ 100ರಿಂದ 200 ರೂ.ಗಳಿಗೆ ಪಾರ್ಕಿಂಗ್ ದರವನ್ನು ಹೆಚ್ಚಿಸಿರುವುದರಿಂದ ಪ್ರವಾಸಿಗರಿಗೆ ಮತ್ತು ವಾಹನ ಚಾಲಕರಿಗೆ ಹೊರೆಯಾಗಿದೆ. ಬೃಂದಾವನ ಮೇಲ್ಸೇತುವೆ ಟೋಲ್ ದರವನ್ನು ತ್ರಿಚಕ್ರ ವಾಹನಗಳಿಗೆ ರೂ. 20ರಿಂದ 50 ರೂ., ಕಾರು, ಜೀಪುಗಳಿಗೆ 50ರಿಂದ 100, ಟೆಂಪೊ ಟ್ರಾವಲರ್, ಮಿನಿ ಬಸ್‌ಗಳಿಗೆ 50ರಿಂದ 100, ಬಸ್‌ಗೆ 100ರಿಂದ 200, ಆರು ಚಕ್ರಗಳ ವಾಹನಕ್ಕೆ 150ರಿಂದ 200 ರೂ. ಹಾಗೂ ಹತ್ತು ಚಕ್ರಗಳ ಲಾರಿಗೆ 200ರಿಂದ 300ರೂ.ಗಳಿಗೆ ಶುಲ್ಕವನ್ನು ಹೆಚ್ಚಿಸಲಾಗಿದೆ.

ವಾರ್ಷಿಕ 5 ಕೋಟಿ ಸಂಗ್ರಹ: ಕೆಆರ್‌ಎಸ್ ಅಣೆಕಟ್ಟೆ ತಳಭಾಗದಲ್ಲಿರುವ ಬೃಂದಾವನವು ಮನಸೆಳೆಯುವ ಹೂವುಗಳು, ಕಣ್ಣು ಕೋರೈಸುವ ದೀಪಾಲಂಕಾರ, ಸಂಗೀತ ಕಾರಂಜಿ, ಬೋಟಿಂಗ್ ಆಕರ್ಷಣೆಗಳನ್ನು ಒಳಗೊಂಡಿದೆ. ಈ ಸುಂದರ ಸಸ್ಯೋದ್ಯಾನವನ್ನು ಕಣ್ತುಂಬಿಕೊಳ್ಳಲು ದೇಶ–ವಿದೇಶ ಗಳಿಂದ ಪ್ರತಿವರ್ಷ ಲಕ್ಷಾಂತರ ಪ್ರವಾಸಿ ಗರು ಇಲ್ಲಿಗೆ ಭೇಟಿ ನೀಡುತ್ತಾರೆ. ವಾರ್ಷಿಕವಾಗಿ ಪ್ರವೇಶ ಶುಲ್ಕದಿಂದ ಸರಾಸರಿ 5 ಕೋಟಿ ರೂ. ಮತ್ತು ವಾಹನ ಪಾರ್ಕಿಂಗ್ ನಿಂದ ಸರಾಸರಿ 75 ಲಕ್ಷ ರೂ. ಸಂಗ್ರಹವಾಗುತ್ತಿದೆ.

ನಕ್ಷತ್ರ ಸ್ಯಾರಿ ಸ್ಟೋರ್ ಆರಂಭ



ಮೈಸೂರಿನ ಜಯಲಕ್ಷ್ಮೀಪುರಂನಲ್ಲಿ 'ನಕ್ಷತ್ರ ಸ್ಯಾರಿ ಸ್ಟೋರ್' ಅನ್ನು ಮಾಜಿ ಕಾರ್ಪೊರೇಟರ್ ಭಾಗ್ಯ ಮಾದೇಶ್ ಉದ್ಘಾಟಿಸಿದರು.

ಮೈಸೂರು, ಮೇ 2– ಬಸವ ಜಯಂತಿ ಮತ್ತು ಅಕ್ಷಯ ತೃತೀಯ ಶುಭ ಘಳಿಗೆಯಲ್ಲಿ ಮೈಸೂರಿನ ಜಯಲಕ್ಷ್ಮೀ ಪುರಂ ದೇವಸ್ಥಾನ ರಸ್ತೆಯಲ್ಲಿ ನೂತನ 'ನಕ್ಷತ್ರ ಸ್ಯಾರಿ ಸ್ಟೋರ್' ಶುಭಾರಂಭಗೊಂಡಿದೆ.

ಉದ್ಘಾಟನಾ ಸಮಾರಂಭದಲ್ಲಿ ನಗರ ಪಾಲಿಕೆ ಮಾಜಿ ಸದಸ್ಯೆ ಭಾಗ್ಯ ಮಾದೇಶ್, ಆಶಿಹಾನ ಅಧ್ಯಕ್ಷೆ ಮಸೂಮ ವಾಗ್, ಪಟ್ಸ್ ಟು ಪಾನ್ಸ್ ಸಂಸ್ಥಾಪಕಿ ವನಿತಾ ಸಂತೋಷ್, ಎಕ್ಸ್ಲೋ ಡಿಸೈನರ್ ಅಂಡ್ ಅರ್ಗನೈಸರ್ ಸ್ಮಿತಾ ಬಾಲು, ಫಿಟ್ನೆಸ್ ಕೋಚ್ ವೀಣಾ ಅಶೋಕ್, ಡಾ.ಎಸ್.ಎಂ.ಅನುಶ್ರೀ, ಡಾ.ಬಿ.ಅಕ್ಷತಾ ಕಾಮತ್, ರಸಾಯನ ಕಿಚನ್ ಸಂಸ್ಥಾಪಕಿ ಸಹನಾ ಮೂರ್ತಿ, ಶೋಮಿಕಾ ಎಸ್ ರಾವ್ ಪಾಲ್ಗೊಂಡು, ಶುಭ ಕೋರಿದರು. ನಕ್ಷತ್ರ ಸಂಸ್ಥಾಪಕರಾದ ಕೆ.ಎಸ್.ನಾಗಶ್ರೀ, ಅರ್ಜುನ್ ಶಿವ, ಪವಿತ್ರ ಮಲ್ಲಿಕಾರ್ಜುನ್, ವಿಘ್ನೇಶ್, ಮಂಜುಳಾ, ಸುರೇಶ್ ಕುಮಾರ್ ಮತ್ತಿತರರು ಉಪಸ್ಥಿತರಿದ್ದರು.

ಎಲ್ಲಾ ವರ್ಗದ ಜನರಿಗೂ ಕೈಗೆಟಕುವ ದರದಲ್ಲಿ ಉತ್ಕೃಷ್ಟ ಗುಣಮಟ್ಟದ ಉತ್ಪನ್ನಗಳನ್ನು ಒದಗಿಸುವ ಉದ್ದೇಶದೊಂದಿಗೆ ತೆರೆಯಲಾಗಿರುವ 'ನಕ್ಷತ್ರ ಸ್ಯಾರಿ ಸ್ಟೋರ್'ನಲ್ಲಿ ಒಂದು ಸಾವಿರದಿಂದ ಲಕ್ಷಾಂತರ ರೂ. ಬೆಲೆ ಬಾಳುವ ಸೀರೆಗಳಿವೆ. ಕರ್ನಾಟಕ ಸೇರಿದಂತೆ ವಿವಿಧ ರಾಜ್ಯಗಳ ನುರಿತ ಕೈಮಗ್ಗ ನೇಕಾರರು ಸಿದ್ಧಪಡಿಸಿರುವ ಹಲವು ಬಗೆಯ ದೇಸಿ ಸೀರೆಗಳು ಒಂದೆ ಸೂರಿನಡಿ ಲಭ್ಯವಿರಲಿವೆ. ಕಾಂಚಿವರಂ, ಕಂಚಿ, ಧರ್ಮವರಂ, ಮೈಸೂರು ಸಿಲ್ಕ್, ಬನರಸಿ, ಕಟನ್ ಬೈ ಕಟಾನಾ, ಮುಡಲ್, ಚಿನ್ನದ ಹಾಗೂ ಬೆಳ್ಳಿ ಜರಿ ಇರುವ ಪೈಠಾನಿ ಜರಿಕೋಟಾ, ಇಕತ್, ಸೀರೆಗಳು, ಕಾಟನ್ ಸೀರೆಗಳು, ಡಿಸೈನರ್ ಸೀರೆಗಳು ಸೇರಿದಂತೆ ಬಗೆ ಬಗೆಯ ಸೀರೆಗಳು ಅತೀ ಕಡಿಮೆ ಬೆಲೆಯಲ್ಲಿ ದೊರೆಯಲಿವೆ ಎಂದು ನಕ್ಷತ್ರ ಸ್ಯಾರಿ ಸ್ಟೋರ್ ಸಂಸ್ಥಾಪಕರಾದ ನಾಗಶ್ರೀ ತಿಳಿಸಿದ್ದಾರೆ.

ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದಲ್ಲಿ ಬಸವ ಜಯಂತಿ



ಮೈಸೂರು ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದಲ್ಲಿ ಗುರುವಾರ ಬಸವ ಜಯಂತಿ ಕಾರ್ಯಕ್ರಮ ಏರ್ಪಡಿಸಲಾಗಿದ್ದು, ಈ ವೇಳೆ ಬಸ್‌ನಿಲ್ದಾಣದ ವಿಭಾಗೀಯ ಸಂಚಲನ ಅಧಿಕಾರಿ ಹೇಮಂತ್ ಕುಮಾರ್, ಸಿಬ್ಬಂದಿ ಮೇಲ್ವಿಚಾರಕ ಜಿ.ಕುಮಾರ್, ಲೆಕ್ಕ ಪತ್ರ ಮೇಲ್ವಿಚಾರಕ ರವಿಕುಮಾರ್, ಸಹಾಯಕ ಸಂಚಾರ ನಿರೀಕ್ಷಕ ಗಂಗಾಧರಸ್ವಾಮಿ ಹಾಗೂ ಸಿಬ್ಬಂದಿ ಹೇಮಣ್ಣ ಇನ್ನಿತರರಿದ್ದರು ಉಪಸ್ಥಿತರಿದ್ದರು.

ಕೇಂದ್ರದ ಜಾತಿ ಗಣತಿಗೆ ಸ್ವಾಗತ

ಮೈಸೂರು, ಮೇ 2–ಕೇಂದ್ರ ಸರ್ಕಾರ ಜನಗಣತಿಯೊಂದಿಗೆ ಜಾತಿ ಗಣತಿ ನಡೆಸಲು ನಿರ್ಧರಿಸಿರುವುದು ಅತ್ಯಂತ ಸ್ವಾಗತಾರ್ಹ ನಿರ್ಧಾರ ಎಂದು ರೈಲ್ವೆ ಕೋ–ಆಪರೇಟಿವ್



ಬ್ಯಾಂಕ್ ಅಧ್ಯಕ್ಷರೂ ಆದ ರಾಜ್ಯ ಒಕ್ಕಲಿಗರ ಸಂಘದ ನಿರ್ದೇಶಕ ಎಂ.ಬಿ.ಮಂಜೇಗೌಡ ಅಭಿಪ್ರಾಯಪಟ್ಟಿದ್ದಾರೆ. ಪತ್ರಿಕಾ ಪ್ರಕಟಣೆ ನೀಡಿರುವ ಅವರು, ರಾಜ್ಯ ಸರ್ಕಾರದ ಜನ ಗಣತಿ ಗೊಂದಲದ ಗೂಡಾಗಿತ್ತು. ರಾಜ್ಯದ ಜನತೆಯಲ್ಲಿ ಆತಂಕವೂ ಉಂಟಾಗಿತ್ತು. ಕೆಲವು ಅನುಮಾನಗಳೂ ಸಹ ಉದ್ಭವಿಸಿದ್ದವು. ಇಂತಹ ಸಂದರ್ಭದಲ್ಲಿ ಕೇಂದ್ರ ಸರ್ಕಾರ ತಾನೇ ಜಾತಿ ಗಣತಿ ನಡೆಸುವುದಾಗಿ ಘೋಷಿಸಿರುವುದು ಸಮಯೋಚಿತ ನಿರ್ಧಾರವಾಗಿದೆ. ಕೇಂದ್ರದಿಂದ ವೈಜ್ಞಾನಿಕ ವಿಧಾನದ ಮೂಲಕ ಜಾತಿ ಗಣತಿ ನಡೆದು ನಿಷ್ಪಕ್ಷಪಾತವಾಗಿ ಮರಿ ಬರುವ ವಿಶ್ವಾಸವನ್ನು ಮಂಜೇಗೌಡ ವ್ಯಕ್ತಪಡಿಸಿದ್ದಾರೆ.

ಕೊಡಗು ಮಾಡೆಲ್ ಸ್ಕೂಲ್‌ಗೆ ಶೇ.100ರಷ್ಟು ಫಲಿತಾಂಶ


ಕಲ್ಯಾಣ್


ಪ್ರಣವ್


ಅರುಂಧತಿ


ಫರಾಜುದ್ದೀನ್


ಆಕಾಶ್‌ಗೌಡ


ಭುವನ್ ಗೌಡ


ಸಿಂಚನಾ

ಮೈಸೂರು, ಮೇ 2–ಮೈಸೂರಿನ ವಿದ್ಯಾಶಂಕರ ನಗರದಲ್ಲಿರುವ ಕೊಡಗು ಮಾಡೆಲ್ ಸ್ಕೂಲ್ ಎಸ್‌ಎಸ್‌ಎಲ್‌ಸಿಯಲ್ಲಿ ಶೇ.100ರಷ್ಟು ಫಲಿತಾಂಶ ಪಡೆದಿದೆ.

ಈ ಶಾಲೆಯಿಂದ ಎಸ್‌ಎಸ್‌ಎಲ್‌ಸಿ ಪರೀಕ್ಷೆಗೆ ಹಾಜರಾದ ಎಲ್ಲಾ ವಿದ್ಯಾರ್ಥಿಗಳೂ ತೇರ್ಗಡೆ ಹೊಂದಿದ್ದು, ಜೆ.ಕಲ್ಯಾಣ್ ಕೊಂಡಯ್ಯ ಶೇ.96.32, ಪ್ರಣವ್ ಕಣವಿ ಶೇ.96.32, ಜೆ.ಅರುಂಧತಿ ಶೇ.95.36, ಎಸ್.ಮುಹಮ್ಮದ್ ಫರಾಜುದ್ದೀನ್ ಶೇ.93.76, ಎಂ.ಆಕಾಶ್‌ಗೌಡ ಶೇ.91.36, ಆರ್.ಭುವನ್ ಗೌಡ ಶೇ.89.12, ಎಂ.ಸಿಂಚನಾ ಶೇ.85.12, ಅಂಕ ಪಡೆದು ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾರೆ. ಈ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಕೊಡಗು ಮಾಡೆಲ್ ಸ್ಕೂಲ್‌ನ ಆಡಳಿತ ಮಂಡಲಿ ಅಭಿನಂದಿಸಿದೆ.

ಹಾಸನಕ್ಕೆ ಆರನೇ ಸ್ಥಾನ; ಉತ್ಸವ್ ಪಟೇಲ್ ರಾಜ್ಯಕ್ಕೆ ಪ್ರಥಮ


ಉತ್ಸವ್ ಪಟೇಲ್

ಹಾಸನ, ಮೇ.2– ಎಸ್‌ಎಸ್‌ಎಲ್‌ಸಿ ಪರೀಕ್ಷೆಯ ಫಲಿತಾಂಶದಲ್ಲಿ ರಾಜ್ಯಕ್ಕೆ ಹಾಸನ ಜಿಲ್ಲೆ ಆರನೇ ಸ್ಥಾನ ಪಡೆದರೇ, ವಿಜಯ ಶಾಲೆಯ ವಿದ್ಯಾರ್ಥಿ ಉತ್ಸವ್ ಪಟೇಲ್ 625ಕ್ಕೆ 625 ಅಂಕ ಪಡೆದು ರಾಜ್ಯಕ್ಕೆ ಪ್ರಥಮ ಸ್ಥಾನ ಪಡೆದಿದ್ದಾರೆ.

ಡಿ.ಟಿ. ಪ್ರಕಾಶ್ ಮತ್ತು ಆಶಾರಾಣಿ ದಂಪತಿ ಪುತ್ರ ಉತ್ಸವ್ ಪಟೇಲ್ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಸಾಧನೆ ಮಾಡಿದ್ದು, ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಡಿ.ಟಿ. ಪ್ರಸನ್ನ ಅವರ ಪುತ್ರ ಡಿ.ಪಿ. ಚೇತನ್ ಸಹಾ ವಿಜಯ ಶಾಲೆಯಲ್ಲಿ ಶಿಕ್ಷಣ ಪಡೆಯುತ್ತಿದ್ದು, ಇತ 625ಕ್ಕೆ 624 ಅಂಕ ಪಡೆದು ರಾಜ್ಯಕ್ಕೆ ದ್ವಿತೀಯ ಸ್ಥಾನಗಳಿಸಿದ್ದಾರೆ. ಟೈಮ್ಸ್ ಅಂತರಾಷ್ಟ್ರೀಯ ಶಾಲೆಯ ಇಬ್ಬರೂ ವಿದ್ಯಾರ್ಥಿಗಳು 623 ಅಂಕ ಪಡೆದು ರಾಜ್ಯಕ್ಕೆ ತೃತೀಯ ಸ್ಥಾನ ಪಡೆದು ಕೀರ್ತಿ ತಂದಿದ್ದಾರೆ. ಎಸ್‌ಎಸ್‌ಎಲ್‌ಸಿಯಲ್ಲಿ ಜಿಲ್ಲೆ ಶೇ.66.14 ರಷ್ಟು ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ.


ಚೇತನ್

ಎಸ್‌ಎಸ್‌ಎಲ್‌ಸಿಯಲ್ಲಿ ಪ್ರಮತ್ ಸಾಧನೆ



ಮೈಸೂರು, ಮೇ 2–2024–25ನೇ ಸಾಲಿನ ಎಸ್‌ಎಸ್ ಎಲ್‌ಸಿ ಪರೀಕ್ಷೆಯಲ್ಲಿ ಮೈಸೂರಿನ ಸದ್ವಿದ್ಯಾ ಸೆಮಿ ರೆಸಿಡೆನ್ಸಿಯಲ್ ಶಾಲೆ ವಿದ್ಯಾರ್ಥಿ ಹೆಚ್.ಪ್ರಮತ್ ಭಾರದ್ವಾಜ್ 606 (ಶೇ.97) ಅಂಕ ಗಳಿಸಿ ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ. ಈತ ಮೈಸೂರು ಜಿಲ್ಲಾ ಫಿಂಗರ್ ಪ್ರಿಂಟ್ಸ್ ಯೂನಿಟ್‌ನಲ್ಲಿ ಸಹಾಯಕ ಸಬ್ ಇನ್ಸ್‌ಪೆಕ್ಟರ್ ಹೆಚ್.ಆರ್.ಹರೀಶ್ ಮತ್ತು ಜಿ.ವಿಜಯಲಕ್ಷ್ಮಿ ದಂಪತಿಗಳ ಪುತ್ರ.

ಜಿ.ಪ್ರಗತಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆ



ಮೈಸೂರು, ಮೇ.2 – ಮೈಸೂರು ವಿಜಯ ವಿಠಲ ಪ್ರೌಢಶಾಲೆ ವಿದ್ಯಾರ್ಥಿನಿ ಜಿ.ಪ್ರಗತಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 625ಕ್ಕೆ 610 ಅಂಕಗಳಿಸಿ ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿ ದ್ದಾಳೆ. ಕನ್ನಡ 125, ಇಂಗ್ಲಿಷ್ 100, ಹಿಂದಿ 91, ಗಣಿತ 100, ವಿಜ್ಞಾನ 100, ಸಮಾಜ ವಿಜ್ಞಾನ 99 ಅಂಕಗಳಿಸಿದ್ದು, ಈಕೆ ಲಾಲ್ ಬಹದ್ದೂರ್ ಶಾಸ್ತ್ರಿ ನಗರದ ನಿವಾಸಿ ಎ.ಗಂಗಾಧರ್, ಸೌಭಾಗ್ಯ ದಂಪತಿ ಪುತ್ರಿ.

ಎಂ.ಎಸ್. ನಿಹಾರಿಕ ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆ



ಮೈಸೂರು: ಮೈಸೂರಿನ ಲಕ್ಷ್ಮಿಪುರಂನಲ್ಲಿರುವ ಕ್ರೈಸ್ಟ್ ದಿ ಕಿಂಗ್ ಕಾನ್ವೆಂಟ್ ಪ್ರೌಢಶಾಲೆ ವಿದ್ಯಾರ್ಥಿನಿ ಎಂ.ಎಸ್. ನಿಹಾರಿಕ ಅವರು 625ಕ್ಕೆ 595 (ಶೇ.95) ಅಂಕ ಪಡೆದು ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ. ಈಕೆ ವಕೀಲರು ಹಾಗು ನೈರುತ್ಯ ರೈಲ್ವೆ ಸದಸ್ಯರಾದ ಶಿವರಾಜ್ ಮತ್ತು ಚಂಪಾ ಶಿವರಾಜ್ ಪುತ್ರಿ.

ಅಮೂಲ್ಯ ವಿ.ಗೌಡ ಶೇ.93 ಫಲಿತಾಂಶ



ಮೈಸೂರು, ಮೇ2– ಕೆ.ಆರ್.ನಗರ ತಾಲೂಕಿನ ಚುಂಚನಕಟ್ಟೆ ಬಿಜಿಎಸ್ ಶಾಲೆಯ ವಿದ್ಯಾರ್ಥಿನಿ ಅಮೂಲ್ಯ ವಿ.ಗೌಡ 582 ಅಂಕ ಪಡೆದು ಉತ್ತಮ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾಳೆ.

ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶೇ. 93 ಅಂಕ ಪಡೆದಿರುವ ಅಮೂಲ್ಯ ಕನ್ನಡದಲ್ಲಿ 119, ಇಂಗ್ಲಿಷ್‌ನಲ್ಲಿ 89, ಹಿಂದಿ 90, ಗಣಿತದಲ್ಲಿ 96, ವಿಜ್ಞಾನದಲ್ಲಿ 94 ಮತ್ತು ಸಮಾಜ ವಿಜ್ಞಾನದಲ್ಲಿ 94 ಅಂಕಗಳನ್ನು ಗಳಿಸಿದ್ದಾಳೆ. ಚುಂಚನಕಟ್ಟೆ ಬಿಜಿಎಸ್ ಶಾಲೆಗೆ ಮೂರನೇ ಸ್ಥಾನ ಪಡೆದಿದ್ದಾಳೆ. ಈಕೆ ಕೆ.ಆರ್.ನಗರ ತಾಲೂಕು ಪತ್ರಕರ್ತರ ಸಂಘದ ಅಧ್ಯಕ್ಷ ವಿನಯ್ ದೊಡ್ಡೇಕೊಪ್ಪಲು ಪುತ್ರಿ.

ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆ



ಮೈಸೂರು, ಮೇ 2–ಮೈಸೂರಿನ ವಿಜಯನಗರದಲ್ಲಿರುವ ಭಾರತೀಯ ವಿದ್ಯಾಭವನದ ವಿದ್ಯಾರ್ಥಿ ಗೌರವ್ ಪಿ.ಲಾಡ್ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 625ಕ್ಕೆ 582 ಅಂಕ (ಶೇ.93.12) ಪಡೆದು ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾರೆ. ಈತ ಎಂ.ಎನ್.ಪ್ರಕಾಶ್ ಮತ್ತು ಹೆಚ್.ಎಸ್.ಸುನೀತಾ ದಂಪತಿ ಪುತ್ರ.

ಚೇತನ ಉನ್ನತ ಶ್ರೇಣಿಯಲ್ಲಿ ತೇರ್ಗಡೆ



ಮೈಸೂರು, ಮೇ 2–ಮೈಸೂರಿನ ನಾರಾಯಣಶಾಸ್ತ್ರಿ ರಸ್ತೆಯಲ್ಲಿರುವ ಸದ್ವಿದ್ಯಾ ಪ್ರೌಢಶಾಲೆಯ ವಿದ್ಯಾರ್ಥಿನಿ ಪಿ.ಚೇತನ 586 ಅಂಕಗಳನ್ನು ಪಡೆದು ಉನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ.

ಸಂಸ್ಕೃತದಲ್ಲಿ 100, ಇಂಗ್ಲಿಷ್–96, ಕನ್ನಡ–98, ಗಣಿತ–81, ವಿಜ್ಞಾನ–90 ಹಾಗೂ ಸಮಾಜಶಾಸ್ತ್ರದಲ್ಲಿ 96 ಅಂಕ ಪಡೆದಿರುವ ಈಕೆ ಬಿಜೆಪಿ ಮುಖಂಡ ಆರ್.ಪರಮೇಶ್‌ಗೌಡ–ಶ್ರೀಮತಿ ಹೆಚ್.ಪವಿತ್ರ ದಂಪತಿ ಪುತ್ರಿ.

ಹರ್ಷಿತ.ಜಿ ಗೆ ಶೇ.80ರಷ್ಟು ಅಂಕ



ಮೈಸೂರು: 2024–25ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಮೈಸೂರು–ಬನ್ನೂರು ಮುಖ್ಯ ರಸ್ತೆಯಲ್ಲಿರುವ ವಿದ್ಯಾಜ್ಯೋತಿ ಪ್ರೌಢಶಾಲೆ ವಿದ್ಯಾರ್ಥಿನಿ ಹರ್ಷಿತ.ಜಿ ಅವರು 494 ಅಂಕ (ಶೇ.80)ಪಡೆದು ಉತ್ತೀರ್ಣರಾಗಿದ್ದಾರೆ. ಈಕೆ ಮೈಸೂರಿನ ವಾಜಮಂಗಲ ನಿವಾಸಿ ಗಿರೀಶ್.ಸಿ ಮತ್ತು ರೂಪ ದಂಪತಿಯ ಪುತ್ರಿ.

ಭೂಮಿಕಾಗೆ 554 ಅಂಕ



ಮೈಸೂರು, ಮೇ 2– ಟಿ.ನರಸೀಪುರ ತಾಲೂಕು ಬನ್ನೂರು ಹೋಬಳಿಯ ಜಿ.ವಿ.ಗೌಡ ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿದ್ದ ಭೂಮಿಕಾ ಎಸ್‌ಎಸ್ ಎಲ್‌ಸಿ ಪರೀಕ್ಷೆಯಲ್ಲಿ 554 ಅಂಕ ಪಡೆದು ಉನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ. ಈಕೆ ಶ್ರೀನಿವಾಸ್, ನಾಗವೇಣಿ ದಂಪತಿ ಪುತ್ರಿ

ಖುಷಿ ರಾಮ್‌ಗೆ ಶೇ.89 ಅಂಕ



ಮೈಸೂರು, ಮೇ2– ಮೈಸೂರಿನ ವಿಜಯ ವಿಠಲ ಶಾಲೆಯ ವಿದ್ಯಾರ್ಥಿನಿ ಖುಷಿ ರಾಮ್ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 541 ಅಂಕ ಪಡೆದು ತೇರ್ಗಡೆಯಾಗಿದ್ದಾಳೆ.

ಶೇ.89ರಷ್ಟು ಅಂಕ ಪಡೆದಿರುವ ಖುಷಿ ಕನ್ನಡದಲ್ಲಿ 91, ಇಂಗ್ಲಿಷ್‌ನಲ್ಲಿ 90, ಹಿಂದಿ 99, ಗಣಿತದಲ್ಲಿ 84, ವಿಜ್ಞಾನದಲ್ಲಿ 86, ಸಮಾಜ ವಿಜ್ಞಾನದಲ್ಲಿ 91 ಅಂಕಗಳನ್ನು ಪಡೆದಿದ್ದಾಳೆ. ಈಕೆ ಟಿವಿ–9 ವರದಿಗಾರ ರಾಮ್ ಹಾಗೂ ಗೀತಾಕುಮಾರಿ ದಂಪತಿ ಪುತ್ರಿ.

ಬಿವಿಬಿ ಶಾಲೆಯ ತಾನ್ಯಾ, ಮರಿಮಲ್ಲಪ್ಪ ಶಾಲೆಯ ಧನುಷ್ ರಾಜ್ಯಕ್ಕೆ ಟಾಪರ್





ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 625ಕ್ಕೆ 625 ಅಂಕ ಪಡೆದು ರಾಜ್ಯಕ್ಕೆ ಟಾಪರ್ ಆಗಿ ಹೊರ ಹೊಮ್ಮಿರುವ ಮೈಸೂರಿನ ವಿಜಯನಗರದ ಭಾರತೀಯ ವಿದ್ಯಾಭವನ(ಬಿವಿಬಿ) ಶಾಲೆಯ ಆರ್.ಎನ್.ತಾನ್ಯಾ ಅವರನ್ನು ಬಿವಿಬಿ ಕಾರ್ಯದರ್ಶಿ ಪಿ.ಎಸ್.ಗಣಪತಿ ಅವರು ಅಭಿನಂದಿಸಿದರು. ಚಿತ್ರದಲ್ಲಿ ತಾನ್ಯಾಳ ತಂದೆ ನಾರಾಯಣಸ್ವಾಮಿ, ತಾಯಿ ಹೆಚ್.ಎಂ. ಮಹೇಶ್ವರಿ, ಶಾಲೆಯ ಪ್ರಾಂಶುಪಾಲರಾದ ಎಸ್.ಲೇಖಾ, ಕ್ಲಾಸ್ ಟೀಚರ್ ಅಶ್ವಿನಿ ಅವರನ್ನು ಕಾಣಬಹುದು. ಬಲ ಚಿತ್ರದಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 625ಕ್ಕೆ 625 ಅಂಕ ಪಡೆದ ಮೈಸೂರಿನ ಮರಿಮಲ್ಲಪ್ಪ ಶಾಲೆಯ ವಿದ್ಯಾರ್ಥಿ ಧನುಷ್(ಹೂಗುಚ್ಛ ಹಿಡಿದಿರುವವರು) ಮತ್ತು 624 ಅಂಕ ಪಡೆದ ನಿತೀಶ್ ಅವರನ್ನು ಶಾಲೆಯ ಶಿಕ್ಷಕ ವರ್ಗ ಅಭಿನಂದಿಸಿತು.

ಮೈಸೂರು, ಮೇ.2(ಎಂಟಿವೈ)– ಭಾರತೀಯ ವಿದ್ಯಾಭವನ ಶಾಲೆಯ ಆರ್.ಎನ್.ತಾನ್ಯಾ ಹಾಗೂ ಮರಿಮಲ್ಲಪ್ಪ ಪ್ರೌಢಶಾಲೆಯ ಎಸ್.ಧನುಷ್ 625ಕ್ಕೆ 625 ಅಂಕ ಪಡೆದು, ರಾಜ್ಯಕ್ಕೆ ಟಾಪರ್ಸ್ ಆಗಿ ಹೊರ ಹೊಮ್ಮಿದ್ದಾರೆ.

ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಹಲವು ವರ್ಷಗಳ ಬಳಿಕ ಮೈಸೂರು ಜಿಲ್ಲೆಯಲ್ಲಿ ಇಬ್ಬರು ರಾಜ್ಯಕ್ಕೆ ಪ್ರಥಮ ಸ್ಥಾನ ಗಳಿಸಿದ್ದಾರೆ. ರಾಜ್ಯದಲ್ಲಿ ಒಟ್ಟು 22 ವಿದ್ಯಾರ್ಥಿಗಳು 625ಕ್ಕೆ 625 ಅಂಕ ಪಡೆದಿದ್ದು, ಅವರಲ್ಲಿ ಮೈಸೂರಿನ ಈ ಇಬ್ಬರು ಸೇರಿರುವುದು ವಿಶೇಷ.

ತಾನ್ಯಾಗೆ ಹೃದ್ರೋಗ ತಜ್ಞೆಯಾಗುವ ಬಯಕೆ: ರಾಜ್ಯಕ್ಕೆ ಟಾಪರ್ ಆಗಿರುವ ಭಾರತೀಯ ವಿದ್ಯಾಭವನ ಶಾಲೆಯ ಆರ್.ಎನ್.ತಾನ್ಯಾ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿ, ರಾಜ್ಯಕ್ಕೇ ಟಾಪರ್ ಆಗಿರುವುದು ಸಂತೋಷ ತಂದಿದೆ. ಇಷ್ಟು ಅಂಕ ಬರುತ್ತದೆ ಎಂಬ ನಿರೀಕ್ಷೆ ಇತ್ತು. ಪರಿಶ್ರಮಕ್ಕೆ ತಕ್ಕಂತೆ ಫಲಿತಾಂಶ ಬಂದಿರುವುದಕ್ಕೂ ಸಂತೋಷವಾಗಿದೆ. ನನ್ನ ಈ ಸಾಧನೆಗೆ ಶಿಕ್ಷಕರು, ಪಾಲಕರ ಸಹಕಾರವೇ ಕಾರಣ. ಅಂದಿನ ಪಾಠವನ್ನು ಅಂದೇ ಓದಿ ಮನನ ಮಾಡಿಕೊಳ್ಳುತ್ತಿದ್ದೆ. ದಿನಕ್ಕೆ 3–4 ಗಂಟೆ ಅಭ್ಯಾಸ ಮಾಡುತ್ತಿದೆ. ಪೂರ್ವಸಿದ್ಧತಾ ಪರೀಕ್ಷೆಗಳನ್ನು ಗಂಭೀರವಾಗಿ ಪರಿಗಣಿಸುವ ಮೂಲಕ ಉತ್ತಮ ಅಂಕ ಪಡೆದುಕೊಂಡಿದೆ. ಇದು ಪರೀಕ್ಷೆಯನ್ನು ಹೇಗೆ ಎದುರಿಸಬೇಕು ಎಂಬುದು ಅರಿತುಕೊಳ್ಳಲು ನೆರವಾಯಿತು. ಹಾಗಾಗಿಯೇ ಅಂತಿಮ ಪರೀಕ್ಷೆಯಲ್ಲಿ ಉತ್ತಮ ಅಂಕ ಪಡೆದುಕೊಳ್ಳಲು ಅನುಕೂಲವಾಯಿತು. ನನಗೆ ಚಿಕ್ಕ ವಯಸ್ಸಿನಿಂದಲೂ ಡಾಕ್ಟರ್ ಆಗಬೇಕೆಂಬ ಆಸೆ ಇದೆ. ಹೀಗಾಗಿ, ಮುಂದೆ ಎಂಬಿಬಿಎಸ್ ಓದಿ ಹೃದಯ ತಜ್ಞೆ ಆಗುವ ಗುರಿ ಹೊಂದಿದ್ದೇನೆ ಎಂದು ತಿಳಿಸಿದರು. ಇವರು ಬ್ಯಾಂಕ್ ಸಿಬ್ಬಂದಿ ಆರ್.ಹೆಚ್.ನಾರಾಯಣಸ್ವಾಮಿ, ಗೃಹಿಣಿ ಹೆಚ್.ಎಂ.ಮಹೇಶ್ವರಿ ದಂಪತಿ ಪುತ್ರಿ.

ಇದೇ ವೇಳೆ ನಾರಾಯಣಸ್ವಾಮಿ ಮಾತನಾಡಿ, ಆರ್ಥಿಕ ಸಂಕಷ್ಟದ ಹೊರತಾಗಿಯೂ ನಮ್ಮ ಮಗಳನ್ನು 1 ರಿಂದ 10ನೇ ತರಗತಿವರೆಗೆ ಭಾರತೀಯ ವಿದ್ಯಾಭವನ ಶಾಲೆಯಲ್ಲೇ ಓದಿಸಿದ್ದೇವೆ. ಕೆ.ಬಿ.ಗಣಪತಿಯವರು (ಬಿವಿಬಿ, ಮೈಸೂರು ಕೇಂದ್ರದ ಅಧ್ಯಕ್ಷರು ಹಾಗೂ 'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರು) ಹಾಗೂ ಸಂಸ್ಥೆಯ ಇತರರು ಶೈಕ್ಷಣಿಕವಾಗಿ ನನ್ನ ಮಗಳಿಗೆ ಸಹಕರಿಸಿದ್ದಾರೆ. ನಮ್ಮ ಮಗಳ ಈ ಸಾಧನೆಗಾಗಿ ನಾವು ಸಂಸ್ಥೆಗೆ ಏನಾದರೂ ಕೊಡುಗೆ ನೀಡುವ ಉದ್ದೇಶವಿದೆ ಎಂದರು.

ನಿತ್ಯ 3 ಗಂಟೆ ಅಭ್ಯಾಸ: ಮರಿಮಲ್ಲಪ್ಪ ಶಾಲೆಯ ಧನುಷ್ ಮಾತನಾಡಿ, ಪ್ರತಿದಿನ 3 ಗಂಟೆ ಅಭ್ಯಾಸ ಮಾಡುತ್ತಿದ್ದೆ. ಪರೀಕ್ಷಾ ಒತ್ತಡಕ್ಕೆ ಒಳಗಾಗದಂತೆ ನೋಡಿಕೊಂಡೆ. ಮನೆಯಲ್ಲಿ ಪೋಷಕರು ಬೆಂಬಲವಾಗಿ ನಿಂತರು. 8ನೇ ತರಗತಿಯಿಂದ ಚೆನ್ನಾಗಿ ಓದುತ್ತಿದ್ದೆ. ಎಸ್‌ಎಸ್‌ಎಲ್‌ಸಿಯಲ್ಲಿ ಶಾಲೆಯಲ್ಲಿ ಕಲಿತ ಪಾಠದೊಂದಿಗೆ ಟ್ಯೂಷನ್(ಮನೆ ಪಾಠಕ್ಕೂ) ಹೋಗುತ್ತಿದ್ದೆ. ಹೀಗಾಗಿ, ಪೂರ್ಣ ಅಂಕ ಪಡೆದುಕೊಳ್ಳುವ ನಿರೀಕ್ಷೆ ಇತ್ತು. ಅದೀಗ ನಿಜವಾಗಿದೆ. ಬಹಳ ಸಂತೋಷವಾಗಿದೆ. ಮುಂದೆ ವೈದ್ಯನಾಗಬೇಕು ಎಂಬ ಸಂಕಲ್ಪ ಮಾಡಿರುವೆ ಎಂದರು. ಅಗ್ರಹಾರದ ನಿವಾಸಿ ಇಂಜಿನಿಯರ್ ಶಿವಕುಮಾರ್ ಮತ್ತು ಗೃಹಣಿ ಸವಿತಾ ದಂಪತಿ ಪುತ್ರ ಧನುಷ್.


624 ಅಂಕ ಪಡೆದಿರುವ ಮರಿಮಲ್ಲಪ್ಪ ಶಾಲೆಯ ನಿತಿಶ್ ರಾಹುಲ್ ವೀರ ಮಾತನಾಡಿ, ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಪಡೆಯುವ ಗುರಿಯೊಂದಿಗೆ ಪ್ರತಿದಿನ 3–4 ಗಂಟೆ ಓದುತ್ತಿದ್ದೆ. ಶಾಲೆಯಲ್ಲಿ ಗುರುಗಳು ಕಲಿಸಿದ ಪಾಠದೊಂದಿಗೆ ಟ್ಯೂಷನ್‌ನಲ್ಲಿ ಕಲಿತದ್ದನ್ನು ಮನನ ಮಾಡಿಕೊಳ್ಳುತ್ತಿದ್ದೆ. ಹಾಗಾಗಿ 624 ಅಂಕ ಪಡೆದುಕೊಳ್ಳಲು ಸಾಧ್ಯವಾಗಿದೆ ಎಂದರು. ಜೆಎಸ್‌ಎಸ್ ಬಿ.ಇಡಿ ಕಾಲೇಜಿನಲ್ಲಿ ಸಹಾಯಕ ಪ್ರಾಧ್ಯಾಪಕ ಮಲ್ಲಣ್ಣ, ರೂಪ ದಂಪತಿ ಪುತ್ರ.

ಪ್ರತಿಭಾನ್ವಿತ ವಿದ್ಯಾರ್ಥಿನಿಗೆ ಅಭಿನಂದನೆ



ಮೈಸೂರಿನ ಬನ್ನಿಮಂಟಪದಲ್ಲಿರುವ ಸೆಂಟ್ ಜೋಸೆಫ್ ಶಾಲೆಯ ವಿದ್ಯಾರ್ಥಿನಿ ಹಾಗೂ ದಿ ಮೈಸೂರು ಕೋ–ಆಪರೇಟಿವ್ ಬ್ಯಾಂಕ್ ಸಿಬ್ಬಂದಿ ಶ್ರೀಮತಿ ಪವಿತ್ರಾ ಕುಮಾರ್ ಪುತ್ರಿ ಕೆ.ಎಸ್.ನಿಧಿಶ್ರೀ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 625ಕ್ಕೆ 623 ಅಂಕ ಪಡೆದು ರಾಜ್ಯದಲ್ಲಿ ತೃತೀಯ ಸ್ಥಾನ ಪಡೆದಿದ್ದು, ಈಕೆಯನ್ನು ಬ್ಯಾಂಕ್ ಅಧ್ಯಕ್ಷ ಜಿ.ಯೋಗೇಶ್, ನಿರ್ದೇಶಕರಾದ ಎನ್.ಯೋಗಾನಂದ, ಪಡುವಾರಹಳ್ಳಿಯ ಎಂ.ರಾಮಕೃಷ್ಣ ಅಭಿನಂದಿಸಿದರು. ದಿವಾಕರ್, ಕುಮಾರ್ ಉಪಸ್ಥಿತರಿದ್ದರು.

ವಿದ್ಯಾರ್ಥಿಗಳ ಶುಭಾಶಯ ವಿನಿಮಯ



ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಪಡೆದ ಮೈಸೂರಿನ ಮರಿಮಲ್ಲಪ್ಪ ಶಾಲೆಯ ವಿದ್ಯಾರ್ಥಿಗಳು ಪರಸ್ಪರ ಶುಭಾಶಯ ವಿನಿಮಯ ಮಾಡಿಕೊಳ್ಳುತ್ತಿರುವುದು.

ವಿದ್ಯಾರ್ಥಿಗಳಿಗೆ ಅಭಿನಂದನೆ



ಮೂಗೂರು ಕರ್ನಾಟಕ ಪಬ್ಲಿಕ್ ಶಾಲೆ ಪ್ರೌಢಶಾಲಾ ವಿಭಾಗದ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಉನ್ನತ ಶ್ರೇಣಿಯಲ್ಲಿ ಉತ್ತೀರ್ಣರಾದ ಸುಷ್ಮಿತಾ, ನಂದನ್ ಅವರನ್ನು ಕೆಪಿಎಸ್ ಶಾಲೆ ಉಪಪ್ರಾಂಶುಪಾಲ ಸಿ.ಪುಟ್ಟಸ್ವಾಮಿ ಹಾಗೂ ಅಧ್ಯಾಪಕ ವೃಂದ ಅಭಿನಂದಿಸಿದರು. ಈ ವೇಳೆ ಅಧ್ಯಾಪಕರಾದ ರಮೇಶ್ ಕುಮಾರ್, ಮಹಾದೇವ, ಯೋಗೇಶ್, ಚಂದ್ರಪ್ರಭ, ಪ್ರಕಾಶ್ ಉಪಸ್ಥಿತರಿದ್ದರು.

ವಿಜಯ ವಿಠಲ ಶಾಲೆಗೆ ಉತ್ತಮ ಫಲಿತಾಂಶ



ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಪಡೆದ ಮೈಸೂರಿನ ವಿಜಯ ವಿಠಲ ಶಾಲೆಯ ವಿದ್ಯಾರ್ಥಿಗಳನ್ನು ಸಂಸ್ಥೆಯ ಕಾರ್ಯದರ್ಶಿ ಆರ್.ವಾಸುದೇವ್ ಭಟ್ ಅಭಿನಂದಿಸಿದರು.

ಮೈಸೂರು, ಮೇ.2(ಎಂಟಿವೈ)– ಎಸ್‌ಎಸ್‌ಎಲ್‌ಸಿ ಪರೀಕ್ಷೆಯ ಫಲಿತಾಂಶದಲ್ಲಿ ವಿಜಯ ವಿಠಲ ವಿದ್ಯಾ ಶಾಲೆಯ ವಿದ್ಯಾರ್ಥಿಗಳು ಉತ್ತಮ ಸಾಧನೆ ಮಾಡಿದ್ದಾರೆ. ಶಾಲೆಯ ವಿದ್ಯಾರ್ಥಿ ಹೇಮಂತ್ ಡಿ.ವಿ. 625ಕ್ಕೆ 623 ಅಂಕಗಳನ್ನು ಪಡೆದು ರಾಜ್ಯಮಟ್ಟದಲ್ಲಿ ಮೂರನೇ ಸ್ಥಾನ ಪಡೆದಿದ್ದಾನೆ. ನಂತರ ಕ್ರಮವಾಗಿ ಅನನ್ಯಾ ಆರ್.ನಾಯಕ್ (622), ಕೀರ್ತನಾ ಆರ್ ನಾಯಕ (621), ನಿರಾಮಯಾ ವಿ. ರಾವ್ (620), ದೀಕ್ಷಾ ಎನ್ (618), ಕುಸಾ ಆರ್ (617), ಪೂರ್ವಿಕಾ ಎಸ್ ಮತ್ತು ಶ್ರೇಯಾ ಎಸ್ (616) ಅಂಕಗಳನ್ನು ಗಳಿಸಿದ್ದಾರೆ. ಶಾಲೆಯ ಒಟ್ಟು 155 ವಿದ್ಯಾರ್ಥಿಗಳಲ್ಲಿ, 28 ಮಂದಿ 600ಕ್ಕಿಂತ ಹೆಚ್ಚು ಅಂಕಗಳನ್ನು ಪಡೆದಿದ್ದು, 85ಕ್ಕೂ ಹೆಚ್ಚು ವಿದ್ಯಾರ್ಥಿಗಳು ಶ್ರೇಯಾಂಕಗಳೊದಿಗೆ ಉತ್ತೀರ್ಣರಾಗಿದ್ದಾರೆ.

ಜೆಎಸ್‌ಎಸ್ ಆಂಗ್ಲ ಮಾಧ್ಯಮ ಶಾಲೆಗೆ ಶೇ.92.30ರಷ್ಟು ಫಲಿತಾಂಶ


ಜಿಯಾ ಕುಮಾರಿ


ಮೇಘನಾ


ಹಂಸಶ್ರೀ

ಮೈಸೂರು, ಮೇ.2– 2024–25ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಮೈಸೂರಿನ ಮೇಟಗಳ್ಳಿಯಲ್ಲಿರುವ ಜೆಎಸ್‌ಎಸ್ ಆಂಗ್ಲ ಮಾಧ್ಯಮ ಶಾಲೆಗೆ ಶೇ.92.30ರಷ್ಟು ಫಲಿತಾಂಶ ದೊರಡತಿದ್ದು, ಪರೀಕ್ಷೆಗೆ ಹಾಜರಾದ 65 ವಿದ್ಯಾರ್ಥಿಗಳ ಪೈಕಿ 60 ಮಂದಿ ತೇರ್ಗಡೆಯಾಗಿದ್ದಾರೆ. ಜಿಯಾ ಕುಮಾರಿ ಎನ್–611(ಶೇ.97.76), ಮೇಘನಾ ಜಿ ಎಂ–610 (ಶೇ.97.60), ಹಂಸಶ್ರೀ ಎಂ ಪಿ–604 (ಶೇ.96.64) ಅಂಕ ಪಡೆದಿದ್ದಾರೆ. ಪ್ರತಿಭಾವಂತ ವಿದ್ಯಾರ್ಥಿಗಳನ್ನು ಶಾಲೆಯ ಆಡಳಿತ ಮಂಡಲಿ ಅಭಿನಂಧಿಸಿದೆ.

ಏಳರಿಂದ 15ನೇ ಸ್ಥಾನಕ್ಕೆ ಕುಸಿದ ಮೈಸೂರು ಜಿಲ್ಲೆ ಫಲಿತಾಂಶ

ಮೈಸೂರು, ಮೇ 2(ಎಂಟಿವೈ)– ಮೈಸೂರು ಜಿಲ್ಲೆಯಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಬರೆದ 35,557 ವಿದ್ಯಾರ್ಥಿಗಳಲ್ಲಿ 24,117 ಮಂದಿ ತೇರ್ಗಡೆಯಾಗಿದ್ದು, ಫಲಿತಾಂಶ ಶೇ.67.83ರಷ್ಟು ದಾಖಲಾಗಿ, ರಾಜ್ಯದಲ್ಲಿ 15ನೇ ಸ್ಥಾನಕ್ಕೆ ಕುಸಿದಿದೆ.

ಕಳೆದ ಸಾಲಿನಲ್ಲಿ ಶೇ.87.19ರಷ್ಟು ಫಲಿತಾಂಶದೊಂದಿಗೆ ದಾಖಲಾಗಿ, ರಾಜ್ಯದಲ್ಲಿಯೇ 7ನೇ ಸ್ಥಾನದಲ್ಲಿತ್ತು. ಆದರೆ, ಈ ಬಾರಿ 15ನೇ ಸ್ಥಾನಕ್ಕೆ ಕುಸಿತ ಕಂಡಿದೆ.

ಕಳೆದ ಮಾ.21ರಿಂದ ಏ.4ರವರೆಗೆ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಕಟ್ಟುನಿಟ್ಟಿನ ಕ್ರಮದೊಂದಿಗೆ ಯಶಸ್ವಿಯಾಗಿ ನಡೆದಿತ್ತು. ಜಿಲ್ಲೆಯಲ್ಲಿ 17,557 ಬಾಲಕರು, 18,000 ಬಾಲಕಿಯರು ಸೇರಿದಂತೆ ಒಟ್ಟು 35,557 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದರು. ಅವರಲ್ಲಿ 10,174 ಬಾಲಕರು, 13,943 ಬಾಲಕಿಯರು ಒಳಗೊಂಡಂತೆ ಶೇ.67.83 ಸರಾಸರಿಯಲ್ಲಿ 24,117 ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದಾರೆ. ಮೈಸೂರು ಜಿಲ್ಲೆ 15ನೇ ಸ್ಥಾನಕ್ಕೆ ಕುಸಿದಿದ್ದರೂ, ಇಬ್ಬರು ವಿದ್ಯಾರ್ಥಿಗಳು 625ಕ್ಕೆ 625 ಅಂಕ ಪಡೆದು ರಾಜ್ಯದ ಟಾಪರ್‌ಗಳಾಗಿದ್ದಾರೆ. ಅಲ್ಲದೆ, ವಿವಿಧ ಶಾಲೆಗಳ 43 ವಿದ್ಯಾರ್ಥಿಗಳು 625ಕ್ಕೆ 620 ಮೇಲ್ಪಟ್ಟು ಅಂಕಗಳಿಸುವ ಮೂಲಕ ಸಾಧನೆ ಮಾಡಿದ್ದಾರೆ.

ಜಿಲ್ಲೆಯ ಫಲಿತಾಂಶದಲ್ಲಿ ಅನುದಾನಿತ ಶಾಲೆಗಳ 7719 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದು ಅವರಲ್ಲಿ 4830 ಮಂದಿ (ಶೇ62.57), ಸರ್ಕಾರಿಗಳ ಶಾಲೆಗಳ 14,965 ವಿದ್ಯಾರ್ಥಿಗಳಲ್ಲಿ 9389 ಮಂದಿ (ಶೇ.62.74), ಖಾಸಗಿ ಶಾಲೆಗಳ 12,873 ವಿದ್ಯಾರ್ಥಿಗಳಲ್ಲಿ 9898 ಮಂದಿ (ಶೇ.76.89) ಪಾಸಾಗಿದ್ದಾರೆ.

26 ಶಾಲೆಗಳಿಗೆ ಶೇ.100ರಷ್ಟು ಫಲಿತಾಂಶ: ಮೈಸೂರು ಜಿಲ್ಲೆಯ 26 ಶಾಲೆಗಳಲ್ಲಿ ಶೇ.100ರಷ್ಟು ಫಲಿತಾಂಶ ದಾಖಲಾಗಿದೆ. ರಾಮಕೃಷ್ಣ ವಿದ್ಯಾಶಾಲಾ(97 ವಿದ್ಯಾರ್ಥಿಗಳು), ಸರ್ಕಾರಿ ಡಫ್ ಅಂಡ್ ಡಮ್ ಶಾಲೆ(5), ಕಿತ್ತೂರು ರಾಣಿ ಚೆನ್ನಮ್ಮ ಎಸ್‌ಟಿ ಬಾಲಕಿಯರ ಸರ್ಕಾರಿ ಶಾಲೆ(43), ಆದರ್ಶ ವಿದ್ಯಾಲಯ(78), ಶ್ರೀಮತಿ ಇಂದಿರಾ ಗಾಂಧಿ ವಸತಿ ಶಾಲೆ(36), ಡಾ.ಅಂಬೇಡ್ಕರ್ ವಸತಿ ಶಾಲೆ(42), ವಿವಿಎಸ್ ಪಂಡಿತ್ ನೆಹರು ಹೈಸ್ಕೂಲ್ (46), ಭಾರತೀಯ ವಿದ್ಯಾಭವನ (ಬಿಕೆಎಸ್‌ವಿಬಿ ಶಾಲೆ–143), ವಿಶ್ವಪ್ರಜ್ಞ ಹೈಸ್ಕೂಲ್(38), ಡೈಸಿ ಕಾನ್ವೆಂಟ್(19), ಬಿ.ಎಸ್.ಮಾದಪ್ಪ ಮೆಮೋರಿಯಲ್ ಇಂಗ್ಲೀಷ್ ಮೀಡಿಯಂ ಸ್ಕೂಲ್(108), ಮಿಥಿಲ ಇಂಗ್ಲೀಷ್ ಮೀಡಿಯಂ ಸ್ಕೂಲ್(17), ರಂಗರಾವ್ ಮೆಮೋರಿಯಲ್ ಸ್ಕೂಲ್ ಫಾರ್ ಡಿಸೇಬಲ್(12), ಚಾಣುಕ್ಯ ಇಂಗ್ಲೀಷ್ ಮೀಡಿಯಂ ಸ್ಕೂಲ್(8), ವಿದ್ಯಾವಾಹಿನಿ ಇಂಗ್ಲೀಷ್ ಮೀಡಿಯಂ ಸ್ಕೂಲ್(22), ದಿ ಎಸಿಎಂಇ ಸ್ಕೂಲ್ (28), ಅರಿವು ಹೈಸ್ಕೂಲ್(18), ಶ್ರೀ ಆಚಾರ್ಯ ಗುರುಕುಲ(11), ಶ್ರೀ ರಾಮಕೃಷ್ಣ ವಿದ್ಯಾಕುಲ(22), ಕೊಡಗು ಮಾಡೆಲ್ ಸ್ಕೂಲ್(20), ಸಿಎನ್‌ಎಂ ಪಬ್ಲಿಕ್ ಸ್ಕೂಲ್ (10), ಸ್ಯಾಂಡಲ್ ರೋಸ್ ಕಾನ್ವೆಂಟ್ (26), ಬಿಕೆಟಿ ಪಬ್ಲಿಕ್ ಸ್ಕೂಲ್(7), ಎಸ್‌ಎಲ್‌ಡಿ ಎಕ್ಸಲೆಂಟ್ ಪಬ್ಲಿಕ್ ಸ್ಕೂಲ್ (5), ವೇದಾಕ್ಷಿ ಗಣೇಶ ಎಜುಕೇಷನ್ ಇನ್ಸ್‌ಟಿಟ್ಯೂಷನ್(16) ಹಾಗೂ ಅನ್ವಯ ಪಬ್ಲಿಕ್ ಶಾಲೆ(10)ಗೆ ಶೇ.100ರಷ್ಟು ಫಲಿತಾಂಶ ಬಂದಿದೆ. ಈ 26 ಶಾಲೆಗಳಲ್ಲಿ 5 ಸರ್ಕಾರಿ ಶಾಲೆ, ಒಂದು ಅನುದಾನಿತ ಶಾಲೆ, 20 ಖಾಸಗಿ ಶಾಲೆಗಳು ಶೇ.100ರಷ್ಟು ಫಲಿತಾಂಶ ಗಳಿಸಿವೆ. ಅಲ್ಲದೆ, 26ರಲ್ಲಿ 15 ಶಾಲೆಗಳು ಗ್ರಾಮೀಣ ಪ್ರದೇಶದಲ್ಲಿಯೇ ಇರುವುದು ಗಮನಾರ್ಹವಾಗಿದೆ.

ಒಂದು ಶಾಲೆಗೆ ಶೂನ್ಯ ಫಲಿತಾಂಶ: ಮೈಸೂರು ಜಿಲ್ಲೆಯ ಹುಣಸೂರು ತಾಲೂಕಿನ ಶ್ರೀ ಗುರು ಬೋಧಿಸ್ವಾಮಿ ಹೈಸ್ಕೂಲ್‌ಗೆ ಶೂನ್ಯ ಫಲಿತಾಂಶ ಲಭ್ಯವಾಗಿದೆ. ಈ ಶಾಲೆಯಲ್ಲಿ ಪ್ರಸಕ್ತ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 6 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದರು. ಅವರಲ್ಲಿ ಯಾರೊಬ್ಬರೂ ತೇರ್ಗಡೆಯಾಗಿಲ್ಲ.

ಬ್ಲಾಕ್‌ವಾರು ಫಲಿತಾಂಶ: ಮೈಸೂರು ಜಿಲ್ಲೆಯ ಎಸ್‌ಎಸ್‌ಎಲ್‌ಸಿ ಫಲಿತಾಂಶದಲ್ಲಿ ಮೈಸೂರು ದಕ್ಷಿಣ ವಲಯದಲ್ಲಿ ಶೇ.79.13ರಷ್ಟು ಫಲಿತಾಂಶ ದಾಖಲಾಗಿ ಜಿಲ್ಲೆಯಲ್ಲಿ ಮೊದಲ ಸ್ಥಾನದಲ್ಲಿದೆ. ಈ ವಲಯದಲ್ಲಿ 4409 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದರು. ಅವರಲ್ಲಿ 920 ಮಂದಿ ಅನುತ್ತೀರ್ಣಗೊಂಡಿದ್ದರೆ, 3489 ಮಂದಿ ಪಾಸಾಗಿದ್ದಾರೆ. ಮೈಸೂರು ಗ್ರಾಮಾಂತರ ವಲಯದಲ್ಲಿ 4612 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದು, 1169 ಮಂದಿ ಫೇಲ್, 3443 ಪಾಸ್ (ಶೇ.74.65), ನಂಜನಗೂಡು ತಾಲೂಕಿನಲ್ಲಿ 4663 ವಿದ್ಯಾರ್ಥಿಗಳಲ್ಲಿ 1340 ಮಂದಿ ಅನುತ್ತೀರ್ಣರಾಗಿ, 3323 ಪಾಸ್ (ಶೇ.71.26) ಆಗಿದ್ದಾರೆ. ತಿ.ನರಸೀಪುರ ತಾಲೂಕಿನಲ್ಲಿ 3437 ವಿದ್ಯಾರ್ಥಿಗಳಲ್ಲಿ 1114 ಮಂದಿ ಫೇಲ್, 2323 ಮಂದಿ ತೇರ್ಗಡೆ (67.59)ಯಾಗಿದ್ದಾರೆ. ಕೆ.ಆರ್. ನಗರ ತಾಲೂಕಿನಲ್ಲಿ 2732 ವಿದ್ಯಾರ್ಥಿ ಗಳಲ್ಲಿ 910 ಮಂದಿ ಫೇಲ್, 1822 ಮಂದಿ (ಶೇ.66.69) ಪಾಸಾಗಿದ್ದಾರೆ. ಮೈಸೂರು ಉತ್ತರ ವಲಯದಲ್ಲಿ 5933 ವಿದ್ಯಾರ್ಥಿಗಳಲ್ಲಿ 2060 ಮಂದಿ ಅನುತ್ತೀರ್ಣಗೊಂಡು, 3873 ಮಂದಿ ಪಾಸ್(ಶೇ.65.28), ಪಿರಿಯಾಪಟ್ಟಣ ತಾಲೂಕಿನಲ್ಲಿ 2802 ವಿದ್ಯಾರ್ಥಿಗಳಲ್ಲಿ 1003 ಮಂದಿ ಫೇಲ್ ಆಗಿ, 1799 ಮಂದಿ ಪಾಸ್(ಶೇ.64.20) ಆಗಿದ್ದಾರೆ. ಹುಣ ಸೂರು ತಾಲೂಕಿನಲ್ಲಿ 3808 ವಿದ್ಯಾರ್ಥಿಗಳಲ್ಲಿ 1589 ವಿದ್ಯಾರ್ಥಿಗಳು ಅನುತ್ತೀರ್ಣಗೊಂಡು, 2228 ಮಂದಿ (ಶೇ.58.51) ಪಾಸಾಗಿದ್ದಾರೆ. ಹೆಚ್.ಡಿ.ಕೋಟೆ ತಾಲೂಕಿನಲ್ಲಿ 3161 ವಿದ್ಯಾರ್ಥಿಗಳಲ್ಲಿ 1344 ಮಂದಿ ಅನುತ್ತೀರ್ಣರಾಗಿದ್ದು ಶೇ.57.48 ರಂತೆ 1817 ಮಂದಿ ಪಾಸ್ ಆಗಿದ್ದಾರೆ.

ಫಲಿತಾಂಶ ಕುಸಿತ; ಡಿಡಿಪಿಐ ವಿಷಾದ



ಮೈಸೂರು, ಮೇ 2(ಎಂಟಿವೈ)– ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಮೈಸೂರು ಜಿಲ್ಲೆ 7 ರಿಂದ 15ನೇ ಸ್ಥಾನಕ್ಕೆ ಕುಸಿದಿರುವುದಕ್ಕೆ ಡಿಡಿಪಿಐ ಎಸ್.ಟಿ. ಜವರೇಗೌಡ ವಿಷಾದಿಸಿದ್ದಾರೆ. ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಮೈಸೂರು ಜಿಲ್ಲೆ ಎಸ್‌ಎಸ್‌ಎಲ್‌ಸಿ ಫಲಿತಾಂಶದಲ್ಲಿ ಯಾವ ಕಾರಣಕ್ಕಾಗಿ ಕುಸಿತ ಕಂಡಿದೆ ಎಂಬುದನ್ನು ಪತ್ತೆ ಹಚ್ಚಬೇಕಿದೆ. ಐದನೇ ಸ್ಥಾನದ ಒಳಗೆ ಬರುವಂತಹ ಪ್ರಯತ್ನ ಮಾಡಲಾಗಿತ್ತು ಫಲಿತಾಂಶ ಕುಸಿಯಲು ಈ ಬಾರಿ ಕೃಪಾಂಕ ಇಲ್ಲದಿರುವುದೂ ಒಂದು ಕಾರಣ. ಮೈಸೂರು ಜಿಲ್ಲೆಯಲ್ಲಿ ಇಬ್ಬರು 625ಕ್ಕೆ 625 ಅಂಕ ಪಡೆದಿರುವುದು ಸಂತಸ ತಂದಿದೆ ಎಂದರು.

ಎಸ್‌ಎಸ್‌ಎಲ್‌ಸಿ: ಕೊಡಗಿಗೆ 5ನೇ ಸ್ಥಾನ



ಪಂಚಮಿ

ಮಡಿಕೇರಿ, ಮೇ 2– ಎಸ್‌ಎಸ್‌ಎಲ್‌ಸಿ ಪರೀಕ್ಷಾ ಫಲಿತಾಂಶ ಪ್ರಕಟವಾಗಿದ್ದು ಕೊಡಗು ಜಿಲ್ಲೆ 82.21 ಶೇಕಡಾವಾರು ಅಂಕಗಳನ್ನು ಗಳಿಸುವ ಮೂಲಕ ರಾಜ್ಯದಲ್ಲಿ 5ನೇ ಸ್ಥಾನ ಪಡೆದಿದೆ.

ಜಿಲ್ಲೆಯಲ್ಲಿ ಒಟ್ಟು 171 ಪ್ರೌಢಶಾಲೆಗಳ 6673 ವಿದ್ಯಾರ್ಥಿಗಳ ಪೈಕಿ 5486 ವಿದ್ಯಾರ್ಥಿಗಳು ತೇರ್ಗಡೆಯಾಗುವ ಮೂಲಕ ಶೇ.82.21 ಫಲಿತಾಂಶ ದೊರಕಿದೆ. ಇವರಲ್ಲಿ 2723 ಬಾಲಕಿಯರು ಮತ್ತು 2420 ಬಾಲಕರು ತೇರ್ಗಡೆಯಾಗಿದ್ದಾರೆ. ಜಿಲ್ಲೆಯಲ್ಲಿ ಒಟ್ಟು 26 ಪ್ರೌಢಶಾಲೆಗಳು ಶೇ.100 ಫಲಿತಾಂಶ ದಾಖಲಿಸಿಕೊಂಡಿದ್ದು, ಈ ಪೈಕಿ 11 ಸರಕಾರಿ ಮತ್ತು 15 ಅನುದಾನರಹಿತ ಶಾಲೆಗಳು ಸೇರಿವೆ.

ವಿರಾಜಪೇಟೆ ಶ್ರೀ ಕಾವೇರಿ ಪ್ರೌಢ ಶಾಲೆಯ ಕುಮಾರಿ ಟಿ.ಎಂ. ಆಶ್ರಯ್ ಅಕ್ಕಮ್ಮ, ಸೋಮವಾರಪೇಟೆಯ ವಿಶ್ವ ಮಾನವ ಕುವೆಂಪು ಶಾಲೆಯ ಕುಮಾರಿ ಪಂಚಮಿ ಅವರು 625ಕ್ಕೆ 621 ಅಂಕಗಳನ್ನು ಪಡೆದು ಜಿಲ್ಲೆಗೆ ಮೊದಲಿಗರಾಗಿ ಹೊರ ಹೊಮ್ಮಿದ್ದಾರೆ.



ಆಶ್ರಯ್ ಅಕ್ಕಮ್ಮ

ವಿರಾಜಪೇಟೆ ಕಳತ್ಮಾಡು ಲಯನ್ಸ್ ಪ್ರೌಢಶಾಲೆಯ ತೇಜಸ್ ಭೀಮಯ್ಯ, ಮೂರ್ನಾಡು ಜ್ಞಾನ ಜ್ಯೋತಿ ಪ್ರೌಢಶಾಲೆಯ ಮೊಹಮಸ್ ಸಾಹಿಲ್, ಕೂಡು ಮಂಗಳೂರು ಯುನಿಕ್ ಅಕಾಡೆಮಿಯ ಕುಮಾರಿ ಸಮೃದ್ಧಿ ಆಚಾರ್ ಕೆ.ಎಂ ಅವರು 620 ಅಂಕಗಳನ್ನು ಪಡೆದು ದ್ವಿತೀಯ ಸ್ಥಾನ ಅಲಂಕರಿಸಿದ್ದಾರೆ. ಮಡಿಕೇರಿಯ ಸಂತ ಮೈಕಲರ ಪ್ರೌಢಶಾಲೆಯ ಕು. ನಿಸರ್ಗ ರೈ, ಚೇರಂಬಾಣೆ ಶ್ರೀ ರಾಜರಾಜೇಶ್ವರಿ ಶಾಲೆಯ ಕು.ಇಂಚರ, ಸೋಮವಾರಪೇಟೆಯ ವಿಶ್ವ ಮಾನವ ಕುವೆಂಪು ಶಾಲೆಯ ಕು.ತೇಜಸ್ವಿನಿ ಸಿ.ಎಸ್ ಮತ್ತು ಕು.ಆದ್ವಿ ಸಿ.ಎಸ್ ಅವರು 619 ಅಂಕಗಳನ್ನು ಗಳಿಸುವ ಮೂಲಕ ತೃತೀಯ ಸ್ಥಾನಗಳನ್ನು ಪಡೆದಿದ್ದಾರೆ.

ಕೆ.ಎಂ.ಸಮೃದ್ಧಿ ಆಚಾರ್ ಜಿಲ್ಲೆಗೆ 2ನೇ ಸ್ಥಾನ

ಕುಶಾಲನಗರ: ಸಮೀಪದ ಕೂಡ್ಲೂರು ಯೂನಿಕ್ ಅಕಾಡೆಮಿ ಶಾಲೆಯ ಎಸ್ಸೆಸ್ಸೆಲ್ಸಿ ವಿದ್ಯಾರ್ಥಿನಿ ಕೆ.ಎಂ. ಸಮೃದ್ಧಿ ಆಚಾರ್, ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ 625ಕ್ಕೆ 620 ಅಂಕಗಳೊಂದಿಗೆ ಜಿಲ್ಲೆಗೆ 2ನೇ ಸ್ಥಾನ ಪಡೆದುಕೊಂಡಿದ್ದಾರೆ.

ಈಕೆ ಇಲ್ಲಿನ ವಕೀಲ ಕೆ.ಬಿ.ಮೋಹನ್ ಮತ್ತು ಸರ್ಕಾರಿ ಪಾಲಿಟೆಕ್ನಿಕ್‌ನ ಉಪನ್ಯಾಸಕಿ ಎಚ್.ಎಸ್.ಸ್ಮಿತಾ ದಂಪತಿಯ ಪುತ್ರಿಯಾಗಿದ್ದಾಳೆ. ಶಾಲೆಯ ಮುಖ್ಯ ಶಿಕ್ಷಕ ಮಹೇಶ್ ಹಾಗೂ ಆಡಳಿತ ಮಂಡಳಿ ವಿದ್ಯಾರ್ಥಿನಿ ಸಮೃದ್ಧಿ ಆಚಾರ್ ಅವರನ್ನು ಅಭಿನಂದಿಸಿದ್ದಾರೆ.



ರಶ್ಮಿಗೆ ಸಿಹಿ ತಿನ್ನಿಸುತ್ತಿರುವ ಪೋಷಕರಾದ ಕೆ.ಬಿ.ಮೋಹನ್, ಎಚ್.ಎಸ್.ಸ್ಮಿತಾ

ಸರ್ಕಾರಿ ಬಾಲಕಿಯರ ಪ್ರೌಢಶಾಲೆಗೆ ಶೇ.100 ಫಲಿತಾಂಶ



ರಂಜಿನಿ



ದೀಕ್ಷಾ

ಕುಶಾಲನಗರ: ಎಸ್‌ಎಸ್‌ಎಲ್‌ಸಿಯಲ್ಲಿ ಇಲ್ಲಿನ ಸರ್ಕಾರಿ ಬಾಲಕಿಯರ ಪ್ರೌಢಶಾಲೆ ಶೇ.100 ಫಲಿತಾಂಶ ಪಡೆದು ಕೀರ್ತಿ ತಂದಿದೆ. ಒಟ್ಟು 45 ವಿದ್ಯಾರ್ಥಿಗಳ ಪೈಕಿ ರಂಜಿನಿ 549 ಹಾಗೂ ದೀಕ್ಷಾ 548 ಅಂಕ ಪಡೆದು ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ. 28 ವಿದ್ಯಾರ್ಥಿಗಳಲ್ಲಿ ಪ್ರಥಮ 12 ವಿದ್ಯಾರ್ಥಿಗಳು ದ್ವಿತೀಯ ಸ್ಥಾನ ಹಾಗೂ 3 ಉತ್ತೀರ್ಣರಾಗಿದ್ದಾರೆ ಎಂದು ಶಾಲೆಯ ಮುಖ್ಯಶಿಕ್ಷಕ ಪಿ.ನವೀನ್ ಕುಮಾರ್ ತಿಳಿಸಿದ್ದಾರೆ.

ಹಿಂದೂ ಕಾರ್ಯಕರ್ತ ಸುಹಾಸ್ ಶೆಟ್ಟಿ ಹತ್ಯೆ ಖಂಡಿಸಿ ಪ್ರತಿಭಟನೆ



ಹಿಂದೂ ಕಾರ್ಯಕರ್ತ ಸುಹಾಸ್ ಶೆಟ್ಟಿ ಹತ್ಯೆ ಖಂಡಿಸಿ ಸಂಜೆ ಪ್ರತಿಭಟನೆ ನಡೆಸಲಾಯಿತು.

ಕುಶಾಲನಗರ, ಮೇ 2–ಜಿಲ್ಲಾ ಹಿಂದೂ ಸುರಕ್ಷಾ ಸಮಿತಿ ವತಿಯಿಂದ ಮಂಗಳೂರಿನಲ್ಲಿ ಹಿಂದೂ ಕಾರ್ಯಕರ್ತ ಸುಹಾಸ್ ಶೆಟ್ಟಿ ಹತ್ಯೆ ಖಂಡಿಸಿ ಸಂಜೆ ಪ್ರತಿಭಟನೆ ನಡೆಸಲಾಯಿತು.

ಇಲ್ಲಿನ ಶ್ರೀ ಗಣಪತಿ ದೇವಾಲಯ ಮುಂಭಾಗ ವಿವಿಧ ಹಿಂದೂಪರ ಸಂಘಟನೆಗಳ ಪ್ರಮುಖರು, ಕಾರ್ಯಕರ್ತರು ಘಟನೆ ಖಂಡಿಸಿ ಹತ್ಯೆ ಆರೋಪಿಗಳನ್ನು ಕೂಡಲೇ ಬಂಧಿಸುವಂತೆ ಆಗ್ರಹಿಸಿ ಕಾಂಗ್ರೆಸ್ ಸರ್ಕಾರದ ವಿರುದ್ಧ ಧಿಕ್ಕಾರ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಫೀಲ್ಡ್ ಮಾರ್ಷಲ್ ಕಾರ್ಯಪ್ಪ ವೃತ್ತದಲ್ಲಿ ಮಾನವ ಸರಪಳಿ ರಚಿಸಿ ರಸ್ತೆ ತಡೆ ನಡೆಸಿ ಪ್ರತಿಭಟಿಸಿದರು.

ಮಾಜಿ ಶಾಸಕ ಅಪ್ಪಚ್ಚುರಂಜನ್ ಮಾತನಾಡಿ, ಮಂಗಳೂರಿನಲ್ಲಿ ಜನಸಂದಣಿ ನಡುವೆ ಹಿಂದೂ ಕಾರ್ಯಕರ್ತನ ಹತ್ಯೆ ನಡೆದಿದೆ. ಇದು ಖಂಡನೀಯ ಆರೋಪಿಗಳನ್ನು ಕೂಡಲೇ ಬಂಧಿಸಬೇಕು ಎಂದು ಒತ್ತಾಯಿಸಿದರು.

ಜಿಲ್ಲಾ ಬಿಜೆಪಿ ಮಾಜಿ ಅಧ್ಯಕ್ಷ ಬಿ.ಬಿ.ಭಾರತೀಶ್ ಮಾತನಾಡಿ, ಗೋ ರಕ್ಷಣೆ, ಮತಾಂತರ ವಿರುದ್ಧ, ಧರ್ಮ ರಕ್ಷಣೆ ಪರವಾಗಿ ಸದಾ ಹೋರಾಟ ನಡೆಸುತ್ತಿದ್ದ ಸುಹಾಸ್ ಶೆಟ್ಟಿಯನ್ನು ವ್ಯವಸ್ಥಿತವಾಗಿ ಕೊಲೆಮಾಡಿ ಹಿಂದೂ ಸಮಾಜವನ್ನು ಕೆಣಕುವ ಹಾಗೂ ಬೆದರಿಸಲು ಈ ಕೃತ್ಯ ನಡೆದಿರುವುದು ಮೇಲ್ನೋಟಕ್ಕೆ ಕಂಡುಬಂದಿದೆ ಎಂದರು.

ಪ್ರತಿಭಟನೆಯಲ್ಲಿ ಬಿಜೆಪಿ ಹಾಗೂ ಹಿಂದೂಪರ ಸಂಘಟನೆಗಳ ಪ್ರಮುಖರಾದ ಎಂ.ಎಂ. ಚರಣ್, ಗೌತಮ್, ಎಂ.ಡಿ.ಕೃಷ್ಣಪ್ಪ, ಉಮಾಶಂಕರ್, ಭಾಸ್ಕರ್ ನಾಯಕ್, ಚಂದ್ರಶೇಖರ್ ಹೇರೂರು, ಅಮೃತ್ ರಾಜ್, ಮಧುಸೂದನ್, ವೈಶಾಖ್, ಜಿ.ಎಲ್.ನಾಗರಾಜ್, ಪ್ರವೀಣ್, ಪ್ರಶಾಂತ್, ಲಕ್ಷ್ಮೀನಾರಾಯಣ, ವರದ, ನವನೀತ್, ಆದರ್ಶ್, ವಿನೀತ್, ರಾಜೀವ, ಸಚಿನ್, ಅವಿನಾಶ್, ಸಂತೋಷ್, ಬೋಸ್ ಮೊಣ್ಣಪ್ಪ, ಮಂಜು, ಪ್ರದೀಪ್, ನಿತ್ಯಾನಂದ, ಸುಮನ್, ವಿನು, ಸೌಮ್ಯ ಮತ್ತಿತರರು ಪಾಲ್ಗೊಂಡಿದ್ದರು. ಸುಹಾಸ್ ಶೆಟ್ಟಿಗೆ ಶ್ರದ್ಧಾಂಜಲಿ ಸಲ್ಲಿಸಿ ಮೌನಾಚರಣೆ ಮಾಡಿದರು.

ಮರ ಬಿದ್ದು ಮನೆ ಹಾನಿ



ಪಿ ಜಿ ಕಾವೇರಿ ಮನೆಯ ಸಮೀಪವಿದ್ದ ಹಲಸಿನ ಮರದ ಟೊಂಗೆ ಮುರಿದು ಬಿದ್ದು ಹಾನಿಯಾಗಿರುವುದು.

ನಾಪೋಕ್ಲು,ಮೇ.2–ಇಲ್ಲಿಗೆ ಉಂಟಾದ ಗಾಳಿ ಮಳೆಗೆ ಮನೆ (ಗುಡಿಸಲು) ಮೇಲೆ ಮರ ಬಿದ್ದು ಹಾನಿಯಾದ ಘಟನೆ ಸಂಭವಿಸಿದೆ.

ಕೋಕೇರಿ ಗ್ರಾಮದ ಅಂಬಾಡಿ ಕಾಲೋನಿ ನಿವಾಸಿ ಬಡ ಕೂಲಿ ಕಾರ್ಮಿಕೆ ಪಿ ಜಿ ಕಾವೇರಿ ಎಂಬವರ ಮನೆಯ ಸಮೀಪವಿದ್ದ ಹಲಸಿನ ಮರದ ಟೊಂಗೆ ಮುರಿದು ಬಿದ್ದು ಹಾನಿ ಸಂಭವಿಸಿದ್ದು ಜೀವ ಅಪಾಯದಿಂದ ಪಾರಾಗಿದ್ದಾರೆ.

ಇದರಿಂದಾಗಿ ಮನೆಯಲ್ಲಿ ಇದ್ದ ಬಟ್ಟೆ, ಬರೆ ಸಾಮಾನುಗಳು ಮಳೆನೀರಲ್ಲಿ ತೋಯ್ದು ತೀವ್ರ ಸಮಸ್ಯೆ ಎದುರಾಗಿದ್ದು ಸಂಬಂಧಪಟ್ಟವರು ದಾನಿಗಳು ಇತ್ತ ಗಮನಹರಿಸಬೇಕಾಗಿದೆ.

ಮಡಿಕೇರಿಯಲ್ಲಿ ಶ್ರೀ ಆದಿ ಶಂಕರಾಚಾರ್ಯ ಜಯಂತಿ

ಮಡಿಕೇರಿ, ಮೇ 2– ಸೌಂದರ್ಯ ಲಹರಿಯಲ್ಲಿ ಆದಿ ಶಂಕರಾಚಾರ್ಯರು ದ್ರಾವಿಡ ಶಿಶು ಎಂದು ಕರೆದುಕೊಳ್ಳುತ್ತಾರೆ ಎಂದು ಆಧ್ಯಾತ್ಮಿಕ ಚಿಂತಕರಾದ ಯಸಳೂರು ಉದಯ್ ಕುಮಾರ್ ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರ ಸಹಯೋಗದೊಂದಿಗೆ ಶುಕ್ರವಾರ ನಗರದ ಗಾಂಧಿ ಭವನದಲ್ಲಿ ನಡೆದ ಶ್ರೀ ಆದಿ ಶಂಕರಾಚಾರ್ಯ ಜಯಂತಿಯನ್ನು ಉದ್ಘಾಟಿಸಿ ಮಾತನಾಡಿದ ಅವರು, ಆದಿ ರಂಗ, ಮಧ್ಯ ರಂಗ, ಅಂತರಂಗ ಮೂರು ರಂಗನಾಥಗಳಿವೆ, ಕಾವೇರಿಯನ್ನು ಫಲವನ್ನು ಮತ್ತು ಬೆಳಕನ್ನು ಕೊಡುವ ಮಹಾತಾಯಿ ಎಂದು ಹೇಳುತ್ತಾರೆ. ಫಲ ಎಂದರೆ ಅನ್ನ, ಇಡೀ ಕರ್ನಾಟಕ ತಮಿಳುನಾಡಿನಲ್ಲಿ ಕಾವೇರಿ ತಾನು ಹರಿದು ಕಡಲನ್ನು, ಸಮುದ್ರವನ್ನು ಸೇರುವವರೆಗೆ ಹನಿ ಹನಿ ನೀರಿಗೆ ತೆನೆ ತೆನೆ ಭತ್ತವನ್ನು ಬೆಳೆಯುತ್ತಾರೆ ಎಂದು ಹೇಳಿದರು.

ಪತ್ರಕರ್ತ ಬಿ.ಜಿ.ಅನಂತಶಯನ ಮಾತನಾಡಿ, ಶಂಕರಾಚಾರ್ಯರ ಬೋಧನೆಯ ಅಂಶವನ್ನು ಜೀವನದಲ್ಲಿ ಅಳವಡಿಸಿಕೊಂಡರೆ ಮಾತ್ರ ಯಶಸ್ವಿಗಳಿಸಬಹುದು.



ಶ್ರೀ ಆದಿ ಶಂಕರಾಚಾರ್ಯ ಜಯಂತಿಯಲ್ಲಿ ಭಾಗವಹಿಸಿರುವ ಗಣ್ಯರು.

ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ದಿನೇಶ್ ಕುಮಾರ್ ಅವರು ಮಾತನಾಡಿ ವಿದ್ಯಾರ್ಥಿಗಳು ಪಾಠದ ಜೊತೆಗೆ ಪಠ್ಯೇತರ ವಿಷಯಗಳಲ್ಲಿ ಮತ್ತು ಆಧ್ಯಾತಿಕತೆಯಲ್ಲಿ ಸಹ ತೊಡಗಿಸಿಕೊಳ್ಳಬೇಕು. ಆದಿ ಶಂಕರಾಚಾರ್ಯರು 8ನೇ ಶತಮಾನದಲ್ಲಿ ಜೀವಿಸಿದಂತಹ ಅತ್ಯಂತ ಪ್ರಸಿದ್ಧವಾದಂತಹ ಒಬ್ಬ ತತ್ವಜ್ಞಾನಿ. ಇವರು ಕೇರಳ ಪ್ರಾಂತ್ಯದಲ್ಲಿದ್ದವರು ಎಂದು ಹೇಳಿದರು.

ಮಡಿಕೇರಿ ಬ್ರಾಹ್ಮಣ ಸಮಾಜದ ಎಸ್.ಎಸ್.ಸಂಪತ್ ಕುಮಾರ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಕುಮಾರ, ವಿದ್ಯಾರ್ಥಿಗಳು ಇತರರು ಪಾಲ್ಗೊಂಡಿದ್ದರು.

ನಾಳೆ ಮಡಿಕೇರಿಯಲ್ಲಿ ಶ್ರೀ ಭಗೀರಥ ಜಯಂತಿ

ಮಡಿಕೇರಿ, ಮೇ 2– ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರ ಸಹಯೋಗದೊಂದಿಗೆ ಶ್ರೀ ಭಗೀರಥ ಜಯಂತಿ ಕಾರ್ಯಕ್ರಮವು ಮೇ4 ರ ಬೆಳಗ್ಗೆ 11 ಗಂಟೆಗೆ ನಗರದ ಗಾಂಧಿ ಭವನದಲ್ಲಿ ನಡೆಯಲಿದೆ.

ಕ್ರೀಡೆ ಮನುಷ್ಯನ ಸಂಬಂಧವನ್ನು ಗಟ್ಟಿಗೊಳಿಸುತ್ತದೆ

ಶ್ರೀ ಶಾಂತಮಲ್ಲಿಕಾರ್ಜುನ ಸ್ವಾಮೀಜಿ ಅಭಿಮತ



ವಿರಾಜಪೇಟೆ: ಕೊಡವ ಸಮಾಜ ಹೆಣ್ಣು ಮಕ್ಕಳ ನಡುವಿನ ಹಗ್ಗಜಗ್ಗಾಟ ಮತ್ತು ಕೊಡವ ಭಾಷಿಕ ಜನಾಂಗವಾದ ಐರೀರ ಮತ್ತು ಹೆಗ್ಗಡೆ ಸಮಾಜದ ನಡುವಿನ ಪಂದ್ಯಾಟಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಕ್ರೀಡೆ ಸದಾ ಮನುಷ್ಯನಲ್ಲಿರುವ ಸಂಬಂಧವನ್ನು ಗಟ್ಟಿಗೊಳಿಸುತ್ತದೆ ಮತ್ತು ಪ್ರೀತಿ ಭಾವವನ್ನು ಉನ್ನತ ಮಟ್ಟಕ್ಕೆ ಕೊಂಡು ಹೋಗುತ್ತದೆ ಎಂದು ಶ್ರೀ ಶಾಂತಮಲ್ಲಿಕಾರ್ಜುನ ಸ್ವಾಮಿಗಳು ಹೇಳಿದರು.

ರಾಷ್ಟ್ರೀಯ ಅಂತಾರಾಷ್ಟ್ರೀಯ ಮಟ್ಟದ ಪಂದ್ಯಾಟಗಳನ್ನು ಸ್ಥಳೀಯ ಕುಟುಂಬಗಳು ಆಯೋಜಿಸುತ್ತಿದ್ದು, ಇದರಿಂದ ಕುಟುಂಬ ಕುಟುಂಬಗಳ ನಡುವಿನ ಪಂದ್ಯಾಟವು ತಮ್ಮ ತಮ್ಮಲ್ಲಿ ಉತ್ತಮ ಬಾಂಧವ್ಯವನ್ನು ಬೆಸೆಯಲು ಸಹಕಾರಿಯಾಗುತ್ತಿದೆ. ಅನೇಕ ಯುವ ಕ್ರೀಡಾ ಪ್ರತಿಭೆಗಳಿಗೆ ಅವಕಾಶ ದೊರೆತು ಮುಂದೆ ಕ್ರೀಡಾ ಭವಿಷ್ಯ ರೂಪಿಸಿಕೊಳ್ಳಲು ಸಹಕಾರಿಯಾಗುತ್ತದೆ. ಗ್ರಾಮೀಣ ಮಟ್ಟದಲ್ಲಿ ಸ್ಥಳೀಯ ಬಾಳೆಕುಟ್ಟಿರ ಕುಟುಂಬ ಕೊಡವ ಕುಟುಂಬಗಳ ನಡುವೆ ಹಗ್ಗಜಗ್ಗಾಟ ಹಬ್ಬವನ್ನು ಆಯೋಜಿಸಿರುವುದು ಸಂತಸದ ವಿಚಾರವಾಗಿದೆ. ಇಂತಹ ಕ್ರೀಡಾಕೂಟಗಳಿಂದ ಭೇದಭಾವಗಳನ್ನು ತೊರೆದು ಸಾಮಾರಸ್ಯ ಮೂಡಲು ಸಹಕಾರಿಯಾಗುತ್ತದೆ ಎಂದರು.

ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಅಜ್ಜಿನಿಕಂಡ ಮಹೇಶ್ ನಾಚಯ್ಯ ಮಾತನಾಡಿ ಕೊಡಗಿನಲ್ಲಿ. ಏಳು ಸಾವಿರ ವರ್ಷದ ಇತಿಹಾಸವಿರುವ ಈ ಹಗ್ಗಜಗ್ಗಾಟ ಅಂತರಾಷ್ಟ್ರೀಯ ಮಟ್ಟದ ಪಂದ್ಯವಾಗಿದೆ. ಇಂದು 282 ಕೊಡವ ಕುಟುಂಬಗಳು ಈ ಪಂದ್ಯಾಟದಲ್ಲಿ ಭಾಗವಹಿಸಿದ್ದು ಹಾಕಿಯಂತೆ ಈ ಪಂದ್ಯಾಟ ಹೆಚ್ಚಿನ ಕುಟುಂಬಗಳು ಭಾಗವಹಿಸಲಿ ಮುಂದೆ ಈಗೆ ಮುನ್ನಡೆಯಲಿ ಎಂದರು

ಹಗ್ಗಜಗ್ಗಾಟ ಅಕಾಡೆಮಿ ಅಧ್ಯಕ್ಷ ಪೊನ್ನೊಳತಂಡ ಕಿರಣ್‌ಪೊನ್ನಪ್ಪ ಮಾಜಿ ಸೈನಿಕರ ಸಂಘದ ಅಧ್ಯಕ್ಷ ಕೆ.ಸೋಮಣ್ಣ, ರೈತ ಸಂಘಧ ಅಧ್ಯಕ್ಷ ಕಾಡ್ಯಮಾಡ ಮನು ಸೋಮಯ್ಯ ಮಾತನಾಡಿದರು. ಅಧ್ಯಕ್ಷತೆಯನ್ನು ಕುಟುಂಬದ ಅಧ್ಯಕ್ಷ ಬಾಳೆಕುಟ್ಟಿರ ಎಂ. ಮಂದಣ್ಣ ವಹಿಸಿದ್ದರು. ಸಮಾಜ ಸೇವಕ ಕಾಣತಂಡ ಬೀನಾ ಜಗದೀಶ್ ಹಿರಿಯರಾದ ಬಾಳೆಕುಟ್ಟಿರ ಬಿ.ಎ. ದಮಯಂತಿ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಮೊದಲಿಗೆ ಬಾಳೆಕುಟ್ಟಿರ ಕುಟುಂಬದ ವತಿಯಂದ ಮೆರವಣಿಗೆ ನಡೆಯಿತು, ಇದೇ ಸಂದರ್ಭ ಬಾಳೆಕುಟ್ಟಿರ ಕುಟುಂಬದ ಹಣ್ಣು ಮಕ್ಕಳಿಂದ ಸ್ವಾಗತ ನೃತ್ಯ ಬೇಗೂರು ಪೊಳೆಮಾಡ್ ಈಶ್ವರ ಸಂಘದ ವತಿಯಿಂದ ಉಮ್ಮತ್ತಾಟ್ ಮತ್ತು ಕೋಲಾಟ್ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು. ಬಾಳೆಕುಟ್ಟಿರ ಕುಟುಂಬದ ಉಪಾಧ್ಯಕ್ಷ ತಿಮ್ಮಯ್ಯ ಸ್ವಾಗತಿಸಿದರು. ಕಲ್ಪನ ಕಾರ್ಯಪ್ಪ ವಂದಿಸಿದರು.

617 ಅಂಕಗಳಿಸಿ, ಶಿಕ್ಷಕರ ಕ್ಷಮೆ ಕೇಳಿದ ವಿದ್ಯಾರ್ಥಿ

ಮರು ಮೌಲ್ಯಮಾಪನ ಬಳಿಕ ಮರು ಪರೀಕ್ಷೆಗೂ ಸಿದ್ಧ : ಗಾನವಿ



ಕೊಳ್ಳೇಗಾಲ: ಸರಕಾರಿ ಆದರ್ಶ ಶಾಲೆಯ ವಿದ್ಯಾರ್ಥಿನಿಯೊಬ್ಬರು 10ನೇ ತರಗತಿ ಪರೀಕ್ಷೆಯಲ್ಲಿ 617 ಅಂಕಗಳಿಸಿದ್ದರೂ ಸಹ ನನಗೆ ಈ ಅಂಕ ತೃಪ್ತಿ ನೀಡಿಲ್ಲ, ನಮ್ಮ ಶಿಕ್ಷಕರು ಹೆಚ್ಚಿನ ಸಹಕಾರ ನೀಡಿದ್ದರೂ ಕಡಿಮೆ ಅಂಕಗಳಿಸಿರುವುದಕ್ಕೆ ನಾನು ಶಿಕ್ಷಕರಲ್ಲಿ ಕ್ಷಮೆ ಕೇಳುವೆ, ಮರು ಮೌಲ್ಯಮಾಪನ ಮಾಡಿಸುವೆ, ಅಲ್ಲೂ ಹೆಚ್ಚು ಅಂಕ ದೊರಕದಿದ್ದರೆ ಮತ್ತೆ ಮರು ಪರೀಕ್ಷೆ ಬರೆಯಲು ಸಜ್ಜಾಗುವೆ ಎಂದು ಆರ್ ಗಾನವಿ ಹೇಳಿದ್ದಾರೆ

ಆದರ್ಶ ಶಾಲೆಯ ವತಿಯಿಂದ ಅಭಿನಂದನೆ ಸ್ವೀಕರಿಸಿ ಮಾತನಾಡಿದ ಆಕೆ ಶಿಕ್ಷಕರು ನೀಡಿರುವ ಪ್ರೋತ್ಸಾಹಕ್ಕೆ ನನ್ನ, ಈ 617 ಅಂಕ ಏನೇನೂ ಅಲ್ಲ; ಇನ್ನೂ ಹೆಚ್ಚು ಅಂಕ ಬರುತ್ತೆ ಎಂಬ ನನ್ನ ನಿರೀಕ್ಷೆ ಹುಸಿಯಾಗಿದ್ದು ಮರು ಮೌಲ್ಯಮಾಪನಕ್ಕೆ ಅರ್ಜಿ ಹಾಕಲು ನಾನು ಇಚ್ಛಿಸಿದ್ದೇನೆ, ಅದು ನನಗೆ ತೃಪ್ತಿಯಾಗದ ಪಕ್ಷದಲ್ಲಿ ಮರು ಪರೀಕ್ಷೆ ಬರೆಯಲು ನಾನು ಸಿದ್ಧಳಾಗುವೆ, 617 ಅಂಕ ನನ್ನ ಪ್ರಯತ್ನಕ್ಕೆ ಕಡಿಮೆಯಾಗಿದ್ದು ಈನಿಟ್ಟಿನಲ್ಲಿ ನಾನು ಶಿಕ್ಷಕರ ಕ್ಷಮೆ ಕೋರುವೆ. ನನಗೆ ಪ್ರೋತ್ಸಾಹ ನೀಡಿದ ಎಲ್ಲರನ್ನು ಅಭಿನಂದಿಸುವೆ, ನನ್ನ ಸಾಧನೆಗೆ ಪೋಷಕರು ಮತ್ತು ಶಿಕ್ಷಕರ ಸಹಕಾರ ಕಾರಣ, ಈ ಅಂಕ ನನ್ನ ಪ್ರಯತ್ನಕ್ಕ ಕಡಿಮೆ ಎನಿಸಿದೆ ಎಂದರು

ವೃತ್ತಿಯಲ್ಲಿ ವೈದ್ಯಳಾಗುವ ಹಂಬಲ ಹೊಂದಿದ್ದು ಸದ್ಯ ಪಿಸಿಎಂಬಿ ವಿಷಯ ತೆಗೆದುಕೊಂಡು ಮುಂದಿನ ಅಧ್ಯಯನ ಮುಂದುವರೆಸುವೆ ಎಂದರು. ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷ ಪ್ರಕಾಶ್, ಮುಖ್ಯಶಿಕ್ಷಕರು, ಸಹಶಿಕ್ಷಕರೆಲ್ಲರೂ ಶಾಲೆಗೆ ಪ್ರಥಮ, ತಾಲೂಕಿಗೆ ದ್ವಿತಿಯ ಸ್ಥಾನಗಳಿಸಿರುವ ಗಾವನಿಗೆ ಸಿಹಿ ತಿನ್ನಿಸಿ ಸಂಭ್ರಮಿಸಿದರು. ಶಾಲೆಗೆ ದ್ವಿತಿಯ ಹಾಗೂ ತೃತಿಯ ಸ್ಥಾನಗಳಿಸಿದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು. ಗಾನವಿ ತಂದೆ ಶಿಕ್ಷಕ ರಾಜು, ಶಾಲಾಭಿವೃದ್ಧಿ ಸಮಿತಿ ಪದಾಧಿಕಾರಿಗಳು ಪಾಲ್ಗೊಂಡಿದ್ದರು.

ಎಸ್‌ಎಲ್‌ಎಲ್‌ಸಿ ಶೇ.61.45 ರಷ್ಟು ಫಲಿತಾಂಶ

27ನೇ ಸ್ಥಾನಕ್ಕೆ ಕುಸಿದ ಚಾಮರಾಜನಗರ ಜಿಲ್ಲೆ

ಚಾಮರಾಜನಗರ, ಮೇ 2– ಕಳೆದ ಮಾರ್ಚ್‌ನಲ್ಲಿ ನಡೆದ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಜಿಲ್ಲೆಯು ಶೇ.61.45 ಫಲಿತಾಂಶ ಪಡೆದಿದ್ದು, ರಾಜ್ಯದಲ್ಲಿ 27ನೇ ಸ್ಥಾನ ಪಡೆದಿದೆ. ಕಳೆದ ಬಾರಿ 24ನೇ ಸ್ಥಾನ ಗಳಿಸಿದ್ದ ಜಿಲ್ಲೆ, ಈ ಬಾರಿ ಮೂರು ಸ್ಥಾನ ಕೆಳಕ್ಕಿಳಿದಿದೆ.

ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 5319 ವಿದ್ಯಾರ್ಥಿಗಳು ಹಾಗೂ 5536 ವಿದ್ಯಾರ್ಥಿನಿಯರು ಸೇರಿದಂತೆ ಒಟ್ಟು 10855 ವಿದ್ಯಾರ್ಥಿಗಳು ಹಾಜರಾಗಿದ್ದು, 6606 ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದಾರೆ. ಇವರಲ್ಲಿ 2731 ವಿದ್ಯಾರ್ಥಿಗಳು ಹಾಗೂ 3875 ವಿದಾರ್ಥಿನಿಯರಾಗಿದ್ದಾರೆ. ಪರೀಕ್ಷೆ ಬರೆದಿದ್ದವರ ಪೈಕಿ 4249 ವಿದ್ಯಾರ್ಥಿಗಳು ಅನುತ್ತೀರ್ಣರಾಗಿದ್ದು, ಇವರಲ್ಲಿ 2588 ವಿದ್ಯಾರ್ಥಿಗಳು, 1661 ವಿದ್ಯಾರ್ಥಿನಿಯರಾಗಿದ್ದಾರೆ.




"ಜಿಲ್ಲೆಯಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷಾ ಫಲಿತಾಂಶವನ್ನು ಉತ್ತಮ ಪಡಿಸಲು ಎಲ್ಲ ಕ್ರಮಗಳನ್ನೂ ಕೈಗೊಳ್ಳಲಾಗಿತ್ತು. ಕಳೆದ ಬಾರಿಗಿಂತ ಈ ಬಾರಿ ಕಡಿಮೆ ಫಲಿತಾಂಶ ಬಂದಿದೆ. ಇದಕ್ಕೆ ಕಾರಣ ಏನೆಂದು ಪರಿಶೀಲಿಸಿ, ಈ ಬಾರಿ ಫೇಲ್ ಆದವರಿಗೆ ವಿಶೇಷ ಕೋಚಿಂಗ್ ನೀಡಿ ಅವರು ಮುಂದಿನ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಲು ಕ್ರಮ ಕೈಗೊಳ್ಳಲಾಗುವುದು. ಮುಂದಿನ ವರ್ಷ ಆರಂಭದಿಂದಲೇ ಓರಿಯಂಟೇಷನ್ ಪ್ರೋಗ್ರಾಂ ನಡೆಸಲಾಗುವುದು.

–ಮೋನಾರೋತ್, ಜಿ.ಪಂ. ಸಿಇಒ, ಚಾ.ನಗರ.

ಗುಂಡ್ಲುಪೇಟೆ ಪ್ರಥಮ : ತಾಲೂಕು ಶೇ.65.18 ಫಲಿತಾಂಶ ಪಡೆದು ಜಿಲ್ಲೆಗೆ ಪ್ರಥಮ ಸ್ಥಾನ ಪಡೆದಿದ್ದದರೆ. ಕೊಳ್ಳೇಗಾಲ ತಾಲೂಕು ಶೇ.63.02 ಪಡೆದು 2ನೇ ಸ್ಥಾನ, ಚಾಮರಾಜನಗರ ತಾಲೂಕು ಶೇ.59.20 ಪಡೆದು 3ನೇ ಸ್ಥಾನ, ಯಳಂದೂರು ತಾಲೂಕು ಶೇ.58.08 ಫಲಿತಾಂಶ ಪಡೆದು 4ನೇ ಸ್ಥಾನ ಗಳಿಸಿದ್ದರೆ, ಹನೂರು ತಾಲೂಕು ಶೇ.57.74 ರಷ್ಟು ಫಲಿತಾಂಶ ಪಡೆದು ಕೊನೆಯ ಸ್ಥಾನ ಗಳಿಸಿದೆ.

ಶ್ರೀ ವಾಸವಿ ವಿದ್ಯಾಕೇಂದ್ರ ಶೇ.92 ಫಲಿತಾಂಶ



ಶರ್ಮಿಳ

ಕೊಳ್ಳೇಗಾಲ: ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಕೊಳ್ಳೇಗಾಲ ಪಟ್ಟಣದ ಶ್ರೀ ವಾಸವಿ ವಿದ್ಯಾಕೇಂದ್ರ ಶೇ.92ರಷ್ಟು ಫಲಿತಾಂಶ ಗಳಿಸಿದ್ದು ಸಂಸ್ಥೆಯ ವಿದ್ಯಾರ್ಥಿನಿ ಶರ್ಮಿಳ (625 ಅಂಕಗಳಿಗೆ 618 ಅಂಕಗಳಿಸಿ ತಾಲೂಕಿಗೆ ಪ್ರಥಮ ಸ್ಥಾನಕ್ಕೆ ಬಾಜನರಾಗಿದ್ದಾರೆ. ಬಿ.ಬಿ. ಶಫೀಯಾ (615 ಅಂಕ), ಶ್ರೀಶಾ (611), ಮಾನಸ (609), ಅಕ್ಷರಸ್ವಾಮಿ (606), ಹರಿಪ್ರಿಯಾ (599), ಅಜಯ್ (596) ಅಂಕಗಳಿಸಿ ಸಾಧನೆಗೈದಿದ್ದು ಪ್ರಥಮ ಭಾಷೆಕನ್ನಡ ವಿಷಯದಲ್ಲಿ 125ಕ್ಕೆ 125 ಅಂಕಗಳನ್ನು ಶರ್ಮಿಳ ಆರ್. ಮಾನಸಗಳಿಸಿದ್ದಾರೆ.

ಎಂ.ಹರ್ಷಿಣಿ ಜಿಲ್ಲೆಗೆ ಟಾಪರ್

ಗುಂಡ್ಲುಪೇಟೆ: ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಸರ್ಕಾರಿ ಆದರ್ಶ ವಿದ್ಯಾಲಯದ ವಿದ್ಯಾರ್ಥಿ 625ಕ್ಕೆ 620 ಅಂಕಗಳಿಸಿ ಜಿಲ್ಲಾ ಟಾಪರ್ ಆಗಿ ಹೊರಹೊಮ್ಮಿದ ಹರ್ಷಿಣಿ ಬಡ ಮಧ್ಯಮ ವರ್ಗದ ಕುಟುಂಬದ ಹಿನ್ನೆಲೆಯ ವಿದ್ಯಾರ್ಥಿನಿ.

ತಂದೆ ರಾಜು ಚಾಮುಂಡೇಶ್ವರಿ ದೇವಾಲಯದ ಬಳಿ ತಮ್ಮ ಮನೆಯಲ್ಲಿಯೇ ಟೈಲರಿಂಗ್ ಮಾಡುತ್ತಿದ್ದರೆ, ತಾಯಿ ಎಸ್. ಮೋನಿಷಾ ಗೃಹಿಣಿ. ಈಕೆಯ ಸಹೋದರ ಸೃಜನ್ ಸಹ ಇದೇ ಶಾಲೆಯಲ್ಲಿ 8ನೇ ತರಗತಿಯ ವಿದ್ಯಾರ್ಥಿಯಾಗಿದ್ದಾನೆ.

ಟೈಲರಿಂಗ್‌ನಲ್ಲಿ ಬದುಕು ಕಾಣುತ್ತಿರುವ ತಂದೆಯ ಸಂಪಾದನೆಯಿಂದ ಟ್ಯೂಷನ್ ಪಡೆದುಕೊಳ್ಳುವುದು ಕಷ್ಟವಾಗಿದ್ದರಿಂದ ಯಾವುದೇ ಟ್ಯೂಷನ್ ಪಡೆದುಕೊಳ್ಳದೆ ಸ್ವಂತ ಪರಿಶ್ರಮದಿಂದ ಅಧ್ಯಯನ ಮಾಡಿದ್ದೆ ಟಾಪರ್ ಆಗಲು ಸಹಾಯವಾಗಿದೆ. ಪ್ರತಿ ದಿನ ಶಾಲೆಯಲ್ಲಿ ಮಾಡಿದ ಪಾಠವನ್ನು ಅದೇ ದಿನ ಮನೆಯಲ್ಲಿ ಅಭ್ಯಾಸ ಮಾಡಿದ್ದು ಪರೀಕ್ಷೆ ಎರಡು ತಿಂಗಳಿರುವಾಗ ಬೆಳಗ್ಗೆ 5 ಗಂಟೆಗೆ ಎದ್ದು ಅಭ್ಯಾಸ ಮಾಡುತ್ತಿದ್ದೆ. ಯಾವುದೇ ಪಾಠ ಅರ್ಥವಾಗದಿದ್ದರೆ ಶಿಕ್ಷಕರಿಂದ ಮತ್ತೆ ಕೇಳಿ ತಿಳಿದುಕೊಳ್ಳುತ್ತಿದ್ದೆ. ರಾತ್ರಿ 10 ಗಂಟೆಯವರೆಗೂ ಓದುತ್ತಿದ್ದರಿಂದ ಎಲ್ಲಾ ವಿಷಯಗಳನ್ನೂ ಮನವರಿಕೆ ಮಾಡಿ ಕೊಳ್ಳಲು ಸಾಧ್ಯವಾಗಿದೆ. ಪಾಲಕರು ಹಾಗೂ ಶಿಕ್ಷಕರ ಸಹಕಾರದಿಂದ ಅತ್ಯುನ್ನತ ದರ್ಜೆ ದೊರಕಿದೆ. ಮುಂದೆ ವೈದ್ಯೆಯಾಗುವ ಆಸೆಯಿದು ಪಿಯುಸಿಯಲ್ಲಿ ವಿಜ್ಞಾನ ವಿಷಯ ಆಯ್ಕೆ ಮಾಡಿಕೊಳ್ಳುತ್ತೇನೆ ಎಂದಳು.



ಗುಂಡ್ಲುಪೇಟೆಯ ಹರ್ಷಿಣಿಗೆ ಪಾಲಕರು ಸಿಹಿ ತಿನ್ನಿಸಿ ಸಂಭ್ರಮಿಸುತ್ತಿದ್ದಾರೆ.


ಗುಂಡ್ಲುಪೇಟೆ ತಾಲೂಕಿಗೆ ಶೇ.65.18 ಫಲಿತಾಂಶ



ರಾಜೇಶ್ವರಿ (615)



ವಿದ್ಯಾಶ್ರೀ (614)



ಚೈತ್ರಶ್ರೀ (614)



ಸಿಂಚನಾ (600).

ಗುಂಡ್ಲುಪೇಟೆ : ಎಸ್‌ಎಸ್‌ಎಲ್‌ಸಿ ವಾರ್ಷಿಕ ಪರೀಕ್ಷೆಯಲ್ಲಿ ತಾಲೂಕಿಗೆ ಶೇ 65.18 ಫಲಿತಾಂಶ ಬಂದಿದೆ. ಈ ಬಾರಿ 2404 ವಿದ್ಯಾರ್ಥಿಗಳಲ್ಲಿ 1214 ಬಾಲಕರು ಹಾಗೂ 1190 ಬಾಲಕಿಯರು ಪರೀಕ್ಷೆ ಬರೆದಿದ್ದರು. ಇವರಲ್ಲಿ 677 ಬಾಲಕರು ಹಾಗೂ 890 ಬಾಲಕಿಯರು ಒಟ್ಟು 1567 ಉತ್ತೀರ್ಣರಾಗಿದ್ದು ಫಲಿತಾಂಶ ಶೇ 65.18 ಬಂದಿದೆ.

20 ಸರ್ಕಾರಿ ಶಾಲೆಗಳ 1298 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದು 964 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. 06 ಸರ್ಕಾರಿ ವಸತಿ ಶಾಲೆಗಳ 246 ವಿದ್ಯಾರ್ಥಿಗಳಲ್ಲಿ 204 ವಿದ್ಯಾರ್ಥಿಗಳು, 14 ಅನುದಾನಿತ ಶಾಲೆಗಳ 579 ವಿದ್ಯಾರ್ಥಿಗಳಲ್ಲಿ 289 ವಿದ್ಯಾರ್ಥಿಗಳು, 10 ಅನುದಾನರಹಿತ ಶಾಲೆಗಳ 527 ವಿದ್ಯಾರ್ಥಿಗಳಲ್ಲಿ 412 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ಪಟ್ಟಣದ ಕ್ರೈಸ್ಟ್ ಪಬ್ಲಿಕ್ ಶಾಲೆ ಶೇ.100 ಫಲಿತಾಂಶ ನೀಡಿದೆ ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಟಿ.ಆರ್.ಸ್ವಾಮಿ ತಿಳಿಸಿದ್ದಾರೆ.



ಯಶವಂತ (552)

ಸರ್ಕಾರಿ ಆದರ್ಶ ವಿದ್ಯಾಲಯದ ವಿದ್ಯಾರ್ಥಿನಿಯರಾದ ಹರ್ಷಿಣಿ 625ಕ್ಕೆ 620 ಅಂಕಗಳು, ರಾಜೇಶ್ವರಿ 615, ವಿದ್ಯಾಶ್ರೀ 614, ಕ್ರೈಸ್ಟ್ ಶಾಲೆಯ ಚೈತ್ರಶ್ರೀ 614 ಅಂಕಗಳಿಸಿ ತಾಲೂಕಿನ 4 ಟಾಪರ್‌ಗಳಾಗಿ ಹೊರಹೊಮ್ಮಿದ್ದಾರೆ. ಪಟ್ಟಣದ ಇಲ್ಲಿನ ಅನುಗ್ರಹ ಫೌಂಡೇಶನ್ ಸಂಯೋಜಕ ಕೆ.ರಮೇಶ್ ಮತ್ತು ಶಿಕ್ಷಕಿ ಜಿ.ಅನುಸುಯ ಅವರ ಪುತ್ರಿ ಖಾಸಗಿ ಆದರ್ಶ ಶಾಲೆಯ ವಿದ್ಯಾರ್ಥಿನಿ ಸಿಂಚನಾ .ಆರ್ 625ಕ್ಕೆ 600 ಅಂಕಗಳನ್ನು ಪಡೆದರೆ, ಗುಂಡ್ಲುಪೇಟೆ ಸರ್ಕಾರಿ ಆದರ್ಶ ವಿದ್ಯಾಲಯದ ವಿದ್ಯಾರ್ಥಿ, ಚಿಕ್ಕತುಪ್ಪೂರು ಎಂ.ಮಲ್ಲು ಮತ್ತು ತಾಯಮ್ಮಣ್ಣಿ ಅವರ ಮಗ ಯಶವಂತಕುಮಾರ್ ಸಿ.ಎಂ. 625ಕ್ಕೆ 552 ಅಂಕಗಳನ್ನು ಗಳಿಸಿದ್ದಾರೆ.

ಮದ್ದಾನೇಶ್ವರ ಪಬ್ಲಿಕ್ ಸ್ಕೂಲ್‌ಗೆ ಭೂಮಿಪೂಜೆ



ಗುಂಡ್ಲುಪೇಟೆ: ಪಟ್ಟಣದ ಹೊರವಲಯದಲ್ಲಿ ಮದ್ದಾನೇಶ್ವರ ಪಬ್ಲಿಕ್ ಸ್ಕೂಲ್ ನಿರ್ಮಾಣ ಕಾಮಗಾರಿಗೆ ಶಾಸಕ ಹೆಚ್.ಎಂ. ಗಣೇಶ್ ಪ್ರಸಾದ್ ಹಾಗೂ ಮಾಜಿ ಶಾಸಕ ಸಿ.ಎಸ್.ನಿರಂಜನಕುಮಾರ್ ಭೂಮಿಪೂಜೆ ನೆರವೇರಿಸಿದರು.

ಸಂಸ್ಥೆ ಕಾರ್ಯದರ್ಶಿ ಎಂ.ಸಿ.ಸ್ವಾಮಿ ಮಾತನಾಡಿ, ಮದ್ದಾನೇಶ್ವರ ವಿದ್ಯಾಸಂಸ್ಥೆಯು 7 ವರ್ಷಗಳಿಂದ ಬಡ ಹಾಗೂ ಗ್ರಾಮೀಣ ವಿದ್ಯಾರ್ಥಿಗಳ ಅನುಕೂಲಕ್ಕೆ ಪಟ್ಟಣದಲ್ಲಿ ಪಬ್ಲಿಕ್ ಸ್ಕೂಲ್ ನಡೆಸುತ್ತಿದೆ. ನೂತನ ಕಟ್ಟಡದಲ್ಲಿ ಸುಸಜ್ಜಿತ ಶಾಲೆ ಆರಂಭಿಸಲು ಉದ್ದೇಶಿಸಲಾಗಿದೆ ಎಂದು ಹೇಳಿದರು.

ಪಡಗೂರು ಅಡವಿ ಮಠಾಧ್ಯಕ್ಷ ಶಿವಲಿಂಗೇಂದ್ರಸ್ವಾಮೀಜಿ, ಮೂಡಗೂರು ಮಠಾಧ್ಯಕ್ಷ ಇಮ್ಮಡಿ ಉದ್ದಾನೇಶ್ವರಸ್ವಾಮೀಜಿ, ಕಬ್ಬಹಳ್ಳಿ ಮಠದ ಸ್ವಾಮೀಜಿ, ಚಾಮುಲ್ ನಿರ್ದೇಶಕ ನಂಜುಂಡಪ್ರಸಾದ್, ಜಿಪಂ ಮಾಜಿ ಸದಸ್ಯ ಕೆ.ಎಸ್.ಮಹೇಶ್, ಪಿಕಾರ್ಡ್ ಬ್ಯಾಂಕ್ ಮಾಜಿ ಅಧ್ಯಕ್ಷ ಎಸ್.ಎಂ.ಮಲ್ಲಿಕಾರ್ಜುನಸ್ವಾಮಿ ಬಿಜೆಪಿ ಮಂಡಲಾಧ್ಯಕ್ಷ ಮಹದೇವಪ್ರಸಾದ್ ಹಲವರು ಇದ್ದರು.

ಅಲೆಮಾರಿ ಅಭಿವೃದ್ಧಿ ನಿಗಮದ ಅಧ್ಯಕ್ಷೆ ಜಿ.ಪಲ್ಲವಿ ಡುಂಗ್ರಿ ಗೆರಾಸಿಯಾರ ಸಮಸ್ಯೆ ಆಲಿಕೆ

ಚಾಮರಾಜನಗರ, ಮೇ 2– ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಲೆಮಾರಿ ಅಭಿವೃದ್ಧಿ ನಿಗಮದ ಅಧ್ಯಕ್ಷೆ ಜಿ. ಪಲ್ಲವಿ ಗುಂಡ್ಲುಪೇಟೆಯ ಡುಂಗ್ರಿ ಗೆರಾಸಿಯಾ ಸಮುದಾಯ ಜನರು ವಾಸಿಸುವ ಸ್ಥಳ ವೀಕ್ಷಿಸಿ ಸಮುದಾಯದ ಕುಂದುಕೊರತೆ ಆಲಿಸಿದರು.

ಪಟ್ಟಣದ ಹೊರವಲಯದಲ್ಲಿರುವ ಪೆಂಜನಹಳ್ಳಿ ಬಳಿ ನಿನ್ನೆ ಡುಂಗ್ರಿ ಗೆರಾಸಿಯಾ ಸಮುದಾಯದ ಕುಟುಂಬಗಳ ಜನಜೀವನ ವೀಕ್ಷಣೆ ಮಾಡಿದ ಅವರು ಅಲ್ಲಿಯೇ ಇರುವ ಅಂಗನವಾಡಿ ಕಟ್ಟಡದ ಬಳಿ ಸಮುದಾಯದ ಸಭೆ ನಡೆಸಿ ಸಮಸ್ಯೆಗಳನ್ನು ಪರಾಮರ್ಶಿಸಿದರು.

ಗುಂಡ್ಲುಪೇಟೆ ಪಟ್ಟಣದಿಂದ ಇಲ್ಲಿಗೆ ಸಾರಿಗೆ ಬಸ್ ವ್ಯವಸ್ಥೆ ಇಲ್ಲದೆ ಇಲ್ಲಿನ ಮಕ್ಕಳು ಶಾಲೆಗೆ ಹೋಗಲು ಸಾಧ್ಯವಾಗುತ್ತಿಲ್ಲ. ಮುಖ್ಯವಾಗಿ ಆಹಾರದ ಸಮಸ್ಯೆ ಇರುವುದರಿಂದ ಸಂಚಾರಿ ನ್ಯಾಯಬೆಲೆ ಅಂಗಡಿ ವ್ಯವಸ್ಥೆಬೇಕು. ಸರ್ಕಾರದ ಸೌಲಭ್ಯ ಪಡೆಯಲು ಗುರುತಿನ ಚೀಟಿಗಳಿಲ್ಲ. ಸಮುದಾಯ ವಾಸಿಸುವ ಸ್ಥಳದಲ್ಲಿ ಕಾಡುಪ್ರಾಣಿಗಳು ವಿಷಜಂತುಗಳ ಹಾವಳಿ ಇದೆ. ಶೌಚಾಲಯಗಳ ಅಗತ್ಯವಿದೆ. ಉನ್ನತ ವ್ಯಾಸಂಗ ಮಾಡುವವರಿಗೆ ಶೈಕ್ಷಣಿಕ ಸಾಲ ಅವಶ್ಯವಾಗಿದೆ ಎಂಬುದು ಸೇರಿದಂತೆ ಸಭೆಯಲ್ಲಿ ಹಲವು ಸಮಸ್ಯೆಗಳನ್ನು ಸಮುದಾಯದ ಜನರು ನಿಗಮದ ಅಧ್ಯಕ್ಷರ ಬಳಿ ನಿವೇದಿಸಿಕೊಂಡರು.




ಗುಂಡ್ಲುಪೇಟೆಯ ಡುಂಗ್ರಿ ಗೆರಾಸಿಯಾ ಸಮುದಾಯ ಜನರು ವಾಸಿಸುವ ಸ್ಥಳಕ್ಕೆ ನಿಗಮದ ಅಧ್ಯಕ್ಷೆ ಜಿ. ಪಲ್ಲವಿ ಭೇಟಿ ನೀಡಿ ಪರಿಸ್ಥಿತಿಯನ್ನು ವೀಕ್ಷಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಜಿ. ಪಲ್ಲವಿ ಶಿಕ್ಷಣ ಪ್ರತಿಯೊಬ್ಬರ ಸಂವಿಧಾನಬದ್ಧ ಹಕ್ಕು ಆಗಿದೆ. ತಮ್ಮ ಮಕ್ಕಳು ಚಿಂದಿ ಹಾಯುವುದನ್ನೆ ಅನುಸರಿಸದಂತೆ ಪೋಷಕರು ನಿಗಾವಹಿಸಬೇಕು ಎಂದ ಅವರು ಪ್ರತಿದಿನ 2 ಬಾರಿ ಡುಂಗ್ರಿ ಗೆರಾಸಿಯಾ ಸಮುದಾಯ ವಾಸಿಸುವ ಸ್ಥಳಕ್ಕೆ ಬಸ್ ವ್ಯವಸ್ಥೆ ಮಾಡುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ತಹಸೀಲ್ದಾರ್ ರಮೇಶ್ ಬಾಬು, ತಾಲೂಕು ಸಮಾಜ ಕಲ್ಯಾಣಾಧಿಕಾರಿ ಮೋಹನ್ ಕುಮಾರ್, ನೇನೇಕಟ್ಟೆ ಗ್ರಾಪಂ ಅಭಿವೃದ್ಧಿ ಅಧಿಕಾರಿ ಶಿವಸ್ವಾಮಿ, ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ ವ್ಯವಸ್ಥಾಪಕ ಶ್ರೀನಿವಾಸಮೂರ್ತಿ, ಇತರರು ಸಭೆಯಲ್ಲಿ ಉಪಸ್ಥಿತರಿದ್ದರು. ಕುಂದುಕೊರತೆ ಸಭೆಗೂ ಮೊದಲು ಡುಂಗ್ರಿ ಗೆರಾಸಿಯಾ ಸಮುದಾಯ ಜನರು ವಾಸಿಸುವ ಮನೆಗಳು, ರಸ್ತೆ ಇತರೆ ಸ್ಥಳಗಳನ್ನು ವೀಕ್ಷಿಸಿದರು.

ಮಂಗಳೂರಿನಲ್ಲಿ ಹಿಂದೂ ಕಾರ್ಯಕರ್ತ ಸುಹಾಸ್ ಶೆಟ್ಟಿ ಭೀಕರ ಹತ್ಯೆ

• ಮಂಗಳೂರು ಬಂದ್, ಸಾರಿಗೆ ಬಸ್‌ಗೆ ಕಲ್ಲು ತೂರಾಟ • ಸುಹಾಸ್ ಕುಟುಂಬಕ್ಕೆ ಬಿಜೆಪಿಯಿಂದ 25 ಲಕ್ಷ ಪರಿಹಾರ



ಸುಹಾಸ್ ಶೆಟ್ಟಿ

ಮಂಗಳೂರು, ಮೇ.2–ಮಂಗಳೂರಿನ ಬಜ್ಪೆ ಕಿನ್ನಿಪದವು ಬಳಿ ಹಿಂದೂ ಸಂಘಟನೆ ಕಾರ್ಯಕರ್ತ ಸುಹಾಸ್ ಶೆಟ್ಟಿ ಅವರನ್ನು, ಅಪರಿಚಿತ ಗುಂಪೊಂದು ಭೀಕರವಾಗಿ ಕೊಲೆ ಮಾಡಿದ ಘಟನೆ ಗುರುವಾರ ರಾತ್ರಿ ನಡೆದಿದೆ.

ಸುಹಾಸ್ ಶೆಟ್ಟಿ ಗುರುವಾರ ರಾಶತ್ರಿ 8.30ರ ಸುನಾರಿನಲ್ಲಿ ತನ್ನ ಸ್ನೇಹಿತರಾದ ಸಂಜಯ್, ಪ್ರಜ್ವಲ್, ಅನ್ವಿತ್, ಲತೀಶ್ ಮತ್ತು ಶಶಾಂಕ್ ಅವರೊಂದಿಗೆ ಇನ್ನೋವಾ ಕಾರಿನಲ್ಲಿ (ಕೆಎ–12–ಎಂಬಿ–3731) ಪ್ರಯಾಣಿಸುತ್ತಿದ್ದಾಗ್ಗ ಸ್ವಿಫ್ಟ್ ಕಾರು ಮತ್ತು ಪಿಕಪ್ ವಾಹನದಲ್ಲಿಬಂದ ದುಷ್ಕರ್ಮಿಗಳ ಗುಂಪು ಇವರನ್ನು ಅಡ್ಡಗಟ್ಟಿ ಸುಹಾಶ್ ಶೆಟ್ಟಿ ಮೇಲೆ ಮಾರಕಾಯುಧಗಳಿಂದ ಹಲ್ಲೆ ನಡೆಸಿ ಗಂಭೀರ ಗಾಯಗಳನ್ನುಂಟು ಮಾಡಿತು. ಅವರನ್ನು ತಕ್ಷಣ ಎಜೆ ಆಸ್ಪತ್ರೆಗೆ ಸಾಗಿಸಲಾಯಿತಾದರೂ ಅಷ್ಟರಲ್ಲಿ ಅವರು ಮೃತಪಟ್ಟಿದ್ದರು.

ಹಿಂದೂ ಕಾರ್ಯಕರ್ತ ಪ್ರವೀಣ್ ನೆಟ್ಟಾರು ಹತ್ಯೆಯ ಪ್ರತೀಕಾರವಾಗಿ 2022ರ ಜುಲೈ 28 ರಂದು ಸುರತ್ಕಲ್‌ನಲ್ಲಿ ಫಾಜಿಲ್‌ನನ್ನು ಕಡಿದು ಕೊಲೆ ಮಾಡಿದ್ದ ಪ್ರಕರಣದಲ್ಲಿ ಪ್ರಮುಖ ಸುಹಾಸ್ ಆರೋಪಿಯಾಗಿದ್ದ.

ಸುಹಾಸ್ ಶೆಟ್ಟಿ ಹತ್ಯೆ ಖಂಡಿಸಿ ವಿಎಚ್‌ಪಿ ನೀಡಿದ ಬಂದ್ ಕರೆ ಮತ್ತು ಜಿಲ್ಲಾಡಳಿತ ನಿಷೇಧಾಜ್ಞೆ ಜಾರಿಗೊಳಿಸಿದ್ದರೂ ಹಿನ್ನೆಲೆಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಬಹುತೇಕ ಭಾಗಗಳಲ್ಲಿ ಶುಕ್ರವಾರ ಬಂದ್ ವಾತಾವರಣವಿತ್ತು.

ಹಂಪನಕಟ್ಟೆ, ಸೆಂಟ್ರಲ್ ಮಾರ್ಕೆಟ್, ಫಳ್ನೀರ್, ಬಲ್ಮಠ, ಕಂಕನಾಡಿ, ಉರ್ವಾ, ಫರಂಗಿಪೇಟೆ, ಬಜ್ಪೆ, ಉಳ್ಳಾಲ, ಗುರುಪುರ, ಸುರತ್ಕಲ್, ಗಂಜಿಮಠ, ಕಿನ್ನಿಗೋಳಿ ಮತ್ತು ಮುಲ್ಕಿಯಂತಹ ಪ್ರದೇಶಗಳು ಸಂಪೂರ್ಣವಾಗಿ ಬಂದ್ ಆಗಿದ್ದವು.

ಪಂಪ್‌ವೆಲ್ ಮತ್ತು ಕಂಕನಾಡಿ ಪ್ರದೇಶಗಳ ಬಳಿ ಕೆಲವು ಬಸ್‌ಗಳ ಮೇಲೆ ಕಲ್ಲು ತೂರಾಟ ನಡೆಸಿದ ನಂತರ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ (ಕೆಎಸ್‌ಆರ್‌ಟಿಸಿ) ಉಪನಗರ ಪ್ರದೇಶಗಳಿಗೆ ಬಸ್ ಸೇವೆ ಸ್ಥಗಿತಗೊಳಿಸಿತ್ತು.

ಇಂದು ಬೆಳಗ್ಗೆ ಉಪನಗರ ಕೇಂದ್ರಗಳಿಂದ ಮಂಗಳೂರು ನಗರಕ್ಕೆ ಹೋಗುವ ದಾರಿಯಲ್ಲಿ ತಮ್ಮ ನಾಲ್ಕು ಬಸ್ ಗಳ ಮೇಲೆ ಕಲ್ಲು ತೂರಾಟ ನಡೆಸಲಾಗಿದೆ ಎಂದು ಕೆಎಸ್‌ಆರ್‌ಟಿಸಿ ವಿಭಾಗೀಯ ನಿಯಂತ್ರಕ ರಾಜೇಶ್ ಶೆಟ್ಟಿ ಅವರು ತಿಳಿಸಿದ್ದಾರೆ. ಘಟನೆಯ ನಂತರ, ಪೊಲೀಸರು ಮಂಗಳೂರು ನಗರ ಪೊಲೀಸ್ ವ್ಯಾಪ್ತಿಯಲ್ಲಿ ಭಾರತೀಯ ನಾಗರಿಕ ಸುರಕ್ಷಾ ಸಂಹಿತದ ಸೆಕ್ಷನ್ 163 ರ ಅಡಿಯಲ್ಲಿ ನಿಷೇಧಾಜ್ಞೆ ಜಾರಿಗೊಳಿಸಿದ್ದಾರೆ.

ಸುಹಾಸ್ ಕುಟುಂಬಕ್ಕೆ ಬಿಜೆಪಿಯಿಂದ 25 ಲಕ್ಷ ಪರಿಹಾರ: ಸುಹಾಸ್ ಶೆಟ್ಟಿ ಕುಟುಂಬಕ್ಕೆ 25 ಲಕ್ಷ ಪರಿಹಾರ ನೀಡುವುದಾಗಿ ರಾಜ್ಯ ಬಿಜೆಪಿ ಅಧ್ಯಕ್ಷ ಬಿವೈ ವಿಜಯೇಂದ್ರ ಘೋಷಣೆ ಮಾಡಿದ್ದಾರೆ.

ಮೃತ ಸುಹಾಸ್ ಶೆಟ್ಟಿ ಅಂತಿಮ ದರ್ಶನದ ಬಳಿಕ ಮಾತನಾಡಿದ ಅವರು, ಕಾಶ್ಮೀರ ಪಹಲ್ಗಾಮ್ ಹತ್ಯೆ ಮರೆಯುವ ಮೊದಲೇ ಮಂಗಳೂರಿನಲ್ಲಿ ಘಟನೆ ನಡೆದಿರುವುದು ಖಂಡನಾರ್ಹ. ಬಿಜೆಪಿ ಈ ಘಟನೆಯನ್ನು ಬಹಳ ಗಂಭೀರವಾಗಿ ತೆಗೆದುಕೊಂಡಿದೆ. ಪೊಲೀಸ್ ಇಲಾಖೆ ವೈಫಲ್ಯ ಮೇಲ್ನೋಟಕ್ಕೆ ಕಂಡು ಬರುತ್ತಿದೆ. ಜೀವಕ್ಕೆ ರಕ್ಷಣೆ ನೀಡದಿರುವುದು ಪೊಲೀಸರ ವೈಫಲ್ಯ ಎಂದು ಹೇಳಿದರು.

ಸುಹಾಸ್ ಶೆಟ್ಟಿ ಕುಟುಂಬಕ್ಕೆ ಪಕ್ಷದ ಪರವಾಗಿ 25 ಲಕ್ಷ ಪರಿಹಾರ ನೀಡುವ ತೀರ್ಮಾನ ಮಾಡಿದ್ದೇವೆ. ಮುಖ್ಯಮಂತ್ರಿ, ಗೃಹಸಚಿವರು ಘಟನೆಯ ಗಂಭೀರತೆ ಅರ್ಥ ಮಾಡಿಕೊಳ್ಳಬೇಕು. ಸರ್ಕಾರದಿಂದ ಪರಿಹಾರ ನೀಡಬೇಕು. ಈ ಪ್ರಕರಣದ ತನಿಖೆಯನ್ನು ರಾಷ್ಟ್ರೀಯ ತನಿಖಾ ದಳ ನಡೆಸಬೇಕು ಎಂದು ಆಗ್ರಹಿಸಿದರು.

ಆರೋಪಿಗಳ ಪತ್ತೆಗೆ 4 ತಂಡ, ಶಾಂತಿ ಕಾಪಾಡಲು ಡಾ.ಜಿ.ಪರಮೇಶ್ವರ್ ಮನವಿ: ಹಿಂದೂ ಸಂಘಟನೆ ಕಾರ್ಯಕರ್ತ ಸುಹಾಸ್ ಹತ್ಯೆ ಪ್ರಕರಣವನ್ನು ರಾಜ್ಯ ಸರ್ಕಾರ ಗಂಭೀರವಾಗಿ ಪರಿಗಣಿಸಿದ್ದು, ಆರೋಪಿಗಳ ಪತ್ತೆ 4 ತಂಡಗಳನ್ನು ರಚಿಸಲಾಗಿದೆ. ಮಂಗಳೂರಿನಲ್ಲಿ ಭದ್ರತೆ ಹೆಚ್ಚಿಸಲಾಗಿದ್ದು, ಜನತೆ ಶಾಂತಿ ಕಾಪಾಡಬೇಕೆಂದು ಗೃಹ ಸಚಿವ ಪರಮೇಶ್ವರ್ ಅವರು ಶುಕ್ರವಾರ ಮನವಿ ಮಾಡಿದ್ದಾರೆ.

ಯಾರು ಈ ಕೆಲಸ ಮಾಡಿದ್ದಾರೆ ಅವರನ್ನು ಯಾವುದೇ ಕಾರಣಕ್ಕೂ ಸುಮ್ಮನೆ ಬಿಡುವುದಿಲ್ಲ. ದಕ್ಷಿಣ ಕನ್ನಡ ಜಿಲ್ಲೆಯ ಜನರು ಶಾಂತಿ ಕಾಪಾಡಬೇಕು. ಸರ್ಕಾರ ನಿಮ್ಮ ಜೊತೆಗಿದೆ. ಪೊಲೀಸ್ ಇಲಾಖೆಯೂ ನಿಮ್ಮ ಜೊತೆಗಿದೆ. ಈಗಾಗಲೇ ಹಿರಿಯ ಅಧಿಕಾರಿಗಳನ್ನು ನಿಯೋಜನೆ ಮಾಡಲಾಗಿದೆ. ಯಾವುದೇ ಅಹಿತಕರ ಘಟನೆ ಆಗಬಾರದು. ಘಟನೆಯ ಬಗ್ಗೆ ವರದಿ ಕೇಳಲಾಗಿದೆ ಎಂದರು.

ಆಯುಕ್ತರ ನೇತೃತ್ವದಲ್ಲಿ ಮೈಸೂರಲ್ಲಿ ಪೊಲೀಸರ 'ಸಿಟಿ ರೌಂಡ್ಸ್'



ಮೈಸೂರು, ಮೇ 2(ಎಂಕೆ)– ಕೇಂದ್ರ ಸರ್ಕಾರ ಅಂಗೀಕರಿಸಿರುವ ವಕ್ಫ್ ತಿದ್ದುಪಡಿ ಕಾಯ್ದೆ 2025ರ ವಿರುದ್ಧ ನಾಳೆ(ಮೇ 3) ಮಧ್ಯಾಹ್ನ 3 ಗಂಟೆಯಿಂದ ಸಂಜೆ 6 ರವರೆಗೆ ಮೈಸೂರಿನ ತಿಲಕ್ ನಗರದ ಈದ್ಗಾ ಮೈದಾನದಲ್ಲಿ ವಿವಿಧ ಸಂಘಟನೆಗಳಿಂದ ಹಮ್ಮಿಕೊಂಡಿರುವ ಪ್ರತಿಭಟನೆ ಹಿನ್ನಲೆಯಲ್ಲಿ ಶುಕ್ರವಾರ ಸಂಜೆ ನಗರ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್ ನೇತೃತ್ವದಲ್ಲಿ ಸಿಟಿ ರೌಂಡ್ ನಡೆಸಲಾಯಿತು.

ನಗರದಲ್ಲಿ ಎಲ್ಲಾ ಸಂಚಾರ ಹಾಗೂ ಎಲ್ ಅಂಡ್ ಓ ಪೊಲೀಸ್ ಠಾಣೆಯ ಸಬ್‌ಇನ್ಸ್‌ಸೆಕರ್ ಇನ್ಸ್‌ಸ್ಪೆಕ್ಟರ್‌ಗಳು, ಎಸಿಪಿ ಹಾಗೂ ಡಿಸಿಗಳು ಸೇರಿದಂತೆ ಹಿರಿಯ ಪೊಲೀಸ್ ಅಧಿಕಾರಿಗಳನ್ನೊಳಗೊಂಡಂತೆ ಮಂಡಿ, ನರಸಿಂಹರಾಜ ಹಾಗೂ ಉದಯಗಿರಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ವಾಹನಗಳ ಮೂಲಕ ರೂಟ್ ಮಾರ್ಚ್ ನಡೆಸಲಾಯಿತು.

ನಗರದಲ್ಲಿ ಶಾಂತಿ, ಸುವ್ಯವಸ್ಥೆ ಕಾಪಾಡುವ ನಿಟ್ಟಿನಲ್ಲಿ ಹಾಗೂ ಸಾರ್ವಜನಿಕರಲ್ಲಿ ಧೈರ್ಯ ತುಂಬುವ ನಿಟ್ಟಿನಲ್ಲಿ 80ಕ್ಕೂ ಹೆಚ್ಚು ಮಂದಿ ಸಬ್ ಇನ್ಸ್‌ಸ್ಪೆಕ್ಟರ್, ಎಲ್ಲಾ ಪೊಲೀಸ್ ಪೊಲೀಸ್ ಠಾಣೆಯ ಇನ್ಸ್‌ಸ್ಪೆಕ್ಟರ್, ಎಸಿಪಿ ಮತ್ತು ಡಿಸಿಪಿಗಳನ್ನೊಳಗೊಂಡು ಹಿರಿಯ ಪೊಲೀಸ್ ಅಧಿಕಾರಿಗಳು ಸೇರಿದಂತೆ ಪ್ರಮುಖ ರಸ್ತೆಗಳು, ಈದ್ಗಾ ಮೈದಾನದ ಸುತ್ತಲೂ ವಾಹನಗಳ ಮೂಲಕ ರೌಂಡ್ಸ್ ನಡೆಸಲಾಯಿತು ಎಂದು ನಗರ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಎಸ್‌ಎಸ್‌ಎಲ್‌ಸಿ ಫಲಿತಾಂಶ ಪ್ರಕಟ

ಜಿಲ್ಲೆಗೆ ನಂಜನಗೂಡು 3ನೇ ಸ್ಥಾನ

624 ಅಂಕ ಪಡೆದ ಪಿ.ಸಾಯಿ ದೀಕ್ಷಿತ ತಾಲೂಕಿಗೆ ಪ್ರಥಮ

ನಂಜನಗೂಡು, ಮೇ 2– ಪ್ರಸಕ್ತ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ನಂಜನಗೂಡು ತಾಲೂಕು ಶೇ.71.26 ರಷ್ಟು ಫಲಿತಾಂಶ ಪಡೆಯುವ ಮೂಲಕ ಜಿಲ್ಲೆಗೆ 3ನೇ ಸ್ಥಾನ ಗಳಿಸಿದೆ.

ತಾಲೂಕಿನಲ್ಲಿ ಪರೀಕ್ಷೆ ಬರೆದಿದ್ದ 2348 ಬಾಲಕರು ಹಾಗೂ 2315 ಬಾಲಕಿಯರೂ ಸೇರಿದಂತೆ ಒಟ್ಟು 4663 ವಿದ್ಯಾರ್ಥಿಗಳ ಪೈಕಿ 1427 ಬಾಲಕರು ಹಾಗೂ 1896 ಬಾಲಕಿಯರು ಸೇರಿದಂತೆ ಒಟ್ಟು 3323 ವಿದಾರ್ಥಿಗಳು ತೇರ್ಗಡೆಯಾಗಿದ್ದಾರೆ. ಪರೀಕ್ಷೆಯಲ್ಲಿ 921 ಬಾಲಕರು ಹಾಗೂ 419 ಬಾಲಕಿಯರು ಸೇರಿದಂತೆ ಒಟ್ಟು 1340 ಮಂದಿ ಅನುತ್ತೀರ್ಣರಾಗಿದ್ದಾರೆ ಎಂದು ಶಿಕ್ಷಣ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

ಕಾರ್ಮೆಲ್ ಶಾಲೆ ವಿದ್ಯಾರ್ಥಿಗಳ ಅತ್ಯುತ್ತಮ ಸಾಧನೆ: ನಂಜನಗೂಡಿನ ಕಾರ್ಮೆಲ್ ಆಂಗ್ಲ ಮಾಧ್ಯಮ ಶಾಲೆ ವಿದ್ಯಾರ್ಥಿನಿ ಪಿ.ಸಾಯಿ ದೀಕ್ಷಿತ 624 ಅಂಕ ಪಡೆಯುವ ಮೂಲಕ ತಾಲೂಕಿಗೆ ಪ್ರಥಮ ಸ್ಥಾನ ಪಡೆದಿದ್ದು, ಉಳಿದಂತೆ ಶಾಲೆಯ 22 ವಿದ್ಯಾರ್ಥಿಗಳು 600ಕ್ಕೂ ಹೆಚ್ಚು ಅಂಕಗಳನ್ನು ಪಡೆದಿದ್ದಾರೆ. 45 ಮಂದಿ ಅತ್ಯುನ್ನತ ದರ್ಜೆ ಹಾಗೂ 48 ಮಂದಿ ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾಗಿದ್ದಾರೆ. ಇನ್ನು ತಾಲೂಕಿಗೆ ಪ್ರಥಮ ಸ್ಥಾನ ಪಡೆದ ವಿದ್ಯಾರ್ಥಿನಿ ಪಿ.ಸಾಯಿ ದೀಕ್ಷಿತರನ್ನು ಕ್ಷೇತ್ರ ಶಿಕ್ಷಣಾಧಿಕಾರಿ ಮಹೇಶ್ ಭೇಟಿ ಮಾಡಿ ಅಭಿನಂದನೆ ಸಲ್ಲಿಸಿದರು.

ಶಾಲೆ ವಿದ್ಯಾರ್ಥಿಗಳ ಸಾಧನೆಗೆ ಮುಖ್ಯೋಪಾಧ್ಯಾಯಿನಿ ಕ್ಯಾರಾಲೀನಾ, ಶಿಕ್ಷಕರಾದ ಮಹದೇವ ಪ್ರಸಾದ್ ಅಭಿನಂದನೆ ಸಲ್ಲಿಸಿದ್ದಾರೆ.



ಪ್ರಥಮ ಸ್ಥಾನ ಪಡೆದ ವಿದ್ಯಾರ್ಥಿನಿ ಪಿ.ಸಾಯಿ ದೀಕ್ಷಿತರನ್ನು ಬಿಇಓ ಮಹೇಶ್ ಅಭಿನಂದಿಸಿದರು.

ಸಿಟಿಜೆನ್ ಶಾಲೆ ವಿದ್ಯಾರ್ಥಿನಿಗೆ 621 ಅಂಕ: ನಗರದ ಸಿಟಿಜೆನ್ ಆಂಗ್ಲ ಮಾಧ್ಯಮ ಶಾಲೆ ವಿದ್ಯಾರ್ಥಿನಿ ಎಸ್.ಸ್ಫೂರ್ತಿ 621 ಅಂಕ ಪಡೆಯುವ ಮೂಲಕ ಶಾಲೆಗೆ ಪ್ರಥಮ ಸ್ಥಾನ ಪಡೆದಿದ್ದಾಳೆ. ಈಕೆ ಕನ್ನಡ 125, ಇಂಗ್ಲಿಷ್ 100, ಹಿಂದಿ 96, ಗಣಿತ 100, ವಿಜ್ಞಾನ 100 ಹಾಗೂ ಸಮಾಜ ವಿಜ್ಞಾನದಲ್ಲಿ 100 ಅಂಕಗಳನ್ನು ಪಡೆದಿದ್ದಾಳೆ.

ಚಿನ್ಮಯಿ.ಬಿ 614 ಅಂಕ ಪಡೆದು ದ್ವಿತೀಯ ಸ್ಥಾನ ಪಡೆದಿದ್ದರೆ, ಧನುಶ್ರೀ ಕೆ.ಎನ್ 613 ಅಂಕ ಪಡೆದು ತೃತೀಯ ಸ್ಥಾನ ಪಡೆದಿದ್ದಾಳೆ. ಉಳಿದಂತೆ ಶಾಲೆಯ 6 ಮಂದಿ ವಿದ್ಯಾರ್ಥಿಗಳು 600ಕ್ಕಿಂತ ಹೆಚ್ಚು ಅಂಕ ಪಡೆದಿದ್ದು, 46 ಮಂದಿ ಅತ್ಯುತ್ತಮ ಹಾಗೂ 77 ಮಂದಿ ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾಗಿರುತ್ತಾರೆ. ಸಾಧಕ ವಿದ್ಯಾರ್ಥಿಗಳನ್ನು ಶಾಲೆ ಆಡಳಿತ ಮಂಡಳಿ ಅಭಿನಂದಿಸಿದೆ.

❛ ನಿತ್ಯ 5 ಗಂಟೆ ಅಭ್ಯಾಸ ಮಾಡುವ ಮೂಲಕ ಪರೀಕ್ಷೆಗೆ ತಯಾರಾಗಿದ್ದೆ. ಜೊತೆಗೆ ಶಿಕ್ಷಕರು ಪರೀಕ್ಷೆ ಎದುರಿಸಲು ಅಗತ್ಯ ಮಾರ್ಗದರ್ಶನ ನೀಡಿದ್ದರಿಂದ ಉತ್ತಮ ಅಂಕಗಳಿಸಲು ನೆರವಾಯಿತು. ಭವಿಷ್ಯದಲ್ಲಿ ಇಂಜಿನಿಯರ್ ಆಗುವ ಆಸೆಯಿದೆ. – ಪಿ.ಸಾಯಿ ದೀಕ್ಷಿತ.

ಕೆ.ಆರ್.ನಗರಕ್ಕೆ ಶೇ.64.58ರಷ್ಟು ಫಲಿತಾಂಶ

2826 ವಿದ್ಯಾರ್ಥಿಗಳ ಪೈಕಿ 1825 ಮಂದಿ ಉತ್ತೀರ್ಣ: ಬಿಇಓ ಕೃಷ್ಣಪ್ಪ

ಕೆ.ಆರ್.ನಗರ, ಮೇ 2– ಕಳೆದ ಮಾರ್ಚ್‌ನಲ್ಲಿ ನಡೆದ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಫಲಿತಾಂಶ ಶುಕ್ರವಾರ ಪ್ರಕಟವಾಗಿದ್ದು, ಕೆ.ಆರ್.ನಗರ ವಿಧಾನ ಸಭಾ ಕ್ಷೇತ್ರದ ಸಾಲಿಗ್ರಾಮ ಮತ್ತು ಕೆ.ಆರ್.ನಗರ ತಾಲೂಕುಗಳಿಗೆ ಶೇ.64.58 ರಷ್ಟು ಫಲಿತಾಂಶ ಬಂದಿದೆ ಎಂದು ಬಿಇಓ ಆರ್.ಕೃಷ್ಣಪ್ಪ ತಿಳಿಸಿದರು.

ಪಟ್ಟಣದ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪರೀಕ್ಷೆಗೆ ಹಾಜರಾಗಿದ್ದ 2826 ವಿದ್ಯಾರ್ಥಿಗಳ ಪೈಕಿ 1825 ಮಂದಿ ಉತ್ತೀರ್ಣರಾಗಿದ್ದು, 1001 ಮಂದಿ ಅನುತ್ತೀರ್ಣರಾಗಿದ್ದಾರೆ. ಈ ಪೈಕಿ ಪರೀಕ್ಷೆಗೆ ಹಾಜರಾಗಿದ್ದ 1303 ಬಾಲಕರಲ್ಲಿ 725 ಮಂದಿ ಉತ್ತೀರ್ಣರಾಗಿದ್ದು, ಶೇ.55.64 ಫಲಿತಾಂಶ ಹಾಗೂ 1429 ಬಾಲಕಿಯರಲ್ಲಿ 1097 ಮಂದಿ ಉತ್ತೀರ್ಣರಾಗಿ, ಶೇ.76.77 ರಷ್ಟು ಫಲಿತಾಂಶದೊಂದಿಗೆ ಬಾಲಕಿಯರೇ ಮೇಲುಗೈ ಸಾಧಿಸಿದ್ದಾರೆ ಎಂದರು.

ಎಸ್‌ಎಸ್‌ಎಲ್‌ಸಿ ಪರೀಕ್ಷೆ ಎದುರಿಸಿದ್ದ ಗ್ರಾಮಾಂತರ ಪ್ರದೇಶದ 1906 ವಿದ್ಯಾರ್ಥಿಗಳ ಪೈಕಿ 1232 ಮಂದಿ ಉತ್ತೀರ್ಣರಾಗಿದ್ದು, ನಗರ ವ್ಯಾಪ್ತಿ ಪರೀಕ್ಷೆಗೆ ಹಾಜರಾಗಿದ್ದ 826 ವಿದ್ಯಾರ್ಥಿಗಳ ಪೈಕಿ 590 ಉತ್ತೀರ್ಣರಾಗಿದ್ದಾರೆ. ಕೆ.ಆರ್.ನಗರದ ಬಿ.ಎಸ್. ಮಾದಪ್ಪ ಪ್ರೌಢಶಾಲೆ, ಸಾಲಿಗ್ರಾಮ ತಾಲೂಕಿನ ಕುಪ್ಪಳ್ಳಿ ಗ್ರಾಮದ ಇಂದಿರಾಗಾಂಧಿ ವಸತಿ ಶಾಲೆ ಮತ್ತು ಮಿರ್ಲೆ ಮಿಥಿಲ ಪ್ರೌಢಶಾಲೆಗಳು ಶೇ.100 ರಷ್ಟು ಫಲಿತಾಂಶ ಪಡೆದಿವೆ ಎಂದರು.



ಸುದ್ದಿಗೋಷ್ಠಿಯಲ್ಲಿ ಬಿಇಓ ಆರ್.ಕೃಷ್ಣಪ್ಪ ಮಾತನಾಡಿದರು.

625 ಅಂಕಗಳಿಗೆ ಪಟ್ಟಣದ ಸಂತ ಜೋಸೆಫ್ ಪ್ರೌಢಶಾಲೆಯ ಕೆ.ಆರ್.ಪ್ರಣತಿ 621, ಬಿ.ಎಸ್. ಮಾದಪ್ಪ ವಿದ್ಯಾಸಂಸ್ಥೆಯ ಬಿ.ಜಿ.ಚಂದನ್ 620, ಕಾಳೇನಹಳ್ಳಿ ಆದರ್ಶ ಶಾಲೆಯ ನಮ್ರತಾಬಾಯಿ 617, ಕಾರ್ತಿಕ್ ರಾಜ್ 612, ಜಿ.ಆರ್.ಸಹನ 612, ಸಾಲಿಗ್ರಾಮ ಶಾರದ ವಿದ್ಯಾ ಸಂಸ್ಥೆಯ ಮನೋಜ್ಞ 614 ಅಂಕ ಗಳಿಸಿ ಶಾಲೆಗಳಿಗೆ ಕೀರ್ತಿ ತಂದಿದ್ದಾರೆ ಎಂದರು.


621 ಅಂಕ ಗಳಿಸಿರುವ ಕೆ.ಆರ್.ಪ್ರಣತಿ ಸಾಲಿಗ್ರಾಮ ಮತ್ತು ಕೆ.ಆರ್.ನಗರ ತಾಲೂಕಿಗೆ ಪ್ರಥಮ ಸ್ಥಾನ ಪಡೆದಿದ್ದು, ಕಳೆದ ಸಾಲಿನಲ್ಲಿ 4ನೇ ಸ್ಥಾನದಲ್ಲಿದ್ದ ನಮ್ಮ ತಾಲೂಕು ಈ ಬಾರಿ 5ನೇ ಸ್ಥಾನ ಗಳಿಸಿದ್ದು ಶಾಸಕ ಡಿ.ರವಿಶಂಕರ್ ಮಾರ್ಗದರ್ಶನ ಮತ್ತು ಶಿಕ್ಷಕರ ಸತತ ಪರಿಶ್ರಮದಿಂದ ನಾವು ಈ ಫಲಿತಾಂಶ ಪಡೆಯಲು ಸಾಧ್ಯವಾಗಿದೆ. ಮುಂದಿನ ದಿನಗಳಲ್ಲಿ ಎಲ್ಲರ ಸಹಕಾರದಿಂದ ಮೊದಲ ಸ್ಥಾನಕ್ಕೇರಲು ಪ್ರಾಮಾಣಿಕ ಪ್ರಯತ್ನ ಮಾಡುತ್ತೇವೆಂದು ತಿಳಿಸಿದರು.

ಈ ವೇಳೆ ಸಿಆರ್‌ಪಿ ವಸಂತ್‌ಕುಮಾರ್, ಶಿಕ್ಷಣ ಸಂಯೋಜಕಿ ಪೂರ್ಣಿಮಾ, ದೈಹಿಕ ಪರಿವೀಕ್ಷಕ ಎಂ.ಪಿ.ಕುಮಾರಸ್ವಾಮಿ, ಸಿಬ್ಬಂದಿಗಳಾದ ಧನಂಜಯ್, ಲೋಕೇಶ್, ಲಕ್ಷ್ಮಣೇಗೌಡ ಮತ್ತಿತರರಿದ್ದರು.

ಸಮ ಸಮಾಜ ನಿರ್ಮಾಣಕ್ಕೆ ಶ್ರಮಿಸಿದ ಬಸವಣ್ಣ

ತಿ.ನರಸೀಪುರ, ಮೇ 2– ಬಸವಣ್ಣನವರ ವಚನಗಳು ಸರ್ವಕಾಲಕ್ಕೂ ಪ್ರಸ್ತುತವಾಗಿದ್ದು, ವಚನಗಳ ಸಾರ ಅರ್ಥೈಸಿಕೊಂಡು ಜೀವನದಲ್ಲಿ ಅಳವಡಿಸಿಕೊಂಡಾಗ ಮಾತ್ರ ಸಮಾನತೆಯ ಸಮಾಜ ನಿರ್ಮಾಣ ಸಾಧ್ಯ ಎಂದು ತ್ರಿವೇಣಿ ನಗರ ಅಂಬೇಡ್ಕರ್ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಎನ್.ಮಹೇಶ್ ತಿಳಿಸಿದರು.

ಪಟ್ಟಣದ ತ್ರಿವೇಣಿ ನಗರದ ಮಹಾನಾಯಕ ಸರ್ಕಲ್‌ನಲ್ಲಿ ಆಯೋಜಿಸಿದ್ದ ಬಸವ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಬಸವಣ್ಣನವರು 12ನೇ ಶತಮಾನದಲ್ಲಿ ಸಮ ಸಮಾಜ ನಿರ್ಮಾಣಕ್ಕೆ ಶ್ರಮಿಸಿದರು. ಸಮಾಜದಲ್ಲಿದ್ದ ಅಸಮಾನತೆ ಹೋಗಲಾಡಿಸಿ, ಜಾತಿಬೇಧ ತೊಡೆದು ಹಾಕುವ ನಿಟ್ಟಿನಲ್ಲಿ ಶ್ರಮಿಸಿದರು. ಎಲ್ಲಾ ಸಮುದಾಯವನ್ನು ಸಮಾನವಾಗಿ ಕಾಣುವ ಮೂಲಕ ಬಸವಣ್ಣ ಮಾನವಕುಲಕ್ಕೆ ಸಮಾನತೆಯ ಸಂದೇಶ ಸಾರಿ, ಮಾರ್ಗದರ್ಶನ ನೀಡಿದ್ದಾರೆ ಎಂದರು.



ತ್ರಿವೇಣಿ ನಗರದ ಮಹಾನಾಯಕ ಸರ್ಕಲ್‌ನಲ್ಲಿ ಬಸವ ಜಯಂತಿ ನಡೆಯಿತು.

ಬಸವ ಜಯಂತಿ ಆಚರಿಸಿದರಷ್ಟೇ ಸಾಲದು. ಅವರ ತತ್ವಾದರ್ಶವನ್ನು ಜೀವನದಲ್ಲಿ ನಾವೆಲ್ಲರೂ ಅಳವಡಿಸಿಕೊಳ್ಳಬೇಕು. ಬಸವಣ್ಣರಂತಹ ಮಹಾನ್ ಆದರ್ಶ ಪುರುಷರು ನೀಡಿದ ಮಾರ್ಗದರ್ಶನ ಅತ್ಯಂತ ಮಹತ್ವದ್ದಾಗಿದೆ. ಅವರು ಹಾಕಿಕೊಟ್ಟ ಮಾರ್ಗ ದಲ್ಲಿ ಸಾಗುವ ಮೂಲಕ ಸಮಾಜದಲ್ಲಿನ ಮೌಢ್ಯ ತೊಡೆದು ಹಾಕಲು ಎಲ್ಲರೂ ಪಣ ತೊಡಬೇಕು ಎಂದರು.

ಪುರಸಭೆ ಸ್ಥಾಯಿ ಸಮಿತಿ ಅಧ್ಯಕ್ಷ ಸಿ.ಪ್ರಕಾಶ್ ಮಾತನಾಡಿ, ದಾಸರು, ಶರಣರು ನಮಗೆ ನೀಡಿರುವ ಸಂದೇಶ ಪಾಲಿಸಬೇಕಾಗಿರುವುದು ನಮ್ಮ ಕರ್ತವ್ಯ. ಬಸವಾದಿ ಶರಣರ ಸಂದೇಶಕ್ಕೆ ಮನ್ನಣೆ ನೀಡಿದಾಗ ಸಮಾಜದಲ್ಲಿ ಮೇಲು–ಕೀಳೆಂಬ ಬೇಧ ಭಾವ ಮೂಡುವುದಿಲ್ಲ. ಬಸವಣ್ಣನವರ ವಚನಗಳ ಸಾರಾಂಶ ಅರಿಯಬೇಕು. 'ಇವ ಯಾರವಾ, ಇವ ಯಾರವ, ಇವ ನಮ್ಮವ, ನಮ್ಮವ' ಎನ್ನುವ ಸಾಲು ವಚನಕ್ಕೆ ಮಾತ್ರ ಸೀಮಿತವಾಗದೆ, ಅದು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಸಮಾಜ ಸುಧಾರಣೆಗಾಗಿ ಶ್ರಮಿಸಿದ ಶರಣರನ್ನು ಸ್ಮರಿಸಬೇಕು ಎಂದರು.

ಗೌರವಾಧ್ಯಕ್ಷ ಮಹಾದೇವಯ್ಯ, ಕಾರ್ಯದರ್ಶಿ ಕೆಂಚಪ್ಪ, ಖಜಾಂಚಿ ಶ್ರೀಧರ್, ಸಲಹೆಗಾರ ರಂಗಸ್ವಾಮಿ, ನಿರ್ದೇಶಕರಾದ ಮರಿಸ್ವಾಮಿ, ಪುಟ್ಟರಾಜು, ಬಸವರಾಜು, ಮಿಥುನ್, ಆರ್.ಮಹದೇವಸ್ವಾಮಿ, ಸಿದ್ದರಾಜು, ರಂಗದಾಸಯ್ಯ, ಶಿವಣ್ಣ, ಮಲ್ಲರಾಜು, ಮಹದೇವಮ್ಮ, ಸಂಘದ ನಿರ್ದೇಶಕರು ಮುಖಂಡರು, ಯಜಮಾನರು ಹಾಜರಿದ್ದರು.

ದೇಶ ಕಟ್ಟುವಲ್ಲಿ ಕಾರ್ಮಿಕರ ಪಾತ್ರ ಮಹತ್ವದ್ದು

ಸರಗೂರು, ಮೇ 2– ದೇಶ ಕಟ್ಟುವಲ್ಲಿ ಕಾರ್ಮಿಕರ ಪಾತ್ರ ಮಹತ್ವದ್ದಾಗಿದೆ ಎಂದು ಸಮಾಜ ಸೇವಕ ಎಸ್.ವಿ. ವೆಂಕಟೇಶ್ ತಿಳಿಸಿದರು.

ಪಟ್ಟಣದ ಕಟ್ಟಡ ಕಾರ್ಮಿಕರ ಸಂಘದ ಕಚೇರಿಯಲ್ಲಿ ನಡೆದ ಅಂತರರಾಷ್ಟ್ರೀಯ ಕಾರ್ಮಿಕರ ದಿನಾಚರಣೆ ಉದ್ಘಾಟಿಸಿ ಮಾತನಾಡಿದ ಅವರು ಶ್ರಮಜೀವಿಗಳ ಕೆಲಸ ಗೌರವಿಸುವ ಹಾಗೂ ಅವರ ಕಷ್ಟಗಳನ್ನು ಸ್ಮರಿಸುವ ಸಲುವಾಗಿ ಮೇ 1ರಂದು ಜಾಗತಿಕವಾಗಿ ಅಂತರರಾಷ್ಟ್ರೀಯ ಕಾರ್ಮಿಕರ ದಿನವನ್ನಾಗಿ ಆಚರಿಸಲಾಗುತ್ತದೆ. ಇದನ್ನು ಮೇ ಡೇ, ಲೇಬರ್ ಡೇ ಹಾಗೂ ವರ್ಕರ್ಸ್ ಡೇ ಎಂತಲೂ ಕರೆಯಲಾಗುತ್ತದೆ ಕಾರ್ಮಿಕ ವರ್ಗದ ಶ್ರಮ ಮತ್ತು ಸಮರ್ಪಣೆ ಗುರುತಿಸುವುದು, ಕಾರ್ಮಿಕರ ಹಕ್ಕುಗಳ ಬಗ್ಗೆ ಜಾಗೃತಿ ಮೂಡಿಸುವುದು. ಶೋಷಣೆಯಿಂದ ರಕ್ಷಿಸುವುದು ಈ ದಿನದ ಉದ್ದೇಶವಾಗಿದೆ. ಸರ್ಕಾರದ ಸೌಲಭ್ಯಗಳನ್ನು ಪಡೆದುಕೊಂಡು ಮಕ್ಕಳ ಹಾಗೂ ಕುಟುಂಬದ ನಿರ್ವಹಣೆಗೆ ಮುಂದಾಗಬೇಕು. ನಿಮ್ಮ ಸಂಘಕ್ಕೆ ಕಾರ್ಮಿಕ ಸಚಿವ ಸಂತೋಷ್ ಲಾಡ್ ಜೊತೆ ಮಾತನಾಡಿ ಅನುದಾನ ಕೊಡಿಸುವುದಾಗಿ ಭರವಸೆ ತಿಳಿಸಿದರು.



ಕಾರ್ಯಕ್ರಮಮದಲ್ಲಿ ಸಮಾಜ ಸೇವಕ ಎಸ್.ವಿ.ವೆಂಕಟೇಶ್ ಮಾತನಾಡಿದರು.

ತಾಲೂಕು ತಂಬಾಕು ಮಂಡಳಿ ಸದಸ್ಯ ಪರಶಿವಮೂರ್ತಿ, ತಾಲೂಕು ಕಾರ್ಮಿಕ ನಿರೀಕ್ಷಕಿ ಹರ್ಷಿತ ಆರ್. ಕಾರ್ಮಿಕ ಕಚೇರಿ ಡಿಓ ಪರಶಿವಮೂರ್ತಿ, ಇಟ್ಟಿಗೆ ಮಾಲೀಕರಾದ ದೀಪಕ್ ಕುಮಾರ್ ಮಾತನಾಡಿದರು. ಎಸ್‌ಐ ಕಿರಣ್ ಕುಮಾರ್, ಸಂಘದ ಅಧ್ಯಕ್ಷ ರಾಚಯ್ಯ, ಗೌರವಾಧ್ಯಕ್ಷ ನಂಜುಂಡಶೆಟ್ಟಿ, ಉಪಾಧ್ಯಕ್ಷ ಭೋಗಯ್ಯ, ಪ್ರಧಾನ ಕಾರ್ಯದರ್ಶಿ ಎಸ್.ಬಿ.ರಮೇಶ್, ಖಜಾಂಚಿ ಚಿಕ್ಕನಾಯಕ, ಮಾಜಿ ಅಧ್ಯಕ್ಷ ಶಿವರಾಜು, ನಿರ್ದೇಶಕರಾದ ಆದಿಶೇಷ, ಬಸವರಾಜು, ಸಂಘದ ಕಾರ್ಯನಿರ್ವಾಹಕ ಸಿದ್ದಪ್ಪ, ಸದಸ್ಯರಾದ ಪುಟ್ಟಹನುಮಯ್ಯ, ತಂಗವೇಲ್, ಮಹದೇವ, ಮಹದೇವನಾಯಕ, ಸಂಘದ ಸರ್ವ ಸದಸ್ಯರು ಇದ್ದರು.

ಸಂಘದ ಹಿರಿಯ ಸದಸ್ಯರನ್ನು ಸನ್ಮಾನಿಸಲಾಯಿತು. ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿಯಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಾಸ್ಕಾರ ನೀಡಿ ಗೌರವಿಸಲಾಯಿತು. ಸಂಘದಿಂದ ಮಕ್ಕಳಿಗೆ ನೋಟ್‌ಬುಕ್ ವಿತರಿಸಲಾಯಿತು.

ಕರ್ನಾಟಕ ಪಬ್ಲಿಕ್ ಶಾಲೆಗೆ ಶೇ.66 ಫಲಿತಾಂಶ



ಸುಷ್ಮಿತಾ



ನವ್ಯಶ್ರೀ



ನಂದನ್

ಮೂಗೂರು, ಮೇ 2– ಕಳೆದ ಮಾರ್ಚ್‌ನಲ್ಲಿ ನಡೆದ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಮೂಗೂರು ಕರ್ನಾಟಕ ಪಬ್ಲಿಕ್ ಶಾಲೆ ಪ್ರೌಢಶಾಲೆ ವಿಭಾಗಕ್ಕೆ ಶೇ.66 ರಷ್ಟು ಫಲಿತಾಂಶ ಲಭಿಸಿದೆ.

ಪರೀಕ್ಷೆಗೆ ಹಾಜರಾಗಿದ್ದ 102 ವಿದ್ಯಾರ್ಥಿಗಳ ಪೈಕಿ 67 ಮಂದಿ ಉತ್ತೀರ್ಣರಾಗಿದ್ದಾರೆ. 12 ಅತ್ಯುನ್ನತ, 30 ಪ್ರಥಮ, 16 ದ್ವಿತೀಯ ಹಾಗೂ 09 ಮಂದಿ ತೃತೀಯ ದರ್ಜೆಯಲ್ಲಿ ತೇರ್ಗಡೆಯಾಗಿದ್ದಾರೆ. ಸುಷ್ಮಿತಾ 587, ನವ್ಯಶ್ರೀ 574, ನಂದನ್ 564 ಅಂಕ ಪಡೆದಿದ್ದು, ಕನ್ನಡ ವಿಷಯದಲ್ಲಿ ಸುಷ್ಮಿತಾ, ನವ್ಯಶೀ, ಎಸ್.ಪ್ರಾರ್ಥನಾ 125ಕ್ಕೆ 125 ಅಂಕ ಪಡೆದಿದ್ದಾರೆ ಎಂದು ಶಾಲೆ ಉಪ ಪ್ರಾಂಶುಪಾಲ ಸಿ.ಪುಟ್ಟಸ್ವಾಮಿ ತಿಳಿಸಿದ್ದಾರೆ. ಶಾಲೆ ಅಧ್ಯಾಪಕ ವೃಂದ ಹಾಗೂ ಶಾಲಾಭಿವೃದ್ಧಿ ಸಮಿತಿ ವಿದ್ಯಾರ್ಥಿಗಳನ್ನು ಅಭಿನಂದಿಸಿದ್ದಾರೆ.

ಸರ್ಕಾರಿ ಆದರ್ಶ ವಿದ್ಯಾಲಯಕ್ಕೆ ಶೇ.94.8 ರಷ್ಟು ಫಲಿತಾಂಶ



ನಮನ



ಅಭಿಗ್ನ



ಮಂದಾರ್

ಹೆಚ್.ಡಿ.ಕೋಟೆ, ಮೇ 2– ಪಟ್ಟಣದ ಸರ್ಕಾರಿ ಆದರ್ಶ ವಿದ್ಯಾಲಯ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶೇ.94.8 ರಷ್ಟು ಫಲಿತಾಂಶ ದೊರೆತಿದೆ.

ಪರೀಕ್ಷೆ ಎದುರಿಸಿದ್ದ 77 ವಿದ್ಯಾರ್ಥಿಗಳ ಪೈಕಿ 33 ಉನ್ನತ, 40 ಮಂದಿ ಪ್ರಥಮ ದರ್ಜೆಯಲ್ಲಿ ತೇರ್ಗಡೆಯಾಗಿದ್ದಾರೆ. ಶಾಲೆಯ ನಮನ 618 ಅಂಕ ಪಡೆದು ತಾಲೂಕಿಗೆ ಪ್ರಥಮ ಸ್ಥಾನ ಪಡೆದಿದ್ದಾಳೆ. ಅಭಿಗ್ನ 616, ಮಂದಾರ್ ಪ್ರಸಾದ್ 615 ಅಂಕ ಪಡೆದು ಶಾಲೆಗೆ ಕೀರ್ತಿ ತಂದಿದ್ದಾರೆ ಎಂದು ಮುಖ್ಯ ಶಿಕ್ಷಕ ರವೀಂದ್ರ ಬಾಬು ತಿಳಿಸಿದ್ದಾರೆ.

ಟ್ಯಾಲೆಂಟ್ ವಿದ್ಯಾಸಂಸ್ಥೆ ತಾಲೂಕಿಗೆ 2ನೇ ಸ್ಥಾನ

ಹುಣಸೂರು, ಮೇ 2– ನಗರದ ಟ್ಯಾಲೆಂಟ್ ವಿದ್ಯಾಸಂಸ್ಥೆ ಎಸ್‌ಎಸ್‌ಎಲ್‌ಸಿಯಲ್ಲಿ ಶೇ.96ರಷ್ಟು ಫಲಿತಾಂಶ ಪಡೆಯುವ ಮೂಲಕ ತಾಲೂಕಿಗೆ 2ನೇ ಪಡೆದಿದೆ. ಶಾಲೆಯ 10 ಮಂದಿ ಅತ್ಯುನ್ನತ, 30 ಮಂದಿ ಪ್ರಥಮ, ಉಳಿದವರು ದ್ವಿತೀಯ ದರ್ಜೆಯಲ್ಲಿ ತೇರ್ಗಡೆಯಾಗಿದ್ದಾರೆ. ರಚನ 615, ಮನಿಷಾ 609 ಅಂಕ ಪಡೆದು ಶಾಲೆಗೆ ಕೀರ್ತಿ ಪಡೆದಿದ್ದಾರೆ ಎಂದು ಶಾಲೆ ಮುಖ್ಯ ಶಿಕ್ಷಕ ಮಂಜುನಾಥ್ ತಿಳಿಸಿದ್ದಾರೆ.



ಜೆಎಸ್‌ಎಸ್ ಶಾಲೆಗೆ ಶೇ.78 ರಷ್ಟು ಫಲಿತಾಂಶ



ಸಾನಿಕ



ಭುವನಾ



ಮೌನ



ಯೋಗೇಶ್ವರಿ

ಹುಣಸೂರು, ಮೇ 2– ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ನಗರದ ಜೆಎಸ್‌ಎಸ್ ಶಾಲೆ ಶೇ.78 ರಷ್ಟು ಫಲಿತಾಂಶ ಪಡೆದಿದೆ. ಶಾಲೆಯ ನಾಲ್ವರು ಅತ್ಯುನ್ನತ, 43 ಪ್ರಥಮ, 15 ಮಂದಿ ದ್ವಿತೀಯ ದರ್ಜೆಯಲ್ಲಿ ತೇರ್ಗಡೆಯಾಗಿದ್ದಾರೆ ಎಂದು ಮುಖ್ಯೋಪಾಧ್ಯಾಯ ರಮೇಶ್ ತಿಳಿಸಿದ್ದಾರೆ. ಸಾನಿಕ.ಜಿ–594, ಭುವನಾ 545, ಮೌನ 520, ಯೋಗೇಶ್ವರಿ 513 ಅಂಕಗಳನ್ನು ಪಡೆದಿದ್ದಾರೆ.

ಕೆ.ಹೆಚ್.ಶರಣ್ಯಗೆ ಅತ್ಯುನ್ನತ ಶ್ರೇಣಿ

ಬೆಟ್ಟದಪುರ, ಮೇ 2– ಇಲ್ಲಿನ ಎಸ್‌ಎಂಎಸ್ ಶಾಲೆ ವಿದ್ಯಾರ್ಥಿನಿ ಕೆ.ಹೆಚ್.ಶರಣ್ಯ ಈ ಬಾರಿಯ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 566 ಅಂಕ ಅತ್ಯುನ್ನತ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ. ಈಕೆ ಸಾಧನೆಗೆ ತಾತ ಮಾಜಿ ಜಿಪಂ ಸದಸ್ಯ, ಕೆ.ಸಿ.ರಾಜಶೇಖರಯ್ಯ, ತಂದೆ ತಾಯಿ ಹಾಗೂ ಇನ್ನಿತರರು ಅಭಿನಂದನೆ ಸಲ್ಲಿಸಿದ್ದಾರೆ.



ಪ್ರಜ್ಞಾಗುರುಕುಲ ಪ್ರೌಢಶಾಲೆಗೆ ಶೇ.100ರಷ್ಟು ಫಲಿತಾಂಶ










ಬನ್ನೂರು, ಮೇ 2– ಇಲ್ಲಿಗೆ ಸಮೀಪದ ಕಂಚನಹಳ್ಳಿ ಪ್ರಜ್ಞಾ ಗುರುಕುಲ ಪ್ರೌಢಶಾಲೆಗೆ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶೇ.100ರಷ್ಟು ಫಲಿತಾಂಶ ದೊರೆತಿದೆ.

ಪರೀಕ್ಷೆ ಬರೆದ 27 ವಿದ್ಯಾರ್ಥಿಗಳಲ್ಲಿ ಬಿ.ಕೆ.ಪ್ರಕೃತಿ ಶೇ.88.2 ಅಂಕ ಪಡೆದಿದ್ದು, ಎನ್.ಕವನ ಶೇ.88, ಎಸ್.ಚೈತನ್ಯ ಶೇ.86, ಹೆಚ್.ಎಲ್.ಜೀವಿತ ಶೇ.86, ಎ. ಶಿವಿಕಾ ಶೇ.82 ರಷ್ಟು ಅಂಕ ಪಡೆಯುವ ಮೂಲಕ ಶಾಲೆಗೆ ಕೀರ್ತಿ ತಂದಿದ್ದಾರೆ ಎಂದು ಪ್ರಾಂಶುಪಾಲ ಡಾ. ಶಂಕರೇಗೌಡ ತಿಳಿಸಿದರು. ಉಳಿದಂತೆ 9 ವಿದ್ಯಾರ್ಥಿಗಳು ಶೇ.70ಕ್ಕಿಂತ ಹೆಚ್ಚು, 4 ವಿದ್ಯಾರ್ಥಿಗಳು ಶೇ.60 ಕ್ಕಿಂತ ಹೆಚ್ಚು, 3 ವಿದ್ಯಾರ್ಥಿಗಳು ಶೇ.40ಕ್ಕಿಂತ ಹೆಚ್ಚು ಅಂಕ ಪಡೆದಿದ್ದಾರೆ.

ಉನ್ನತ ಶ್ರೇಣಿಯಲ್ಲಿ ತೇರ್ಗಡೆ



ಪ್ರಜ್ವಲ್



ಭವಾನಿ

ತಿ.ನರಸೀಪುರ, ಮೇ 2– ಪ್ರಸಕ್ತ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಪಟ್ಟಣದ ಹೌಸಿಂಗ್ ಬೋರ್ಡ್ ಶ್ರೀಆದಿ ಚುಂಚನಗಿರಿ ಬಾಲಜಗತ್ ಶಾಲೆಯ 8 ವಿದ್ಯಾರ್ಥಿಗಳು ಉನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ. ಶಾಲೆಯ ವಿದ್ಯಾರ್ಥಿಗಳಾದ ಪ್ರಜ್ವಲ್ ಪಾಟೀಲ್(615), ಭವಾನಿ (600), ಮೋಕ್ಷಿತ್.ಎಂ (588), ಜೆ.ಎನ್.ಅನುಶ್ರೀ(588), ಜಯಶ್ರೀ(582), ಕುಸುಮ(579), ಮನೋಜ್ (574), ವಿದ್ಯಾ.ಜಿ.ಪಿ(564) ಅಂಕಗಳನ್ನು ಪಡೆದು ಶಾಲೆಗೆ ಕೀರ್ತಿ ತಂದಿದ್ದಾರೆ ಎಂದು ಆಡಳಿತ ಮಂಡಳಿ ತಿಳಿಸಿದೆ.

ಶ್ರೀಶಾರದ ಪ್ರೌಢಶಾಲೆಗೆ ಉತ್ತಮ ಫಲಿತಾಂಶ



ವಿನುತ



ಹೆಚ್.ಎಂ.ದೀಪಿಕಾ



ದೀಪಿಕಾ

ತಿ.ನರಸೀಪುರ, ಮೇ 2– ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ತಾಲೂಕಿನ ಹನುಮನಾಳು ಗ್ರಾಮದ ಶ್ರೀಶಾರದ ಪ್ರೌಢಶಾಲೆಗೆ ಶೇ.90ರಷ್ಟು ಫಲಿತಾಂಶ ಬಂದಿದೆ.

ಪರೀಕ್ಷೆ ಬರೆದಿದ್ದ 48 ವಿದ್ಯಾರ್ಥಿಗಳ ಪೈಕಿ 34 ಮಂದಿ ಉತ್ತೀರ್ಣರಾಗಿದ್ದು, ಮೂವರು ಉನ್ನತ, 19 ಪ್ರಥಮ, 7 ದ್ವಿತೀಯ, ಇನ್ನುಳಿದ 8 ವಿದ್ಯಾರ್ಥಿಗಳು ತೃತೀಯ ದರ್ಜೆಯಲ್ಲಿ ತೇರ್ಗಡೆಯಾಗಿದ್ದಾರೆ. ಅವರಲ್ಲಿ ಹೆಚ್.ಎಂ.ವಿನುತ 612, ಹೆಚ್.ಎಂ. ದೀಪಿಕಾ 566 ಹಾಗೂ ದೀಪಿಕಾ 558 ಅತಿ ಹೆಚ್ಚು ಅಂಕ ಪಡೆದು ಶಾಲೆಗೆ ಕೀರ್ತಿ ತಂದಿದ್ದಾರೆ ಎಂದು ಶಾಲೆಯ ಆಡಳಿತ ಮಂಡಳಿ ಅಧ್ಯಕ್ಷ ಸಿದ್ದೇಗೌಡ ತಿಳಿಸಿದ್ದಾರೆ.

ಸುರಕ್ಷತೆಗೆ ಆದ್ಯತೆ ನೀಡಿ, ಗ್ರಾಹಕರಿಗೆ ಉತ್ತಮ ಸೇವೆ ಒದಗಿಸಿ

ಚೆಸ್ಕಾಂ ಕಾರ್ಯ ನಿರ್ವಾಹಕ ಇಂಜಿನಿಯರ್ ಆನಂದ್

ನಂಜನಗೂಡು, ಮೇ 2– ಲೈನ್‌ಮ್ಯಾನ್‌ಗಳು ಕಡ್ಡಾಯವಾಗಿ ಸುರಕ್ಷತಾ ಸಾಧನ ಬಳಸಿಕೊಂಡು ನಿಮ್ಮ ಜೀವದ ಸುರಕ್ಷತೆಗೆ ಮೊದಲ ಆದ್ಯತೆ ನೀಡುವ ಜೊತೆಗೆ ಗ್ರಾಹಕರಿಗೆ ಉತ್ತಮ ಸೇವೆ ಒದಗಿಸಬೇಕು ಎಂದು ಚೆಸ್ಕಾಂ ಕಾರ್ಯ ನಿರ್ವಾಹಕ ಇಂಜಿನಿಯರ್ ಆನಂದ್ ತಿಳಿಸಿದರು.

ವಿಶ್ವ ಕಾರ್ಮಿಕರ ದಿನಾಚರಣೆ ಅಂಗವಾಗಿ ಮೈಸೂರು ರಸ್ತೆಯಲ್ಲಿರುವ ಕಾರ್ಯ ನಿರ್ವಾಹಕ ಇಂಜಿನಿಯರ್ ಕಚೇರಿ ಆವರಣದಲ್ಲಿ ನಡೆದ ಕಾರ್ಮಿಕ ದಿನಾಚರಣೆ ಮತ್ತು ಆರೋಗ್ಯ ವಿಮಾ ಕಾರ್ಡ್ ಹಾಗೂ ಸುರಕ್ಷತಾ ಸಾಧನಗಳ ವಿತರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಲೈನ್‌ಮ್ಯಾನ್‌ಗಳು ಮತ್ತು ಚೆಸ್ಕಾಂ ಸಿಬ್ಬಂದಿಗಳ ಪರಿಶ್ರಮದಿಂದಾಗಿ ಚೆಸ್ಕಾಂ ಸಂಸ್ಥೆ ಇತರ ಎಲ್ಲಾ ಸಂಸ್ಥೆಗಳಿಗಿಂತ ಮೊದಲ ಸ್ಥಾನದಲ್ಲಿದೆ. ಆದರೂ ಲೈನ್‌ಮ್ಯಾನ್‌ಗಳು ರೈತರಿಗೆ ಮತ್ತು ಸಾರ್ವಜನಿಕರಿಗೆ ಸ್ಪಂದಿಸುತ್ತಿಲ್ಲ ಎಂಬ ವ್ಯಾಪಕ ದೂರು ಕೇಳಿ ಬರುತ್ತಿದೆ. ನಮ್ಮ ಸಂಸ್ಥೆ ಅಧ್ಯಕ್ಷ ರಮೇಶ್ ಬಂಡಿಸಿದ್ದೇಗೌಡರು ಈ ಬಗ್ಗೆ ಅಸಮಾಧಾನ ಹೊರ ಹಾಕಿದ್ದಾರೆ. ಲೈನ್‌ಮ್ಯಾನ್‌ಗಳು ಸಾರ್ವಜನಿಕರೊಂದಿಗೆ ಹೇಗೆ ಸ್ಪಂದಿಸುತ್ತಾರೆ ಎಂಬುದರ ಮೇಲೆ ಇಲಾಖೆಗೆ ಉತ್ತಮ ಹೆಸರು ಬರಲಿದೆ. ಆದ್ದರಿಂದ ಸಾರ್ವ ಜನಿಕರು, ರೈತರಿಂದ ದೂರು ಬಂದ ತಕ್ಷಣ ಸ್ಪಂದಿಸಿ 24 ಗಂಟೆಗಳ ಒಳಗೆ ರೈತರ ಬೆಳೆಗಳಿಗೆ ಹಾನಿಯಾಗ ದಂತೆ ಕ್ರಮವಹಿಸಿ ವಿದ್ಯುತ್ ಸಂಪರ್ಕ ನೀಡಬೇಕು. ಅಲ್ಲದೇ ಕೆಲಸದ ಸಂದರ್ಭ ಕಡ್ಡಾಯವಾಗಿ ಸುರಕ್ಷತಾ ಸಾಧನ ಬಳಸಬೇಕು ಎಂದರು.



ಚೆಸ್ಕಾಂ ಸಿಬ್ಬಂದಿಗೆ ಸುರಕ್ಷತಾ ಸಾಧನಗಳನ್ನು ವಿತರಿಸಲಾಯಿತು.

ಸಹಾಯಕ ಕಾರ್ಯ ಪಾಲಕ ಇಂಜಿನಿಯರ್ ಕಿರಣ್ ಕುಮಾರ್ ಮಾತನಾಡಿ, ಚೆಸ್ಕಾಂ ಸಿಬ್ಬಂದಿ ಕಾರ್ಮಿಕರು ಎಂಬ ಭಾವನೆ ಹೊಂದಬಾರದು. ಸರ್ಕಾರಿ ವ್ಯವಸ್ಥೆಯಲ್ಲಿ ಚೆಸ್ಕಾಂ ಇಲಾಖೆಗೆ ಸಾರ್ವಜನಿಕ ಸೇವೆ ಮಾಡಲು ಸದಾವಕಾಶ ದೊರಕಿದೆ. ಸಾರ್ವಜನಿಕರ ಸಮಸ್ಯೆಗಳಿಗೆ ಸ್ಪಂದಿಸಿ ಉತ್ತಮ ಸೇವೆ ನೀಡಿ ಕೆಲಸ ಮಾಡುವುದರಿಂದ ಸಿಗುವ ತೃಪ್ತಿ ಯಾವುದರಿಂದಲೂ ಸಿಗುವುದಿಲ್ಲ. ಆದ್ದರಿಂದ ಸಿಬ್ಬಂದಿ ನಿಮಗೆ ಸಿಕ್ಕಿರುವ ಸೇವೆಯ ಸದಾವಕಾಶವನ್ನು ಉಪಯೋಗಿಸಿಕೊಳ್ಳಬೇಕು ಎಂದರು.

ಲೆಕ್ಕಾಧಿಕಾರಿ ರವಿಕುಮಾರ್ ಮಾತನಾಡಿ, ಚೆಸ್ಕಾಂ ಸಿಬ್ಬಂದಿಗೆ ಆರೋಗ್ಯ ವಿಮಾ ಕಾರ್ಡ್ ವಿತರಿಸಲಾಗಿದೆ. ಇದು ನಗದು ರಹಿತ ಕಾರ್ಡ್ ಆಗಿದ್ದು 250 ಖಾಸಗಿ ಆಸ್ಪತ್ರೆಗಳ ಜೊತೆಗೆ ಒಡಂಬಡಿಕೆ ಮಾಡಿಕೊಳ್ಳಲಾಗಿದೆ. ಈ ಕಾರ್ಡ್ ಮೂಲಕ ಚೆಸ್ಕಾಂ ಸಿಬ್ಬಂದಿ ಮತ್ತು ಕುಟುಂಬ ವರ್ಗದವರು ವಾರ್ಷಿಕ 2 ಲಕ್ಷದವರೆಗೆ ಉಚಿತ ಚಿಕಿತ್ಸೆ ಪಡೆಯ ಬಹುದಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಚೆಸ್ಕಾಂ ಸಿಬ್ಬಂದಿಗೆ ಆರೋಗ್ಯ ವಿಮಾ ಕಾರ್ಡ್ ಮತ್ತು ಸುರಕ್ಷತಾ ಸಾಧನಗಳನ್ನು ವಿತರಿಸಲಾಯಿತು. ಸಮಾರಂಭದಲ್ಲಿ ಸಹಾಯಕ ಕಾರ್ಯಪಾಲಕ ಇಂಜಿನಿಯರ್‌ಗಳಾದ ದೇವರಾಜಯ್ಯ, ವೀರೇಶ್, ಧನಂಜಯ, ಹರ್ಷನ್, ಜೆಇ ಸ್ವಾಮಿ, ನೌಕರರ ಸಂಘಟನೆ ಪದಾಧಿಕಾರಿಗಳಾದ ರಂಗಸ್ವಾಮಿ, ರಜನಿಕಾಂತ್, ರಘುಕುಮಾರ್, ಮಾದೇಶ ಸೇರಿದಂತೆ ಚೆಸ್ಕಾಂ ಸಿಬ್ಬಂದಿಗಳು ಉಪಸ್ಥಿತರಿದ್ದರು.

ಸಂಜನಾಗೆ 620 ಅಂಕ

ಮಲ್ಲುಂಡಿ: ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ನಂಜನಗೂಡಿನ ಕಾರ್ಮೆಲ್ ಶಾಲೆ ವಿದ್ಯಾರ್ಥಿನಿ ಸಂಜನಾ 620 ಅಂಕ ಪಡೆದು ತೇರ್ಗಡೆಯಾಗಿದ್ದಾಳೆ.



ಬಸವಣ್ಣನವರ ಆದರ್ಶಗಳು ಇಂದಿಗೂ ಜೀವಂತ

ಜಿಲ್ಲಾ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಹೆಳವರಹುಂಡಿ ಡಾ.ಸಿದ್ದಪ್ಪ ಬಣ್ಣನೆ

ತಲಕಾಡು, ಮೇ 2– ಬಸವಣ್ಣ ಹೇಳಿದಂತೆ ನಿತ್ಯ ಕಾಯಕ ಮಾಡುವ ಎಲ್ಲಾ ಸಮುದಾಯದವರ ಜೀವನದಲ್ಲಿ ಬಸವಣ್ಣನವರ ಆದರ್ಶಗಳು ನೆಲೆಗೊಂಡಿದ್ದು, ಇಂದಿಗೂ ಜೀವಂತವಾಗಿದೆ ಎಂದು ಜಿಲ್ಲಾ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಹೆಳವರಹುಂಡಿ ಡಾ.ಸಿದ್ದಪ್ಪ ಬಣ್ಣಿಸಿದರು.

ಜಿಲ್ಲಾ ಶರಣು ಸಾಹಿತ್ಯ ಪರಿಷತ್ ವತಿಯಿಂದ ತಾಲೂಕಿನ ತಲಕಾಡು ಕರಿಬಸವೇಶ್ವರ ದೇವಾಲಯದ ಆವರಣದಲ್ಲಿ ನಡೆದ ಬಸವ ಜಯಂತಿ ಹಾಗೂ ದತ್ತಿ ಉಪನ್ಯಾಸ ಕಾರ್ಯಕ್ರಮವನ್ನು ಬಸವಣ್ಣನವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಉದ್ಘಾಟಿಸಿ ಮಾತನಾಡಿದ ಅವರು, ಬಸವಣ್ಣ ಎಲ್ಲಾ ಸಮುದಾಯಗಳ ಸಾಂಸ್ಕೃತಿಕ ನಾಯಕರಾಗಿದ್ದಾರೆ. ಕಾಯಕ, ದಾಸೋಹ ತತ್ವಗಳ ಮೂಲಕ ಸಮಾನತೆ ಸಾರುತ್ತಾ, ಸಕಲ ಜೀವರಾಶಿಗಳಿಗೂ ಲೇಸನ್ನು ಬಯಸಿದ ಮಹಾನ್ ಮಾನವತಾವಾದಿ ಅಣ್ಣ ಬಸವಣ್ಣನವರ ವಚನಗಳ ತತ್ವ, ಆದರ್ಶಗಳನ್ನು ನಿತ್ಯ ಜೀವನದಲ್ಲಿ ಅಳವಡಿಸಿಕೊಳ್ಳೋಣ ಎಂದರು.

ವಾಟಾಳು ಸೂರ್ಯ ಸಿಂಹಾಸನ ಮಠದ ಪೀಠಾಧಿಪತಿ ಡಾ.ಸಿದ್ದಲಿಂಗ ಶಿವಾಚಾರ್ಯ ಸ್ವಾಮೀಜಿ ಮಾತನಾಡಿ, ಬಸವಣ್ಣನವರು ಸಮಾಜದಲ್ಲಿ ಜಾತಿ, ವರ್ಣ, ಲಿಂಗ ಭೇದ ಎಂಬುದು ಇಲ್ಲ. ನಾವೆಲ್ಲರೂ ಸಮಾನರು ಎಂದು ಸಮಾಜಕ್ಕೆ ಸಂದೇಶ ಸಾರಿದವರು. ಆದ್ದರಿಂದಲೇ ಬಸವೇಶ್ವರರನ್ನು ಬಸವಣ್ಣ, ಬಸವ, ವಿಶ್ವಗುರು ಎಂದು ಕರೆಯಲಾಗುತ್ತದೆ ಎಂದರು.



ಕಾರ್ಯಕ್ರಮವನ್ನು ಜಿಲ್ಲಾ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಸಿದ್ದಪ್ಪ ಉದ್ಘಾಟಿಸಿದರು.

ಕಸಾಪ ಜಿಲ್ಲಾ ಘಟಕದ ನಿಕಟಪೂರ್ವ ಅಧ್ಯಕ್ಷ ಚಂದ್ರಶೇಖರ್ ಮಾತನಾಡಿದರು. ದತ್ತಿ ಉಪನ್ಯಾಸ ನೀಡಿದ ಕಿರಣ್ ಸಿಡ್ಲೆಹಳ್ಳಿ, ಶರಣ ಸಾಹಿತ್ಯ ಪರಿಷತ್ ತಾಲೂಕು ಅಧ್ಯಕ್ಷ ಸೋಮಶೇಖರಪ್ಪ, ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾಧ್ಯಕ್ಷ ಪ್ರಕಾಶ್, ದೇವಾಲಯದ ಕಾರ್ಯದರ್ಶಿ ಸುಗಂಧರಾಜ, ವೀರೇಶ್, ನಿಂಗಪ್ಪ, ಮಹದೇವಸ್ವಾಮಿ, ಸುರೇಶ್, ನಂಜುಂಡಸ್ವಾಮಿ, ರವಿ, ಕಸಾಪ ಗೋವಿಂದರಾಜು, ಚಿನ್ನು, ಸುರೇಶ್, ಕಾರ್ ಮಲ್ಲಪ್ಪ ಇತರರಿದ್ದರು.

ನಂಜಮ್ಮ ನಿಧನ



ಹುಣಸೂರು, ಮೇ 2– ತಾಲೂಕಿನ ಆಸ್ಪತ್ರೆ ಕಾವಲ್ ಗ್ರಾಪಂ ಮಾಜಿ ಸದಸ್ಯ, ಕಾಂಗ್ರೆಸ್ ಮುಖಂಡ ವೆಂಕಟೇಶ್ ಅವರ ತಾಯಿ ನಂಜಮ್ಮ(80) ಸ್ವಗ್ರಾಮ ಚೌಡಿಕಟ್ಟೆಯಲ್ಲಿ ಗುರುವಾರ ನಿಧನರಾದರು. ಮೃತರು 7 ಮಂದಿ ಪುತ್ರರು, ಮೂವರು ಪುತ್ರಿಯರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಶುಕ್ರವಾರ ಸ್ವಗ್ರಾಮದಲ್ಲಿ ನಡೆಯಿತು.



ಗಿಲ್, ಬಟ್ಲರ್ ಅರ್ಧಶತಕ; ಸನ್‌ರೈಸರ್ಸ್ ವಿರುದ್ಧ ಟೈಟನ್ಸ್ ಗೆಲುವು



ಅಹಮದಾಬಾದ್, ಮೇ 2– ನಾಯಕ ಶುಭಮನ್ ಗಿಲ್, ಜೋಸ್ ಬಟ್ಲರ್ ಅರ್ಧಶತಕದ ಬಲದಿಂದ ಸನ್ ರೈಸರ್ಸ್ ಹೈದರಾಬಾದ್ ವಿರುದ್ಧ ಗುಜರಾತ್ ಟೈಟನ್ಸ್ 38 ರನ್‌ಗಳ ಜಯ ಸಾಧಿಸಿತು.

ಇಲ್ಲಿನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಶುಕ್ರವಾರ ನಡೆದ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಗುಜರಾತ್ ಟೈಟನ್ಸ್ ಭರ್ಜರಿ ಪ್ರದರ್ಶನ ನೀಡಿತು. ನಾಯಕ ಶುಭಮನ್ ಗಿಲ್ 38 ಎಸೆತಗಳಲ್ಲಿ 2 ಸಿಕ್ಸ್, 10 ಬೌಂಡರಿ ಸಹಿತ 76 ರನ್ ಬಾರಿಸಿದರೆ, ಜೋಸ್ ಬಟ್ಲರ್ 37 ಎಸೆತಗಳಲ್ಲಿ 3 ಬೌಂಡರಿ, 4 ಸಿಕ್ಸರ್ ಸಹಿತ 64 ರನ್ ಗಳಿಸಿದರು.

ಹಾಗೆಯೇ 23 ಎಸೆತಗಳಲ್ಲಿ 9 ಬೌಂಡರಿ ಸಹಿತ 48 ಗಳಿಸಿದ ಸಾಯಿ ಸುದರ್ಶನ್ ಹಾಗೂ 21 ರನ್ ಗಳಿಸಿದ ವಾಷಿಂಗ್ಟನ್ ಸುಂದರ್ ತಂಡದ ಮೊತ್ತ ಇನ್ನೂರರ ಗಡಿ ದಾಟಲು ನೆರವಾದರು. ಅಂತಿಮವಾಗಿ ಗುಜರಾತ್ ಟೈಟನ್ಸ್ ನಿಗದಿತ 20 ಓವರ್‌ಗಳಲ್ಲಿ 6 ವಿಕೆಟ್ ನಷ್ಟಕ್ಕೆ 226 ರನ್ ಕಲೆಹಾಕಿತು. ಸನ್‌ರೈಸರ್ಸ್ ಹೈದರಾಬಾದ್ ಪರ ಜಯದೇವ್ ಉನದ್ಕತ್ 3 ವಿಕೆಟ್ ಪಡೆದರು.

227ರನ್‌ಗಳ ಬೃಹತ್ ಗುರಿ ಬೆನ್ನತ್ತಿದ್ದ ಸನ್‌ರೈಸರ್ಸ್ ಹೈದರಾಬಾದ್ ನಿಗದಿತ 20 ಓವರ್‌ಗಳಲ್ಲಿ 6 ವಿಕೆಟ್ ನಷ್ಟಕ್ಕೆ 186 ರನ್‌ಗಳಿಸಷ್ಟೇ ಶಕ್ತವಾಯಿತು. ಈ ಮೂಲಕ 38 ರನ್‌ಗಳ ಸೋಲಪ್ಪಿಕೊಂಡಿತು. ಏಕಾಂಗಿ ಹೋರಾಟ ನಡೆಸಿದ ಅಭಿಷೇಕ್ ಶರ್ಮಾ 41 ಎಸೆತಗಳಲ್ಲಿ 4 ಬೌಂಡರಿ, 6 ಭರ್ಜರಿ ಸಿಕ್ಸರ್ ಸಹಿತ 74 ರನ್‌ಗಳಿದ್ದು ಬಿಟ್ಟರೆ ಮತ್ಯಾವ ಬ್ಯಾಟ್ಸ್‌ಮನ್‌ಗಳು ಉತ್ತಮ ಪ್ರದರ್ಶನ ನೀಡಲಿಲ್ಲ. ಮೊಹಮ್ಮದ್ ಸಿರಾಜ್, ಪ್ರಸಿದ್ಧ ಕೃಷ್ಣ ತಲಾ 2 ವಿಕೆಟ್ ಪಡೆದು ಸನ್‌ರೈಸರ್ಸ್ ಹೈದರಾಬಾದ್ ಬ್ಯಾಟರ್‌ಗಳಿಗೆ ಕಡಿವಾಣ ಹಾಕಿದರು. ಅನುಭವಿ ಸ್ಪಿನ್ನರ್ ರಶೀದ್ ಖಾನ್ ಮೂರು ಓವರ್‌ಗಳಲ್ಲಿ 50 ರನ್ ನೀಡಿ ದುಬಾರಿ ಎನಿಸಿಕೊಂಡರು. ಪ್ರಸಿದ್ಧ ಕೃಷ್ಣ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ತಂಡದ ಅಂಕಪಟ್ಟಿ ವಿವರ

ತಂಡ	ಪಂದ್ಯಗಳು	ಗೆಲುವು	ಸೋಲು	ಡ್ರಾ	ಅಂಕ
ಮುಂಬೈ	11	7	4	0	14
ಗುಜರಾತ್	10	7	3	0	14
ಬೆಂಗಳೂರು	10	7	3	0	14
ಪಂಜಾಬ್	10	6	3	0	13
ಡೆಲ್ಲಿ	10	6	4	0	12
ಲಕ್ನೋ	10	5	5	0	10
ಕೋಲ್ಕತ್ತಾ	10	4	5	0	9
ರಾಜಸ್ಥಾನ್	11	3	8	0	6
ಹೈದರಾಬಾದ್	10	3	7	0	6
ಚೆನ್ನೈ	10	2	8	0	4

ಇಂದಿನ ಪಂದ್ಯ

ರಾಯಲ್ ಚಾಲೆಂಜರ್ಸ್ ಬೆಂಗಳೂರು
V/S
ಚೆನ್ನೈ ಸೂಪರ್ ಕಿಂಗ್ಸ್

ಸಮಯ: ಸಂಜೆ 7.30

ಸ್ಥಳ : ಚಿನ್ನಸ್ವಾಮಿ ಕ್ರೀಡಾಂಗಣ, ಬೆಂಗಳೂರು

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಯುದ್ಧಕಾಂಡ (ಕ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಗುಡ್ ಬ್ಯಾಡ್ ಅಗ್ಲಿ (ತ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ರೇಡ್ –2 (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ರೆಟ್ರೋ (ತ)	4 ಪ್ರದರ್ಶನಗಳು
ಗಾಯಿತ್ರಿ	
ರೆಟ್ರೋ (ತ)	4 ಪ್ರದರ್ಶನಗಳು
ರಾಜಕಮಲ್	
ಟೂರಿಸ್ಟ್ ಫ್ಯಾಮಿಲಿ (ತ)	4 ಪ್ರದರ್ಶನಗಳು
ಸಂಗಂ	
ರೆಟ್ರೋ (ತ)	4 ಪ್ರದರ್ಶನಗಳು
ಲಿಡೋ	
ನಾನ್ ಪೋಲಿ (ಕ) + ರಿಕ್ಷಾ ಚಾಲಕ (ಕ)	3+1 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಭಗೀರಥ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ರೆಟ್ರೋ (ತ): ಬೆ.9.40ಕ್ಕೆ, ಮ.1ಕ್ಕೆ, ರಾ.7ಕ್ಕೆ, ಥಂಡರ್‌ಬೋಲ್ಟ್ಸ್ (3ಡಿ)(ಇಂ): ಸಂ.4.20ಕ್ಕೆ, ರಾ.10.20ಕ್ಕೆ.
ಸ್ಕ್ರೀನ್ 2	ಥಂಡರ್‌ಬೋಲ್ಟ್ಸ್ (3ಡಿ)(ಇಂ): ಬೆ.10.25ಕ್ಕೆ, ಯುದ್ಧಕಾಂಡ 2 (ಕ): ಮ.1.05ಕ್ಕೆ, ಸಂ.4.05ಕ್ಕೆ, ತುಡಾರಂ (ಮ): ರಾ.7ಕ್ಕೆ, ರಾ.10.20ಕ್ಕೆ.
ಸ್ಕ್ರೀನ್ 3	ಹಿಟ್ ದಿ ಥರ್ಡ್ ಕೇಸ್ (ತೆ): ಬೆ.10ಕ್ಕೆ, ಮ.3.55ಕ್ಕೆ, ರಾ.7.05ಕ್ಕೆ, ರಾ.10.15ಕ್ಕೆ, ಟೂರಿಸ್ಟ್ ಫ್ಯಾಮಿಲಿ (ತ): ಮ.1.10ಕ್ಕೆ.
ಸ್ಕ್ರೀನ್ 4	ಪಪ್ಪಿ (ಕ): ಬೆ.10.30ಕ್ಕೆ, ರೈಡ್ 2 (ಹಿಂ): ಮ.1ಕ್ಕೆ, ರಾ.7.25ಕ್ಕೆ, ರಾ.10.25ಕ್ಕೆ, ರೆಟ್ರೋ (ತ): ಸಂ.4.05ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಪ್ರೀತಿಯ ಹುಚ್ಚ (ಕ): ಬೆ.11ಕ್ಕೆ, ರಿಕ್ಷಾ ಚಾಲಕ (ಕ): ಮ.1.35ಕ್ಕೆ, ಕೋರ (ಕ): ಸಂ.6.35ಕ್ಕೆ, ಖದೀಮ (ಕ): ಸಂ.6.35ಕ್ಕೆ, ಟೆನ್ ಅವರ್ಸ್ (ತ): ರಾ.9.15ಕ್ಕೆ.
ಸ್ಕ್ರೀನ್ 2	ಯುದ್ಧಕಾಂಡ 2 (ಕ): ಮ.1ಕ್ಕೆ, ಸಂ.6.35ಕ್ಕೆ, ಒಡೆಲ್ಲಾ (ತೆ): ಮ.3.45ಕ್ಕೆ, ರಾ.9.20ಕ್ಕೆ.
ಸ್ಕ್ರೀನ್ 3	ವೀರ ಚಂದ್ರಹಾಸ (ಕ): ಮ.1ಕ್ಕೆ, ಮ.3.55ಕ್ಕೆ, ಗುಡ್ ಬ್ಯಾಡ್ ಅಗ್ಲಿ (ತ): ಸಂ.6.50ಕ್ಕೆ, ರಾ.9.30ಕ್ಕೆ
ಸ್ಕ್ರೀನ್ 4	ಯುದ್ಧಕಾಂಡ 2 (ಕ): ಬೆ.10.50ಕ್ಕೆ, ವಾಮನ (ಕ): ಮ.1.35ಕ್ಕೆ, ಸಂ.4.10ಕ್ಕೆ, ಅರ್ಜುನ್ s/o ವೈಜಯಂತಿ (ತೆ): ಸಂ.6.45ಕ್ಕೆ, ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್
PVR CINEMAS
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಏಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಕೇಂದ್ರದ ಜಾತಿ ಗಣತಿ ಐತಿಹಾಸಿಕ ನಿರ್ಧಾರ

ರಾಜ್ಯ ಹಿಂದುಳಿದ ವರ್ಗಗಳ ಮೋರ್ಚಾ ಅಧ್ಯಕ್ಷ ರಘು ಕೌಟಿಲ್ಯ



ಮೈಸೂರಿನ ಬಿಜೆಪಿ ಕಚೇರಿಯಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ರಘು ಕೌಟಿಲ್ಯ ಮಾತನಾಡುತ್ತಿರುವುದು

ಮೈಸೂರು, ಮೇ 2(ಎಂಟಿವೈ)– ಜನಗಣತಿಯೊಂದಿಗೆ ಜಾತಿ ಗಣತಿ ನಡೆಸುವ ಕೇಂದ್ರ ಸರ್ಕಾರದ ನಿರ್ಧಾರ ಐತಿಹಾಸಿಕವಾದದ್ದು ಎಂದು ಬಿಜೆಪಿ ಹಿಂದುಳಿದ ವರ್ಗಗಳ ಮೋರ್ಚಾದ ರಾಜ್ಯಾಧ್ಯಕ್ಷ ರಘು ಕೌಟಿಲ್ಯ ಪ್ರಶಂಸೆ ವ್ಯಕ್ತಪಡಿಸಿದ್ದಾರೆ.

ಮೈಸೂರಿನ ಬಿಜೆಪಿ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಾಮಾಜಿಕ ನ್ಯಾಯ ಕಲ್ಪಿಸುವ ನಿಟ್ಟಿನಲ್ಲಿ ಧೀರ ಪ್ರತಿಜ್ಞೆಯಾಗಿದೆ. ಮಹಾತ್ಮ ಗಾಂಧೀಜಿ ಅವರ ಆಶಯವನ್ನು ಅನುಷ್ಠಾನ ಮಾಡುವ ಸಂಕಲ್ಪವಾಗಿ ಕೇಂದ್ರ ಸರ್ಕಾರ ಇಂದು ದಿಟ್ಟ ಹೆಜ್ಜೆ ಇಟ್ಟಿದೆ. ಕರ್ನಾಟಕದಲ್ಲಿ ಬಸವಣ್ಣರ ಕಾಲದಲ್ಲಿ ಸಾಮಾಜಿಕ ನ್ಯಾಯ ದೊರೆಯಿತು. ಅನಂತರ ದೇವರಾಜ ಅರಸು ಕಾಲದಲ್ಲಿ ಹಾವನೂರರ ವರದಿಯಿಂದ ಹಿಂದುಳಿದ ವರ್ಗಗಳನ್ನು ಮೇಲೆತ್ತುವ ಪ್ರಯತ್ನ ನಡೆಯಿತು. ಸಿದ್ದರಾಮಯ್ಯ ಅವರು ಅಹಿಂದವನ್ನು ಅಧಿಕಾರಕ್ಕೆ ಬಳಸಿಕೊಂಡರು ಎಂದರು.

ರಾಜ್ಯ ಸರ್ಕಾರಕ್ಕೆ ಗಣತಿ ನಡೆಸುವ ಅಧಿಕಾರ ಇಲ್ಲ. ಸ್ವೀಕರಿಸಿರುವ ಗಣತಿಯ ವರದಿಯನ್ನು ಇದುವರೆಗೂ ಬಿಡುಗಡೆ ಮಾಡಿಲ್ಲ. ಸಮೀಕ್ಷೆಯಲ್ಲಿ ಅಸಂಘಟಿತ, ಅಲೆಮಾರಿ ಸಮುದಾಯಗಳನ್ನು ಕೈಬಿಡಲಾಗಿದೆ. ಈ ಸಮೀಕ್ಷಾ ವರದಿಯಲ್ಲಿ ವೈಯಕ್ತಿಕವಾಗಿ ಏನು ಬೇಕೋ, ಅದನ್ನೇ ಬರೆಸಿಕೊಂಡಿದ್ದಾರೆ ಎಂದು ಆರೋಪಿಸಿದರು.

ಹಿಂದುಳಿದ ವರ್ಗಗಳಿಗೆ ಸಿದ್ದರಾಮಯ್ಯ ಅವರು ಒಂದೇ ಒಂದು ಕಾರ್ಯಕ್ರಮ ಕೊಟ್ಟಿಲ್ಲ ಅತೀ ಹಿಂದುಳಿದ ಸಮುದಾಯಗಳಿಗೆ ಔದ್ಯೋಗಿಕ ಹಾಗೂ ಶೈಕ್ಷಣಿಕವಾಗಿ ನ್ಯಾಯ ಸಿಕ್ಕಿಲ್ಲ. ಮೀಸಲಾತಿಯಿಂದಲೂ ವಂಚಿತವಾಗಿವೆ ಎಂದು ಹೇಳಿದರು. ಸುದ್ದಿಗೋಷ್ಠಿಯಲ್ಲಿ ಬಿಜೆಪಿ ನಗರಾಧ್ಯಕ್ಷ ಎಲ್.ನಾಗೇಂದ್ರ ಶಾಸಕ ಟಿ.ಎಸ್. ಶ್ರೀವತ್ಸ ಮುಖಂಡರಾದ ಬಿ.ಎಂ. ರಘು, ಕೇಬಲ್ ಮಹೇಶ್, ಮಹೇಶ್ ರಾಜೇ ಅರಸ್ ಇನ್ನಿತರರು ಇದ್ದರು.

ಚಾಮುಂಡಿ ಬೆಟ್ಟದಲ್ಲಿ ಸಾಲು ಮರಿ ಹಬ್ಬ



ಜ್ವಾಲಾಮುಖಿ ತ್ರಿಪುರಸುಂದರಿ ಅಮ್ಮನವರ ಹಬ್ಬದ ಪ್ರಯುಕ್ತ ದೇವಿಕೆರೆಯಿಂದ ಚಾಮುಂಡೇಶ್ವರಿ ದೇವಸ್ಥಾನದ ಮಾರ್ಗವಾಗಿ ಉತ್ತನಹಳ್ಳಿ ಪಾದದವರೆಗೆ 59 ಮಕ್ಕಳು ಕಳಸ ಹೊತ್ತು ಮೆರವಣಿಗೆ ಸಾಗಿದರು. ಈ ವೇಳೆ ಚಾಮುಂಡಿ ಬೆಟ್ಟದ ಗ್ರಾಮಸ್ಥರಿಂದ ಹೋಮ, ಮಹಾಮಂಗಳಾರತಿ ಹಾಗೂ ವಿಶೇಷ ಪೂಜೆಗಳು ಯಶಸ್ವಿಯಾಗಿ ನಡೆದವು.

ಇಂದು ವಕ್ಫ್ ತಿದ್ದುಪಡಿ ಕಾಯ್ದೆ ವಿರೋಧಿಸಿ ಮೈಸೂರಲ್ಲಿ ಪ್ರತಿಭಟನೆ

ಮೈಸೂರು, ಮೇ.2(ಜಿಎ)–ಕೇಂದ್ರ ಸರ್ಕಾರ ಅಂಗೀಕರಿಸಿರುವ ವಕ್ಫ್ ತಿದ್ದುಪಡಿ ಕಾಯ್ದೆ 2025ರ ವಿರುದ್ಧ ಮೇ 3 ರಂದು ಮಧ್ಯಾಹ್ನ 3ಗಂಟೆಯಿಂದ ಸಂಜೆ 6ರವರೆಗೆ ಮೈಸೂರಿನ ತಿಲಕ್ ನಗರದ ಈದ್ಗಾ ಮೈದಾನದಲ್ಲಿ ಬೃಹತ್ ಪ್ರತಿಭಟನಾ ಸಭೆ ಹಮ್ಮಿಕೊಳ್ಳಲಾಗಿದೆ ಎಂದು ಮಾಜಿ ಮೇಯರ್ ಅಯೂಬ್ ಖಾನ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ದೇಶದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದ ದಿನದಿಂದಲೂ ಕಾನೂನುಗಳನ್ನು ತಿದ್ದುಪಡಿ ಮಾಡಿ ಸಮುದಾಯಕ್ಕೆ ತೊಂದರೆ ನೀಡುತ್ತಿದ್ದು ಅದರಂತೆ ಈಗ ಒಂದು ಸಮುದಾಯವನ್ನು ಟಾರ್ಗೆಟ್ ಮಾಡುತ್ತಿದೆ. ಪ್ರಧಾನಿ ನರೇಂದ್ರ ಮೋದಿ ಅವರ ಎನ್‌ಡಿಎ ಮೈತ್ರಿಕೂಟದ ಸರ್ಕಾರ ಹಿಂದಿನ ವಕ್ಫ್ ಕಾಯ್ದೆಗೆ 2013 ರಲ್ಲಿ ತಿದ್ದುಪಡಿ ತಂದು ದೊಡ್ಡ ಬದಲಾವಣೆ ಮಾಡಿ, ನಂತರ ಸಂಸದೀಯ ಜಂಟಿ ಸಮಿತಿ ವರದಿಗೆ ಒಪ್ಪಿಸಿ ಇದೀಗ ಕಾಯ್ದೆಯಾಗಿ ಅಂಗೀಕಾರವಾಗಿದೆ ಎಂದು ಕಿಡಿಕಾರಿದರು.

ಈ ಕಾಯ್ದೆ ಅಸಂವಿಧಾನಿವಾಗಿದ್ದು, ಧಾರ್ಮಿಕ ಸ್ವಾತಂತ್ರ್ಯ ಮತ್ತು ಜಾತ್ಯತೀತ ತತ್ವಕ್ಕೆ ವಿರುದ್ಧವಾದುದಾಗಿದೆ. ರಾಜಕೀಯ ದುರುದ್ದೇಶ ಮತ್ತು ಮುಸ್ಲಿಂರ ವಿರುದ್ಧ ಪೂರ್ವಗ್ರಹ ಪೀಡಿತವಾಗಿದೆ. ಈ ಕಾಯ್ದೆ ಮುಸ್ಲಿಂ ಸಮುದಾಯದ ಮೇಲೆ ಒತ್ತಾಯ ಹೇರಿದ್ದು, ಭವಿಷ್ಯದಲ್ಲಿ ವಕ್ಫ್ ಆಸಿಗಳ ಮೇಲೆ ದುಷ್ಪರಿಣಾಮ ಬೀರಿ ಸಂಘರ್ಷಕ್ಕೆ ದಾರಿ ಮಾಡಿಕೊಡುತ್ತದೆ. ಹೀಗಾಗಿ ಈ ಬೃಹತ್ ಶಾಂತಿಯುತ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ಮಾಹಿತಿ ನೀಡಿದರು.

ಪ್ರತಿಭಟನಾ ಸಭೆಗೆ ಪಕ್ಷಾತೀತವಾಗಿ ಎಲ್ಲಾ ಶಾಸಕರನ್ನು ಆಹ್ವಾನ ಮಾಡಲಾಗಿದ್ದು, ದಲಿತ ಸಂಘಟನೆ, ರೈತ ಸಂಘಟನೆ, ಪ್ರಗತಿಪರ ಸಂಘಟನೆ ಸೇರಿದಂತೆ ಮುಸ್ಲಿಂ ಸಂಘಟನೆಗಳ ಸಹಕಾರವಿದೆ. ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಯಶಸ್ವಿಗೊಳಿಸಿ ಎಂದರು.

ಸುದ್ದಿಗೋಷ್ಠಿಯಲ್ಲಿ ಮುಸ್ಲಿಂ ಸಮುದಾಯದ ಧರ್ಮ ಗುರುಗಳಾದ ಮುಫ್ತಿ ತಾಜುದ್ದೀನ್, ಮೊಹಮ್ಮದ್ ಜಕಾವುಲ್ಲಾ, ಅಯೂಬ್ ಅನ್ಸಾರಿ, ಅಹಿಂದ ಸಂಘಟಕ ಕೆ.ಎಸ್. ಶಿವರಾಮ್, ಸುಹೇಲ್ ಅಹಮದ್, ರಫತುಲ್ಲಾ ಖಾನ್, ಅಸಾದುಲ್ಲಾ ಮತ್ತಿತರರು ಉಪಸ್ಥಿತರಿದ್ದರು.

ಬಸವೇಶ್ವರಸ್ವಾಮಿ ಜಯಂತಿ

ಮೈಸೂರು, ಮೇ 2– ಮೈಸೂರಿನ ವೀರನಗೆರೆ ಬಸವೇಶ್ವರ ಸ್ವಾಮಿ ದೇವಸ್ಥಾನ ವೀರಶೈವ ಮಂಡಳಿ ಮೇ 4ರಂದು ಶ್ರೀ ಬಸವೇಶ್ವರಸ್ವಾಮಿ ಜಯಂತಿ ಆಯೋಜಿಸಲಾಗಿದೆ. ಅಂದು ಬೆಳಗ್ಗೆ 8ಕ್ಕೆ ಬಸವೇಶ್ವರ ಸ್ವಾಮಿ ದೇವಸ್ಥಾನದಲ್ಲಿ ರುದ್ರಾಭಿಷೇಕ, 10 ಗಂಟೆಗೆ ಪ್ರಮುಖ ಬೀದಿಗಳಲ್ಲಿ ಶ್ರೀಬಸವೇಶ್ವರ ಉತ್ಸವ ಜರುಗಲಿದೆ. ದೇವಸ್ಥಾನದ ಆವರಣದಲ್ಲಿ ಸಂಜೆ 5ಕ್ಕೆ ವಚನಗಾಯನದ ನಂತರ ಅನ್ನಸಂತರ್ಪಣೆ ಏರ್ಪಡಿಸಲಾಗಿದೆ.

ಕಾನೂನು ಸೇವೆಗಳ ಪ್ರಾಧಿಕಾರದಿಂದ ಕಾರ್ಮಿಕರಿಗೆ ಉಚಿತ ಕಾನೂನು ನೆರವು



ಮೈಸೂರು,ಮೇ.2(ಎಂಟಿವೈ)– ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರವು ಎಲ್ಲ ಕಾರ್ಖಾನೆ ಕಾರ್ಮಿಕರು ಹಾಗೂ ಅಸಂಘಟಿತ ಕಾರ್ಮಿಕರಿಗೆ ಉಚಿತ ಕಾನೂನು ನೆರವು ನೀಡುತಿದ್ದು, ಅಗತ್ಯವುಳ್ಳ ಕಾರ್ಮಿಕರು ಪ್ರಾಧಿಕಾರದ ನೆರವು ಪಡೆಯುವಂತೆ ಎಂದು ಹಿರಿಯ ಸಿವಿಲ್ ನ್ಯಾಯಾಧೀಶ ಸಿ.ಬಿ.ದಿನೇಶ್ ಸಲಹೆ ನೀಡಿದ್ದಾರೆ.

ಮೈಸೂರಿನ ಕೃಷ್ಣಮೂರ್ತಿಪುರಂನ ಶಾರದಾವಿಲಾಸ ಶತಮಾನೋತ್ಸವ ಭವನದಲ್ಲಿ ಬುಧವಾರ ಕರ್ನಾಟಕ ಸರ್ಕಾರಿ ದಿನಗೂಲಿ ಮತ್ತು ವಿವಿಧ ಕಾರ್ಮಿಕ ಸಂಘಗಳು, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ವತಿಯಿಂದ ಆಯೋಜಿಸಿದ್ದ ಕಾರ್ಮಿಕ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ, ಕರ್ತವ್ಯದ ವೇಳೆ ಆಗುವ ಕೆಲ ಸಮಸ್ಯೆಗಳಿಗೆ ಕಾರ್ಮಿಕರು ಕಾನೂನು ಹೋರಾಟ ನಡೆಸುವ ಅಗತ್ಯ ಬಂದರೆ, ಕಾನೂನು ಸೇವೆಗಳ ಪ್ರಾಧಿಕಾರದ ನೆರವು ಪಡೆಯಬಹುದು. ಪ್ರಾಧಿಕಾರವೇ ವಕೀಲರನ್ನು ನಿಯೋಜಿಸಯತ್ತದೆ. ಈ ಸೌಲಭ್ಯ ಪಡೆದುಕೊಳ್ಳಬೇಕು ಎಂದರು.

ದೇಶದ ಜಿಡಿಪಿ ಬೆಳವಣಿಗೆಗೆ ಶೇ.50ರಷ್ಟು ಕೊಡುಗೆಯನ್ನು ಅಸಂಘಟಿತ ಕಾರ್ಮಿಕರು ನೀಡುತ್ತಿದ್ದಾರೆ. ಕಾರ್ಮಿಕ ಇಲಾಖೆಯು ಅಸಂಘಟಿತ ಕಾರ್ಮಿಕರ ಅಭಿವೃದ್ಧಿಗಾಗಿ ಹಲವು ಕಾರ್ಯಕ್ರಮಗಳನ್ನು ಜಾರಿಗೊಳಿಸಿದ್ದು, ಯೋಜನೆಯ ಲಾಭ ಪಡೆದುಕೊಳ್ಳಬೇಕು. ಕಾರ್ಮಿಕರು ತಮ್ಮ ಆರೋಗ್ಯದ ಕಡೆಗೆ ಹೆಚ್ಚಿನ ಗಮನ ಹರಿಸಬೇಕು. ಯಾವುದೇ ಸಂದರ್ಭದಲ್ಲೂ ತಮ್ಮ ಆರೋಗ್ಯದ ಬಗ್ಗೆ ನಿರ್ಲಕ್ಷಿಸಬಾರದು. ಕಾರ್ಮಿಕರು ಬೀಡಿ, ಸಿಗರೇಟ್, ಮದ್ಯಪಾನದ ಚಟವನ್ನು ಹೊಂದಿದ್ದರೆ ಹಂತ ಹಂತವಾಗಿ ಬಿಡುವುದು ಉತ್ತಮ. ಇದರಿಂದ ನಿಮ್ಮ ಆರೋಗ್ಯ ಉತ್ತಮಗೊಳ್ಳುವುದು ಮಾತ್ರವಲ್ಲದೆ ಕುಟುಂಬದ ಆರ್ಥಿಕ ಪರಿಸ್ಥಿತಿ ಸಹ ಉತ್ತಮವಾಗುತ್ತದೆ ಎಂದು ಹೇಳಿದರು.

ಸಹಾಯಕ ಕಾರ್ಮಿಕ ಆಯುಕ್ತೆ ವೀಣಾ ಮಾತನಾಡಿ, ದೇಶದ ಅಭಿವೃದ್ಧಿಗೆ ಕಾರ್ಮಿಕ ವರ್ಗದವರ ಕೊಡುಗೆ ಅಪಾರವಾದದ್ದು. ಶ್ರಮಿಕರು ತಮ್ಮ ಶ್ರಮದ ಮೂಲಕ ದೇಶವನ್ನು ಕಟ್ಟುವ ಕಾರ್ಯ ಮಾಡುತ್ತಿದ್ದಾರೆ. ದೇಶದ ಆರ್ಥಿಕ ಸುಭದ್ರತೆಯಲ್ಲಿ ಪ್ರಮುಖ ಪಾತ್ರ ನಿರ್ವಹಿಸುತ್ತಿದ್ದಾರೆ. ಕಾರ್ಮಿಕರಿಗೆ ಸರ್ಕಾರ ಹಲವಾರು ಸೌಲಭ್ಯಗಳನ್ನು ನೀಡುತ್ತಿದ್ದು, ಕಾರ್ಮಿಕರು ಸೌಲಭ್ಯಗಳನ್ನು ಪಡೆದುಕೊಳ್ಳಲು ಮುಂದೆ ಬರಬೇಕು ಎಂದರು. ಅಪರ ಕಾರ್ಮಿಕ ಆಯುಕ್ತ ಡಾ.ಎಸ್.ಬಿ.ರವಿಕುಮಾರ್, ಜಿಲ್ಲಾ ಕಾರ್ಮಿಕ ಅಧಿಕಾರಿ ಚೇತನ್ ಕುಮಾರ್, ಕಾರ್ಮಿಕ ಅಧಿಕಾರಿ ಮಂಜುಳಾದೇವಿ, ಸಂಘದ ಅಧ್ಯಕ್ಷ ಪ್ರಮೋದ್ ಚಿಕ್ಕಮಣ್ಣೂರು ಇದ್ದರು.

ಸೆಸ್ಕ್ ಸಿಬ್ಬಂದಿಗೆ ಕ್ಯಾಶ್‌ಲೆಸ್ ಹೆಲ್ತ್ ಕಾರ್ಡ್, ಸುರಕ್ಷತಾ ಸಲಕರಣೆ ವಿತರಣೆ

ಗ್ರಾಹಕರ ಸೇವೆಗೆ ಕಟಿಬದ್ಧರಾಗಿರಲು ಸೆಸ್ಕ್ ಅಧ್ಯಕ್ಷರೂ ಆದ ಶಾಸಕ ರಮೇಶ್ ಬಂಡಿಸಿದ್ದೇಗೌಡ ಸಲಹೆ

ಮೈಸೂರು,ಮೇ.2(ಎಂಟಿವೈ)– ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ(ಸೆಸ್ಕ್)ದಲ್ಲಿ ಸೇವೆ ಸಲ್ಲಿಸುತ್ತಿರುವ ಲೈನ್‌ಮೆನ್ ಸೇರಿದಂತೆ ಮುಂಚೂಣಿ ಸಿಬ್ಬಂದಿಗೆ ಗುರುವಾರ ಕ್ಯಾಶ್ ಲೆಸ್ ಹೆಲ್ತ್ ಕಾರ್ಡ್ ಹಾಗೂ ಸುರಕ್ಷತಾ ಸಾಮಗ್ರಿ ವಿತರಿಸಲಾಯಿತು.

ಮೈಸೂರು ವಿಶ್ವವಿದ್ಯಾನಿಲಯದ ಓವೆಲ್ ಮೈದಾನದಲ್ಲಿ ಆಯೋಜಿಸಿದ್ದ ಕಾರ್ಮಿಕ ದಿನಾಚರಣೆ ಕಾರ್ಯಕ್ರಮದಲ್ಲಿ ಸೆಸ್ಕ್ ಸಿಬ್ಬಂದಿಗೆ ಸೆಸ್ಕ್ ಅಧ್ಯಕ್ಷರೂ ಆಗಿರುವ ಶಾಸಕ ರಮೇಶ್ ಬಂಡಿಸಿದ್ದೇಗೌಡ ಕ್ಯಾಶ್ ಲೆಸ್ ಹೆಲ್ತ್ ಕಾರ್ಡ್ ಹಾಗೂ ಸುರಕ್ಷಾ ಸಾಮಗ್ರಿಗಳನ್ನು ವಿತರಿಸಿದರು.

ಬಳಿಕ ರಮೇಶ್ ಬಂಡಿಸಿದ್ದೇಗೌಡ ಮಾತನಾಡಿ, ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮದಲ್ಲಿ ಎಲ್ಲಾ ಸಿಬ್ಬಂದಿಯ ಪ್ರಾಮಾಣಿಕ ಸೇವೆಯಿಂದಾಗಿ ಸೆಸ್ಕ್‌ಗೆ ಎ ಶ್ರೇಣಿಯ ರೇಟಿಂಗ್ ದೊರೆತಿದೆ. ನಿಗಮದ ವ್ಯಾಪ್ತಿಯಲ್ಲಿ ವಿದ್ಯುತ್ ಅವಘಡ ತಪ್ಪಿಸುವ ನಿಟ್ಟಿನಲ್ಲಿ ಸಿಬ್ಬಂದಿ ಕಡ್ಡಾಯವಾಗಿ ಸುರಕ್ಷತಾ ಪರಿಕರಗಳನ್ನು ಬಳಸಿಕೊಳ್ಳಬೇಕು. ವಿದ್ಯುತ್ ಸಂಪರ್ಕ ಕಡಿತ ಸೇರಿದಂತೆ ವಿದ್ಯುತ್ ಮಾರ್ಗದಲ್ಲಾದ ಅಡಚಣೆ ಸರಿ ಮಾಡುವ ವೇಳೆ ಲೈನ್‌ಮೆನ್‌ಗಳು ಸುರಕ್ಷತಾ ಕ್ರಮ ಅನುಸರಿಸಬೇಕು. ಯಾವುದೇ ಕಾರಣಕ್ಕೂ ಮೈಮರೆಯಬಾರದು. ಕರ್ತವ್ಯದ ವೇಳೆ ಸಿಬ್ಬಂದಿಯ ರಕ್ಷಣೆಗಾಗಿ ನಿಗಮದ ವತಿಯಿಂದ ಸುರಕ್ಷಾ ಸಾಧನ ವಿತರಿಸಲಾಗುತ್ತಿದ್ದು, ಅವುಗಳನ್ನು ಸರಿಯಾಗಿ ಬಳಕೆ ಮಾಡಿಕೊಂಡು ತಮ್ಮ ಸುರಕ್ಷತೆ ಬಗ್ಗೆಯೂ ಗಮನ ಹರಿಸಬೇಕು ಎಂದು ಸಲಹೆ ನೀಡಿದರು.

ಇತ್ತೀಚಿನ ದಿನಗಳಲ್ಲಿ ಬೆಳೆ ನಷ್ಟ ಸೇರಿದಂತೆ ಸಾಕಷ್ಟು ಸಮಸ್ಯೆ ಎದುರಿಸುತ್ತಿರುವ ರೈತರೊಂದಿಗೆ ಸಕಾರಾತ್ಮಕ ಹಾಗೂ ಸರಿಯಾದ ಸಮಯಕ್ಕೆ ಸ್ಪಂದಿಸಬೇಕು. ರೈತರು ಪವರ್‌ಮನ್‌ಗಳ ಮೇಲೆ ಅವಲಂಭಿತರಾಗಿದ್ದು, 24 ಗಂಟೆಯಲ್ಲಿ ರೈತರ ಟಿಸಿಗಳ ಬದಲಿಸಿಕೊಡುವಲ್ಲಿ ಕಾರ್ಯಪ್ರವೃತ್ತರಾಗಬೇಕು. ಉದ್ದೇಶಪೂರ್ವಕವಾಗಿ ವಿಳಂಬ ಮಾಡಿದರೆ ಕ್ರಮ ಕೈಗೊಳ್ಳಲಾಗುತ್ತದೆ ಎಂದರು.

ಸಿಬ್ಬಂದಿಯ ಹಿತ ಕಾಯಲು ಕ್ರಮ: ಸೆಸ್ಕ್ ಪ್ರಭಾರ ವ್ಯವಸ್ಥಾಪಕ ನಿರ್ದೇಶಕರಾದ ಕೆ.ಎಂ. ಮುನಿಗೋಪಾಲ್ ರಾಜು ಮಾತನಾಡಿ, ಸೆಸ್ಕ್ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುವ ಸಿಬ್ಬಂದಿಯ ಆರೋಗ್ಯ ಹಾಗೂ ಸುರಕ್ಷತೆಗೆ ಆದ್ಯತೆ ನೀಡಲು ಉದ್ದೇಶಿಸಲಾಗಿದೆ. ನಿಗಮದ ಎಲ್ಲ ಸಿಬ್ಬಂದಿಗೆ ಕ್ಯಾಶ್ ಲೆಸ್ ಹೆಲ್ತ್ ಕಾರ್ಡ್ ನೀಡಲಾಗುತ್ತದೆ. ಈ ಸೌಲಭ್ಯ ಕೇವಲ ಸಿಬ್ಬಂದಿಗೆ ಮಾತ್ರವಲ್ಲದೇ ಅವರ ಕುಟುಂಬದ ಎಲ್ಲ ಸದಸ್ಯರಿಗೆ ದೊರೆಯಲಿದೆ. ರಾಜ್ಯದ ಯಾವುದೇ ಎಸ್ಕಾಂಗಳಲ್ಲಿ ನೀಡದ ಸೌಲಭ್ಯವನ್ನು ಸೆಸ್ಕ್ ವತಿಯಿಂದ ಮೊದಲ ಬಾರಿಗೆ ನೀಡಲಾಗುತ್ತಿದೆ ಎಂದರು.

ಸಿಬ್ಬಂದಿಯ ಸುರಕ್ಷತೆ ದೃಷ್ಟಿಯಿಂದ ಸುರಕ್ಷತಾ ಸಾಮಗ್ರಿಗಳನ್ನು ಎಲ್ಲ ಸಿಬ್ಬಂದಿಗೆ ಇದೇ ಮೊದಲ ಬಾರಿಗೆ ಏಕಕಾಲದಲ್ಲಿ ನೀಡಿದ್ದು, ಅದರ ಸಮರ್ಪಕ ಬಳಕೆ ಮಾಡಿಕೊಳ್ಳಬೇಕು. ಪವರ್ ಮೆನ್ ಮತ್ತು ಸೆಕ್ಷನ್ ಅಧಿಕಾರಿಗಳು ಸಂಸ್ಥೆಯ ತಳಹದಿಯಾಗಿದ್ದು, ಗ್ರಾಹಕರೊಂದಿಗೆ ನೇರ ಸಂಪರ್ಕದಲ್ಲಿರುತ್ತಾರೆ. ಗ್ರಾಹಕರೊಂದಿಗೆ ಉತ್ತಮವಾಗಿ ವ್ಯವಹರಿಸುವುದರೊಂದಿಗೆ ನಿಗದಿತ ಸಮಯಕ್ಕೆ ಫೀಡರ್, ಟ್ರಾನ್ಸ್‌ಫಾರ್ಮರ್‌ಗಳ ನಿರ್ವಹಣೆ ಮಾಡಲು ಸಮರೋಪಾದಿಯಲ್ಲಿ ಕೆಲಸ ಮಾಡಬೇಕು. ವಿದ್ಯುತ್ ಅಪಘಾತ ಮತ್ತು ಅಡಚಣೆಯಾಗದಂತೆ ಹೆಚ್ಚಿನ ನಿಗಾವಹಿಸಿ ಕಾರ್ಯನಿರ್ವಹಿಸುವಂತೆ ಸಲಹೆ ನೀಡಿದರು.



ಮೈಸೂರು ವಿಶ್ವವಿದ್ಯಾನಿಲಯದ ಓವೆಲ್ ಮೈದಾನದಲ್ಲಿ ಗುರುವಾರ ಆಯೋಜಿಸಿದ್ದ ಕಾರ್ಮಿಕ ದಿನಾಚರಣೆ ಕಾರ್ಯಕ್ರಮದಲ್ಲಿ ಸೆಸ್ಕ್ ಸಿಬ್ಬಂದಿಗಳಿಗೆ ಸೆಸ್ಕ್ ಅಧ್ಯಕ್ಷರೂ ಆಗಿರುವ ಶಾಸಕ ರಮೇಶ್ ಬಂಡಿಸಿದ್ದೇಗೌಡ ಕ್ಯಾಶ್ ಲೆಸ್ ಹೆಲ್ತ್ ಕಾರ್ಡ್ ಹಾಗೂ ಸುರಕ್ಷತಾ ಸಾಮಗ್ರಿಗಳನ್ನು ವಿತರಿಸಿದರು

ಕ್ಯಾಶ್ ಲೆಸ್ ಹೆಲ್ತ್ ಕಾರ್ಡ್ ವಿಶೇಷತೆ

ಸೆಸ್ಕ್‌ನಲ್ಲಿ ಕಾರ್ಯನಿರ್ವಹಿಸುವ 6351 ಸಿಬ್ಬಂದಿ ಹಾಗೂ ಅವರ ಕುಟುಂಬದ 19,468 ಸದಸ್ಯರು ಸೇರಿದಂತೆ 25,819 ಮಂದಿಗೆ ಅನುಕೂಲವಾಗುವಂತೆ ಪ್ರತಿ ಕುಟುಂಬಕ್ಕೆ 2 ಲಕ್ಷ ರೂ.ಗಳ ಕ್ಯಾಶ್ ಲೆಸ್ ಹೆಲ್ತ್ ಕಾರ್ಡ್ ನೀಡಲಾಗಿದೆ. ಅಲ್ಲದೇ ಹೆಚ್ಚುವರಿ ವೆಚ್ಚಗಳಿಗೆ 3 ಕೋಟಿ ರೂ.ಗಳನ್ನು ಮೀಸಲಿಡಲಾಗಿದೆ. ಈ ಯೋಜನೆಯನ್ನು ಜಾರಿಯಾದ ದಿನದಿಂದ ಇದುವರೆಗೂ 147 ಪ್ರಕರಣಗಳಲ್ಲಿ 43 ಸಿಬ್ಬಂದಿ ಹಾಗೂ 104 ಮಂದಿ ಅವಲಂಬಿತರು ಇದರ ಲಾಭ ಪಡೆದಿದ್ದು, 94 ಲಕ್ಷ ರೂ.ಗಳನ್ನು ಈಗಾಗಲೇ ವಿತರಿಸಲಾಗಿದೆ. ಕ್ಯಾಶ್ ಲೆಸ್ ಹೆಲ್ತ್ ಕಾರ್ಡ್ ಮೂಲಕ ರಾಜ್ಯದ 1413 ಖಾಸಗಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯಬಹುದಾಗಿದೆ.

ಕಾರ್ಯಕ್ರಮದಲ್ಲಿ ಸೆಸ್ಕ್ ನಿವೃತ್ತ ವ್ಯವಸ್ಥಾಪಕ ನಿರ್ದೇಶಕಿ ಜಿ.ಶೀಲಾ, ಮುಖ್ಯ ಆರ್ಥಿಕ ಅಧಿಕಾರಿ ರೇಣುಕಾ, ಅಧೀಕ್ಷಕ ಇಂಜಿನಿಯರ್ ಸುನೀಲ್, ಜಾಗೃತ ದಳದ ಎಸ್ಪಿ ಸವಿತಾ ಹೂಗಾರ್, ಪ್ರಧಾನ ವ್ಯವಸ್ಥಾಕರುಗಳಾದ ಡಾ. ವಿ.ಆರ್. ರೂಪ, ಲಿಂಗರಾಜಮ್ಮ, ಎಲ್.ಲೋಕೇಶ್, ಕೆಪಿಟಿಸಿಎಲ್ ನೌಕರರ ಸಂಘದ ಸಂದೀಪ್, ಇಂಜಿನಿಯರ್ಸ್ ಅಸೋಸಿಯೇಷನ್ ಉಪಾಧ್ಯಕ್ಷ ಚಿಕ್ಕಸಿದ್ದೇಗೌಡ, ರವಿಲಿಂಗಪ್ಪ ಮಾದೇಶ್ ಇನ್ನಿತರರು ಉಪಸ್ಥಿತರಿದ್ದರು.

ನಾಳೆ ಬನ್ನೂರಿನಲ್ಲಿ ವ್ಯಾಸರಾಜರ 577ನೇ ವರ್ಧಂತಿ



ಮೈಸೂರು, ಮೇ 2– ವಿಜಯನಗರ ವೀರ ಸಿಂಹಾಸನಾಧೀಶರಾಗಿ ಕರ್ನಾಟಕದ ಪರಂಪರೆಗೆ ಅನನ್ಯ ಕೊಡುಗೆ ನೀಡಿದ ಶ್ರೀ ವ್ಯಾಸರಾಜರ ಮಹಾ ಸಂಸ್ಥಾನದ ಗುರು ಸಾರ್ವಭೌಮರಾದ ಶ್ರೀ ವ್ಯಾಸರಾಜರ 577 ನೇ ವರ್ಧಂತಿ (ಜಯಂತಿ) ಮಹೋತ್ಸವವನ್ನು ಮೇ 4ರಂದು ಬನ್ನೂರಿನ ಶ್ರೀ ಜನ್ಮಾಂಜನೇಯ ಸ್ವಾಮಿ ಸನ್ನಿಧಿಯಲ್ಲಿ ಹಮ್ಮಿಕೊಳ್ಳಲಾಗಿದೆ.

ಅಂದು ಬೆಳಗ್ಗೆ ಸೋಸಲೆ ಮಠಾಧೀಶರಾದ ಶ್ರೀ ವಿದ್ಯಾಶ್ರೀಶ ತೀರ್ಥ ಸ್ವಾಮೀಜಿ ಸಾನ್ನಿಧ್ಯದಲ್ಲಿ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ಜರುಗಲಿದ್ದು, ಬೆಳಗ್ಗೆ 6ಕ್ಕೆ ಮಹಾಸಂಕಲ್ಪ ಪೂರ್ವಕ ಪ್ರಾರ್ಥನೆ, 6.30ಕ್ಕೆ ಗೋಪೂಜೆ, ಚತುರ್ವೇದ ಪಾರಾಯಣ, 7ಕ್ಕೆ ಗಂಗಾ ಪೂಜೆ, 8ರಿಂದ ಶ್ರೀಗಳಿಂದ ಸಂಸ್ಥಾನ ಪೂಜೆ, ಶ್ರೀ ಹರಿ ವಾಯು ಸ್ತುತಿ ಪುನಶ್ಚರಣ, ಮಹಾ ಪಂಚಾಮೃತ ಅಭಿಷೇಕ, ಶ್ರೀ ವಿದ್ಯಾಶ್ರೀಶ ತೀರ್ಥರಿಗೆ ಯತಿ ಪಾದಪೂಜೆ ನೆರವೇರಲಿದೆ. ವಿವಿಧ ಪಂಡಿತರಿಂದ ಶ್ರೀ ವ್ಯಾಸರಾಜ ಗುರುಸಾರ್ವಭೌಮರ ಜೀವನ–ಸಾಧನ, ಸಂದೇಶಗಳ ಸಂಸ್ಮರಣೆ, ಪ್ರವಚನ, ನಂತರ ಶ್ರೀಗಳಿಂದ ಅನುಗ್ರಹ ಸಂದೇಶವಿದೆ. ಸಂಜೆ 8ಕ್ಕೆ ದೇಗುಲದಲ್ಲಿ ದೀಪೋತ್ಸವ, ಪ್ರಾಕಾರೋತ್ಸವ ಹಮ್ಮಿಕೊಳ್ಳಲಾಗಿದೆ. ಹೆಚ್ಚಿನ ಮಾಹಿತಿಗೆ ಮೊ.ಸಂ.9845450219 ಸಂಪರ್ಕಿಸಲು ಶ್ರೀಮಠದ ಪ್ರಕಟಣೆ ತಿಳಿಸಿದೆ.




















ಮೈಸೂರು ಮಿತ್ರ 46
ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

